ಸೋಮವಾರ, ಆಗಸ್ಟ್ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 238 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ದೌರ್ಜನ್ಯ ತಡೆ: ಕಾಯ್ದೆಗೆ ಇನ್ನಷ್ಟು ಬಲ’ 9

ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಗಣೇಶ ಚತುರ್ಥಿ ಅಂಗವಾಗಿ ಮುಂಬೈನಲ್ಲಿ ಭಕ್ತರು ಭಾನುವಾರ ಪೆಂಡಾಲ್‌ಗೆ ತಂದ ಗಣೇಶನ ಮೂರ್ತಿ

ಕೃಷ್ಣ ಪಟ್ಟಣಂ ಬಂದರಿನಲ್ಲಿ ಸಂಗ್ರಹ • ತೆರವಿಗಾಗಿ ಸರ್ಕಾರಕ್ಕೆ ಅದಾನಿ ಪೋರ್ಟ್ಸ್ ನೋಟಿಸ್

ಮರಳು: ₹76 ಕೋಟಿ ಹೊರೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಆಂಧ್ರ ಪ್ರದೇಶದ ಕೃಷ್ಣ ಪಟ್ಟಣಂ ಬಂದರಿನಲ್ಲಿ ದಾಸ್ತಾನು ಮಾಡಿರುವ 89 ಸಾವಿರ ಟನ್ ಮರಳನ್ನು ಏಳು ವರ್ಷಗಳಿಂದ ತೆರವುಗೊಳಿಸದ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿರುವ ಅದಾನಿ ಪೋರ್ಟ್ಸ್ ಕಂಪನಿ, ದಾಸ್ತಾನು ಶುಲ್ಕ ₹76 ಕೋಟಿ ಪಾವತಿಸುವಂತೆ ಸೂಚಿಸಿದೆ.

ರಾಜ್ಯದಲ್ಲಿನ ಮರಳು ಕೊರತೆ ನೀಗಿಸಲು 2017ರಲ್ಲಿ ಆಮದು ಮಾಡಿಕೊಂಡಿದ್ದ ಮಲೇಷ್ಯಾ ಮರಳನ್ನು ದಂಡ ಪಾವತಿಸಿ, ತಕ್ಷಣ ತೆರವು ಮಾಡಬೇಕು. ಇಲ್ಲದಿದ್ದರೆ ಹರಾಜು ಹಾಕಲಾಗುವುದು ಎಂದು ಬಂದರಿನ ಒಡೆತನ ಹೊಂದಿರುವ ಅದಾನಿ ಕಂಪನಿ ನೋಟಿಸ್ ನೀಡಿದೆ.

ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಮತ್ತು ಇತರ ಎಂಟು ಖಾಸಗಿ ಕಂಪನಿಗಳು ವಿದೇಶದಿಂದ ಆಮದು ಮಾಡಿಕೊಳ್ಳಲು ಪರವಾನಗಿ ಪಡೆದುಕೊಂಡಿದ್ದವು. ಅವುಗಳಲ್ಲಿ ಎಂಎಸ್‌ಐಎಲ್, ಚೆನ್ನೈನ ಇಂಟಿಗ್ರೇಟೆಡ್ ಸರ್ವಿಸ್ ಪಾಯಿಂಟ್, ಟಿಎಂಟಿ ಮತ್ತು ಆಕಾರ್ ಎಂಟರ್‌ಪ್ರೈಸಸ್ ಕಂಪನಿಗಳು ಮರಳು ಆಮದು ಮಾಡಿಕೊಂಡಿದ್ದವು. ಜಾಗತಿಕ ಟೆಂಡರ್ ಮೂಲಕ ಎಂಎಸ್‌ಐಎಲ್ ಮಲೇಷ್ಯಾದಿಂದ ಎರಡು ಬಾರಿ 1.03 ಲಕ್ಷ ಟನ್ ಮರಳು ಆಮದು ಮಾಡಿಕೊಂಡಿತ್ತು. ದುಬೈ ಮತ್ತು ಮಲೇಷ್ಯಾದ ಕಂಪನಿಗಳು ಬಂದರಿಗೆ ಮರಳು ಪೂರೈಸಿದ್ದವು. ಎಂಎಸ್‌ಐಎಲ್ ಇದಕ್ಕಾಗಿ ₹28 ಕೋಟಿ ವ್ಯಯಿಸಿತ್ತು. ಈಗ ಮರಳು ವ್ಯರ್ಥವಾಗಿದ್ದಲ್ಲದೆ ಮೂರು ಪಟ್ಟು ದಂಡ ಕಟ್ಟುವ ಸ್ಥಿತಿ ಬಂದಿದೆ.

ಬಂದರಿಗೆ ಬಂದ ಮರಳಿನಲ್ಲಿ ಸ್ವಲ್ಪ ಪ್ರಮಾಣವನ್ನು ರೈಲ್ವೆ ರೇಕ್‌ಗಳ ಮೂಲಕ ಬೆಂಗಳೂರಿಗೆ ತಂದು, ಪ್ರತಿ ಟನ್‌ಗೆ ₹4 ಸಾವಿರ ದರ ನಿಗದಿ ಮಾಡಿ 50 ಕೆ.ಜಿ. ಚೀಲದಲ್ಲಿ ಬ್ರಾಂಡೆಡ್ ಮರಳಿನ ಮಾರಾಟ ಆರಂಭಿಸಲಾಗಿತ್ತು. ದರ ಹೆಚ್ಚಾಯಿತು ಎಂಬ ಕಾರಣಕ್ಕೆ ಟ್ರಕ್‌ಗಳಲ್ಲೇ ಗ್ರಾಹಕರಿಗೆ ಸರಬರಾಜು ಮಾಡಲಾಗಿತ್ತು. ಕೋವಿಡ್ ನಂತರ ಟನ್ ಧಾರಣೆ ಕುಸಿದಿತ್ತು. ಮಾರಾಟವಾದ ಒಟ್ಟು ಮರಳು 14 ಸಾವಿರ ಟನ್ ಮಾತ್ರ. ಉಳಿದ 89 ಸಾವಿರ ಟನ್ ಕೃಷ್ಣಪಟ್ಟಣಂ ಬಂದರಿನಲ್ಲೇ ಉಳಿದಿದೆ. ಎಂಎಸ್‌ಐಎಲ್‌ಗೆ ಮರಳಿನಿಂದ ದೊರೆತ ಅಸಲು ಕೇವಲ ₹68 ಲಕ್ಷ.

ಅಂಕಿ ಅಂಶಗಳು

1.03 ಲಕ್ಷ ಟನ್ — ಮಲೇಷ್ಯಾದಿಂದ ಆಮದಾದ ಮರಳು

₹28 ಕೋಟಿ — ಎಂಎಸ್‌ಐಎಲ್ ವ್ಯಯಿಸಿದ ಮೊತ್ತ

₹68 ಲಕ್ಷ — ಮರಳು ಮಾರಾಟದಿಂದ ಬಂದ ಹಣ

89 ಸಾವಿರ ಟನ್ — ಕೃಷ್ಣಪಟ್ಟಣಂನಲ್ಲಿ ದಾಸ್ತಾನಿರುವ ಮರಳು

₹76 ಕೋಟಿ — ಅದಾನಿ ಕಂಪನಿ ವಿಧಿಸಿದ ದಾಸ್ತಾನು ದಂಡ

ಅದಾನಿ ಪೋರ್ಟ್ಸ್ ಕಂಪನಿ ನೋಟಿಸ್ ನೀಡಿದೆ. ದಾಸ್ತಾನು ಹರಾಜು ಹಾಕಿದರೆ ₹10 ಕೋಟಿಯೂ ಬರುವುದಿಲ್ಲ. ಅವರಿಗೆ ₹76 ಕೋಟಿ ನೀಡಲು ಹೇಗೆ ಸಾಧ್ಯ?
ಮನೋಜ್ ಕುಮಾರ್
ವ್ಯವಸ್ಥಾಪಕ ನಿರ್ದೇಶಕ, ಎಂಎಸ್‌ಐಎಲ್

ಕಾಂಗ್ರೆಸ್ ಸರ್ಕಾರ ತರಾತುರಿಯಲ್ಲಿ ಮರಳು ಆಮದು ಮಾಡಿಕೊಂಡಿದ್ದರಿಂದ ಕೋಟ್ಯಂತರ ನಷ್ಟವಾಗಿದೆ. ಬಂದರಿನಲ್ಲೇ ಹರಾಜು ಹಾಕುವಂತೆ ಸಮಿತಿ ವರದಿ ನೀಡಿತ್ತು
ಎಚ್. ಹಾಲಪ್ಪ ಹರತಾಳು
ಎಂಎಸ್‌ಐಎಲ್ ಮಾಜಿ ಅಧ್ಯಕ್ಷ

ನಿಯಮ ತಿದ್ದುಪಡಿಗೆ ನಿರ್ಣಯ

ರಾಜ್ಯದಲ್ಲಿನ ಮರಳು ಕೊರತೆ ನೀಗಿಸಲು ಸರ್ಕಾರ 2017ರಲ್ಲಿ ಆಮದು ನೀತಿ ರೂಪಿಸಿತ್ತು. ವರ್ಷಕ್ಕೆ ಮೂರು ಲಕ್ಷ ಟನ್ ಮರಳು ಆಮದು ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿತ್ತು.

ಅಂದು ರೂಪಿಸಿದ್ದ ನಿಯಮದಂತೆ ಆಮದು ಮಾಡಿಕೊಂಡ ಮರಳನ್ನು ರಾಜ್ಯದಲ್ಲೇ ಮಾರಾಟ ಮಾಡುವ ಷರತ್ತು ವಿಧಿಸಲಾಗಿತ್ತು. ಮಲೇಷ್ಯಾದ 1.03 ಲಕ್ಷ ಟನ್ ಮರಳಿನಲ್ಲಿ 89 ಸಾವಿರ ಟನ್ ಕೃಷ್ಣಪಟ್ಟಣಂ ಬಂದರಿನಲ್ಲೇ ಉಳಿದಿದೆ. ರಾಜ್ಯದಲ್ಲಿ ಬೇಡಿಕೆ ಇಲ್ಲದಿರುವ ಕಾರಣ ಅಲ್ಲೇ ಹರಾಜು ಹಾಕಲು ನಿಯಮಕ್ಕೆ ತಿದ್ದುಪಡಿ ತರುವಂತೆ ರಾಜ್ಯ ಸರ್ಕಾರವನ್ನು ಕೋರಲು ಎಂಐಎಸ್‌ಎಲ್ ಆಡಳಿತ ಮಂಡಳಿ ಸಭೆ ನಿರ್ಣಯ ಅಂಗೀಕರಿಸಿದೆ.

ಸಂಧಾನಕ್ಕೆ ತೆರಳಲಿದೆ ತಂಡ

ಮಲೇಷ್ಯಾದಿಂದ ಆಮದು ಮಾಡಿಕೊಂಡ ಮರಳನ್ನು ಮೊದಲ ಹಂತದಲ್ಲಿ ದಾಸ್ತಾನು ಮಾಡಲು ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಪೂರ್ವ ಕರಾವಳಿಯಲ್ಲಿರುವ ಕೃಷ್ಣಪಟ್ಟಣಂ ಬಂದರಿನ ಮಾಲೀಕತ್ವ ಹೊಂದಿದ್ದ ‘ಕೃಷ್ಣ ಪಟ್ಟಣಂ ಪೋರ್ಟ್ ಕಂಪನಿ (ಕೆಪಿಸಿಎಲ್)’ ಜೊತೆ ಒಪ್ಪಂದ ಮಾಡಿಕೊಂಡಿತ್ತು.

ಒಪ್ಪಂದದಂತೆ ದಾಸ್ತಾನು ಶುಲ್ಕ ನೀಡದೆ, ಮಾರಾಟ ಮಾಡಿದ ಲಾಭಾಂಶದಲ್ಲಿ ಶೇ 5ರಷ್ಟು ನೀಡಬೇಕಿತ್ತು. 2020ರಿಂದ ಬಂದರಿನ ಮಾಲೀಕತ್ವ ಅದಾನಿ ಪೋರ್ಟ್ಸ್ ಕಂಪನಿಗೆ ಬದಲಾಗಿದೆ. ಏಳು ವರ್ಷಗಳಿಂದ ದಾಸ್ತಾನು ತೆರವಾಗದೇ ಇರುವುದಕ್ಕೆ ಅದಾನಿ ಕಂಪನಿ ತಕರಾರು ತೆಗೆದಿದೆ.

‘ಬಂದರಿನ ಮಾಲೀಕತ್ವ ಹೊಂದಿದ್ದ ಕಂಪನಿ ಜೊತೆ ಮಾಡಿಕೊಂಡ ಒಪ್ಪಂದದಂತೆ ದಾಸ್ತಾನು ಶುಲ್ಕ ಪಾವತಿಸಲು ಸಾಧ್ಯವಿಲ್ಲ. ಪಾಲು ಕೊಡಲು ಲಾಭಕ್ಕಿಂತ ನಷ್ಟವೇ ಹೆಚ್ಚಾಗಿದೆ. ಹಾಗಾಗಿ, ದಂಡ ಪಾವತಿಸಲು ಸಾಧ್ಯವಿಲ್ಲ’ ಎಂದು ನೋಟಿಸ್‌ಗೆ ಉತ್ತರ ನೀಡಿರುವ ಎಂಎಸ್‌ಐಎಲ್, ಸಂಧಾನಕ್ಕಾಗಿ ನಿಗಮದ ಪ್ರಧಾನ ವ್ಯವಸ್ಥಾಪಕರ ನೇತೃತ್ವದ ತಂಡವನ್ನು ಆಂಧ್ರಪ್ರದೇಶಕ್ಕೆ ಕಳುಹಿಸುತ್ತಿದೆ.

ಬೆಂಬಲ ಹಿಂದುಳಿದ ವರ್ಗ ಮತ್ತು ದಲಿತ ಹಾಗೂ ಶೋಷಿತ ಸಮುದಾಯಗಳ ಸ್ವಾಮೀಜಿಗಳ ಒಕ್ಕೂಟದ ಪ್ರತಿನಿಧಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭಾನುವಾರ ಭೇಟಿಯಾಗಿ ತಮ್ಮ ನೈತಿಕ ಬೆಂಬಲ ಘೋಷಿಸಿದರು

ವಿವರ 08

ರಾಜಕೀಯ ತಿರುವು; ಪೊಲೀಸರಿಂದ ಲಘು ಲಾಠಿ ಪ್ರಹಾರ

ಕೆಪಿಎಸ್‌ಸಿ ಪರೀಕ್ಷೆ ಮುಂದೂಡಿಕೆ ಆಗ್ರಹಿಸಿ ಪೊಲೀಸ್ ಠಾಣೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ನೇಮಕಾತಿಗೆ ಕೆಪಿಎಸ್‌ಸಿ ಇದೇ 27ರಂದು ನಡೆಸಲು ಉದ್ದೇಶಿಸಿರುವ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡುವಂತೆ ಆಗ್ರಹಿಸಿ ಅಭ್ಯರ್ಥಿಗಳು ನಡೆಸುತ್ತಿರುವ ಪ್ರತಿಭಟನೆ ರಾಜಕೀಯ ಸ್ವರೂಪ ಪಡೆದುಕೊಂಡಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎರಡು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳು ರಾಜ್ಯಪಾಲರಿಗೆ ಭಾನುವಾರ ಮನವಿ ಸಲ್ಲಿಸಲು ತೆರಳುವಾಗ ಪೊಲೀಸರು ವಶಕ್ಕೆ ಪಡೆದರು. ಪೊಲೀಸರ ಕ್ರಮವನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಧೀರಜ್ ಮುನಿರಾಜು ನೇತೃತ್ವದಲ್ಲಿ ಕಾರ್ಯಕರ್ತರು ವಿಜಯನಗರ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕೆಲವು ಅಭ್ಯರ್ಥಿಗಳು ಮತ್ತು ಯುವ ಮೋರ್ಚಾ ಕಾರ್ಯಕರ್ತರು ಠಾಣೆಯ ಒಳಗೆ ನುಗ್ಗಲು ಯತ್ನಿಸಿದರು. ಗುಂಪು ಚದುರಿಸಲು ಪೊಲೀಸರು ಲಾಠಿ ಬೀಸಿದರು. ಆಗ ಕೆಲವರಿಗೆ ಲಾಠಿ ಏಟು ಬಿದ್ದು ಗಾಯಗಳಾದವು.

4ನೇ ಪುಟ ನೋಡಿ

ರಾಜ್ಯಪಾಲರಿಗೆ ಬಿಜೆಪಿ ಮನವಿ

ಕೆಪಿಎಸ್‌ಸಿ ಪರೀಕ್ಷೆಯನ್ನು ಮುಂದೂಡಬೇಕು ಎಂದು ಕೋರಿ ಸಂಸದ ತೇಜಸ್ವಿಸೂರ್ಯ ನೇತೃತ್ವದಲ್ಲಿ ಬಿಜೆಪಿ ಯುವ ಮುಖಂಡರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದರು.

ಪರೀಕ್ಷೆ ಏಕೆ ಮುಂದೂಡಬೇಕು ಎನ್ನುವ ಕುರಿತು ರಾಜ್ಯಪಾಲರಿಗೆ ವಿವರಿಸಿದರು. ಮಾತುಗಳನ್ನು ಆಲಿಸಿದ ಗೆಹಲೋತ್ ಸರ್ಕಾರಕ್ಕೆ ಸೂಕ್ತ ಸೂಚನೆ ನೀಡುವುದಾಗಿ ಭರವಸೆ ನೀಡಿದರು. ಯುವ ಮೋರ್ಚಾ ರಾಜ್ಯ ಅಧ್ಯಕ್ಷ ಧೀರಜ್ ಮುನಿರಾಜ್ ಮತ್ತಿತರರು ಜೊತೆಗೆ ಇದ್ದರು.

ಲೆಬನಾನ್ ಮೇಲೆ ಇಸ್ರೇಲ್‌ನಿಂದ ವಾಯುದಾಳಿ

ಜೆರುಸಲೇಂ (ಎಪಿ): ಹಿಜ್ಬುಲ್ಲಾ ಗುಂಪು ಪ್ರತೀಕಾರದ ದಾಳಿಯ ಘೋಷಣೆ ಪ್ರಕಟಿಸಿದ ಬೆನ್ನಲ್ಲೇ ದಕ್ಷಿಣ ಲೆಬನಾನ್‌ನ ನಗರಗಳನ್ನು ಗುರಿಯಾಗಿರಿಸಿ ಭಾನುವಾರ ಬೆಳಿಗ್ಗೆ ಇಸ್ರೇಲ್ ಭಾರಿ ಪ್ರಮಾಣದಲ್ಲಿ ವಾಯುದಾಳಿ ನಡೆಸಿತು.

‘ವಾಯುದಾಳಿಯಲ್ಲಿ 100 ಯುದ್ಧ ವಿಮಾನಗಳು ಭಾಗಿಯಾಗಿದ್ದವು’ ಎಂದು ಇಸ್ರೇಲ್‌ನ ಸೇನಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಶೋಶನಿ ತಿಳಿಸಿದ್ದಾರೆ.

‘ಉತ್ತರ ಇಸ್ರೇಲ್‌ನ ನಗರ, ನಾಗರಿಕರನ್ನು ಗುರಿಯಾಗಿರಿಸಿಕೊಂಡು ದಾಳಿಗೆ ಸಜ್ಜಾಗಿದ್ದ ಹಿಜ್ಬುಲ್ಲಾದ ಸಾವಿರಾರು ರಾಕೆಟ್‌ಗಳನ್ನು ಸೇನೆಯು ನಾಶಪಡಿಸಿದೆ’ ಎಂದು ಇಸ್ರೇಲ್‌ನ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದರು.

ಇನ್ನಷ್ಟು ಸುದ್ದಿಗಳು 10

ಜೈಲಲ್ಲಿ ಸಿಗರೇಟ್ ಸೇದುತ್ತಾ ಹರಟೆ • ಫೋಟೊ ಬಹಿರಂಗ

ದರ್ಶನ್‌ಗೆ ವಿಶೇಷ ಆತಿಥ್ಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿಯಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಜೈಲಿನ ಒಳಗೆ ಸಹಚರರ ಜೊತೆ ಕುರ್ಚಿ ಮೇಲೆ ಕುಳಿತು ಕಾಫಿ ಹೀರುತ್ತಾ, ಸಿಗರೇಟ್ ಸೇದುತ್ತಿದ್ದಾರೆ ಎನ್ನಲಾದ ಫೋಟೊ ಬಹಿರಂಗವಾಗಿದೆ.

ಫೋಟೊ ಬಹಿರಂಗವಾದ ಬೆನ್ನಲ್ಲೆ, ಜೈಲಿನಲ್ಲಿ ದರ್ಶನ್‌ಗೆ ವಿಶೇಷ ಆತಿಥ್ಯ ನೀಡುತ್ತಿರುವ ಆರೋಪ ಕೇಳಿಬಂದಿದೆ. ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಹಿರಿಯ ಅಧಿಕಾರಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾ ಗೃಹಕ್ಕೆ ಭಾನುವಾರ ಸಂಜೆಯೇ ಭೇಟಿ ನೀಡಿದ್ದು, ತನಿಖೆ ಆರಂಭಿಸಿದ್ದಾರೆ.

ಕಾರಾಗೃಹದ ಅತಿ ಭದ್ರತಾ ಬ್ಯಾರಕ್‌ನಲ್ಲಿ ದರ್ಶನ್ ಅವರನ್ನು 65 ದಿನಗಳಿಂದ ಇರಿಸಲಾಗಿದೆ. ಬ್ಯಾರಕ್ ಹೊರಗೆ ಕುರ್ಚಿಯಲ್ಲಿ ಕುಳಿತಿರುವ ದರ್ಶನ್, ಒಂದು ಕೈಯಲ್ಲಿ ಕಾಫಿ ಮಗ್ ಮತ್ತು ಇನ್ನೊಂದು ಕೈಯಲ್ಲಿ ಸಿಗರೇಟ್ ಹಿಡಿದಿರುವುದು ಬಹಿರಂಗಗೊಂಡಿರುವ ಫೋಟೊದಲ್ಲಿ ಕಾಣಿಸುತ್ತಿದೆ. ರೌಡಿ ಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ್, ಕೊಲೆ ಪ್ರಕರಣದಲ್ಲಿ ಬಂಧನದಲ್ಲಿರುವ ದರ್ಶನ್ ಮ್ಯಾನೇಜರ್ ನಾಗರಾಜ್ ಹಾಗೂ ಮತ್ತೊಬ್ಬ ಆರೋಪಿ ಕುಳ್ಳ ಸೀನಾ ಜೊತೆಯಲ್ಲಿ ನಗುತ್ತಾ ಮಾತುಕತೆ ನಡೆಸುತ್ತಿದ್ದಾರೆ.

9ನೇ ಪುಟ ನೋಡಿ

ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ಫೋಟೊ

‘ತಪ್ಪು ನಡೆದಿದ್ದರೆ ಕ್ರಮ’

‘ದರ್ಶನ್‌ಗೆ ಜೈಲಿನಲ್ಲಿ ವಿಶೇಷ ಆತಿಥ್ಯ ನೀಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಫೋಟೊವನ್ನು ಮಾಧ್ಯಮಗಳ ಮೂಲಕ ನೋಡಿದ್ದೇನೆ. ಪ್ರಕರಣದ ಬಗ್ಗೆ ತನಿಖೆಗೆ ಆದೇಶಿಸಿದ್ದು, ತಪ್ಪು ನಡೆದಿದ್ದರೆ ಅದಕ್ಕೆ ಕಾರಣರಾಗಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಕಾರಾಗೃಹಗಳು ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಪೊಲೀಸ್ ಮಹಾನಿರ್ದೇಶಕಿ ಮಾಲಿನಿ ಕೃಷ್ಣಮೂರ್ತಿ ಅವರು ತಿಳಿಸಿದರು.

9ನೇ ಪುಟ ನೋಡಿ

ಆರೋಪಿ ಸಂಜಯ್‌ಗೆ ಸುಳ್ಳುಪತ್ತೆ ಪರೀಕ್ಷೆ

ನವದೆಹಲಿ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಸಂಜಯ್ ರಾಯ್‌ನನ್ನು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲಾಗಿದೆ.

ಕೋಲ್ಕತ್ತದ ಪ್ರೆಸಿಡೆನ್ಸಿ ಜೈಲಿನಲ್ಲಿ ಈತನನ್ನು ಇರಿಸಲಾಗಿದ್ದು, ಅಲ್ಲಿಯೇ ಈ ಪರೀಕ್ಷೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಜಯ್ ಸೇರಿದಂತೆ ಒಟ್ಟು ಏಳು ಮಂದಿಯನ್ನು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲು ಸಿಬಿಐ ಅಧಿಕಾರಿಗಳು ನ್ಯಾಯಾಲಯದ ಅನುಮತಿ ಪಡೆದಿದ್ದಾರೆ. ಈ ಪರೀಕ್ಷೆಯ ಮೂಲಕ ಸಿಗುವ ಮಾಹಿತಿಯನ್ನು ಸಾಕ್ಷ್ಯವಾಗಿ ಪರಿಗಣಿಸಲು ಕಾನೂನಿನ ಅಡಿ ಅವಕಾಶ ಇಲ್ಲ. ಆದರೆ, ಪರೀಕ್ಷೆಯ ಸಂದರ್ಭದಲ್ಲಿ ಆರೋಪಿಗಳು ನೀಡುವ ಮಾಹಿತಿಯು ತನಿಖಾಧಿಕಾರಿಗಳಿಗೆ ಮುಂದಡಿ ಇರಿಸುವುದಕ್ಕೆ ನೆರವಾಗುತ್ತದೆ.

ನವದೆಹಲಿಯ ಕೇಂದ್ರ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸುಳ್ಳುಪತ್ತೆ ಪರೀಕ್ಷೆ ನಡೆಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಾಜ್ಯದಲ್ಲಿ ನಿಯಂತ್ರಣಕ್ಕೆ ಬಾರದ ಅಪರಾಧ ಕೃತ್ಯಗಳು

7 ತಿಂಗಳಲ್ಲಿ 340 ಅತ್ಯಾಚಾರ ಪ್ರಕರಣ

• ಹರಿಶಂಕರ ಆರ್.

ಬಳ್ಳಾರಿ: ದೇಶದ ವಿವಿಧೆಡೆ ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಹತ್ಯೆ ಪ್ರಕರಣಗಳು ಹೆಚ್ಚುತ್ತಿದ್ದು, ರಾಜ್ಯದಲ್ಲೂ ಕೂಡ ಇಂತಹ ಪ್ರಕರಣಗಳು ನಿಯಂತ್ರಣಕ್ಕೆ ಬಂದಿಲ್ಲ. ಪ್ರಸಕ್ತ ವರ್ಷ ಜುಲೈ ತಿಂಗಳವರೆಗೆ ರಾಜ್ಯದಲ್ಲಿ 340 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ.

ಪೊಲೀಸ್ ಇಲಾಖೆ ಪ್ರಕಾರ, 234 ಅತ್ಯಾಚಾರ ಪ್ರಕರಣಗಳು ವಿಚಾರಣಾ ಹಂತದಲ್ಲಿವೆ ಮತ್ತು 106 ಪ್ರಕರಣಗಳ ವಿಚಾರಣೆ ಇನ್ನೂ ಆಗಬೇಕಿದೆ. ಈ ವರ್ಷ ಜುಲೈವರೆಗೆ 2,089 ಪೋಕ್ಸೊ ಪ್ರಕರಣಗಳು ದಾಖಲಾಗಿವೆ. ಈ ಪೈಕಿ 1,015 ಪ್ರಕರಣಗಳು ವಿಚಾರಣೆ ಹಂತದಲ್ಲಿವೆ, 1,074 ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. 3,643 ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ

2023ರಲ್ಲಿ ಒಟ್ಟು 3,863 ಪೋಕ್ಸೊ ಪ್ರಕರಣ ಮತ್ತು 607 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದವು. 2022ರಲ್ಲಿ ಪೋಕ್ಸೊದ 3,194 ಮತ್ತು ಅತ್ಯಾಚಾರದ 537 ಪ್ರಕರಣಗಳು ದಾಖಲಾಗಿದ್ದವು.

‘ಮಹಿಳೆಯರ ಮೇಲೆ ಬೇರೆ ಬೇರೆ ಸ್ವರೂಪದಲ್ಲಿ ದೌರ್ಜನ್ಯ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿ. ಕೆಲವಡೆ ರಾಜಕೀಯ ಪ್ರಭಾವವೂ ದಟ್ಟವಾಗಿದೆ. ಹಾಸನದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳೇ ಸಾಕ್ಷಿ. ಮಹಿಳೆಯರ ರಕ್ಷಣೆ ಮತ್ತು ಅಪರಾಧಗಳ ನಿಯಂತ್ರಣಕ್ಕೆ ಸಾಮಾಜಿಕ, ಸಾಂಸ್ಕೃತಿಕ ಹೋರಾಟಗಳು ನಡೆಯಬೇಕಿದೆ’ ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಮಂಜುಳಾ ಎಂ.ಎನ್ ‘ಪ್ರಜಾವಾಣಿ’ಗೆ ತಿಳಿಸಿದರು.

ನಿರ್ಭಯಾ ಘಟನೆ ನಂತರ ರಚನೆಯಾದ ವರ್ಮಾ ಸಮಿತಿಯ ಶಿಫಾರಸು ಯಥಾವತ್ ಜಾರಿಯಾಗಬೇಕು. ಆಗಲಾದರೂ ದೌರ್ಜನ್ಯಗಳು ನಿಲ್ಲಬಹುದು
ಮಂಜುಳಾ ಎಂ. ಎನ್, ಅಧ್ಯಕ್ಷೆ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ರಾಜ್ಯ ಘಟಕ

ಹಾಸ್ಟೆಲ್ ಮತ್ತು ಇತರೆ ಸಂಸ್ಥೆಗಳಲ್ಲಿ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿ ಪ್ರಮಾಣಿತ ಕಾರ್ಯಾಚರಣೆಯ ವಿಧಾನ (ಎಸ್‌ಒಪಿ) ಪಾಲನೆ ಆಗುತ್ತಿಲ್ಲ. ಇದಕ್ಕಾಗಿ ಒತ್ತಾಯಿಸಿದರೂ ಪ್ರಯೋಜನವಾಗಿಲ್ಲ
ಡಾ.ನಾಗಲಕ್ಷ್ಮಿ ಚೌಧರಿ, ಅಧ್ಯಕ್ಷೆ, ರಾಜ್ಯ ಮಹಿಳಾ ಆಯೋಗ

ಸಹಾಯವಾಣಿ ಸೌಲಭ್ಯ

‘ಮಹಿಳೆ ಮತ್ತು ಮಕ್ಕಳ ಸುರಕ್ಷತೆಗೆ ಪ್ಯಾನಿಕೋಡ್, ಪಿಂಕ್ ಹೊಯ್ಸಳ, ಮಹಿಳಾ ಠಾಣೆ, ಮಹಿಳಾ ವಿಶೇಷ ಪೊಲೀಸ್ ಪಡೆಗಳ ರಚನೆ ಜೊತೆಗೆ ಬೀಟ್ ವ್ಯವಸ್ಥೆ ಬಿಗಿಗೊಳಿಸಲಾಗಿದೆ. ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ತುರ್ತು ಮತ್ತು ಅಗತ್ಯ ಸಂದರ್ಭದಲ್ಲಿ ಮಹಿಳಾ ಸಹಾಯವಾಣಿ ಸಂಪರ್ಕಿಸಬಹುದು: 1091 ಅಥವಾ 080-22943225.

‘ಲಂಗೋಟಿ ಮ್ಯಾನ್ ಚಿತ್ರ ತಂಡ ಕ್ಷಮೆಯಾಚಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಂಗೋಟಿ ಮ್ಯಾನ್ ಸಿನಿಮಾದ ಟೀಸರ್‌ನಲ್ಲಿ ಬ್ರಾಹ್ಮಣರನ್ನು ಅವಹೇಳನ ಮಾಡಿರುವ ಚಿತ್ರ ತಂಡವು ಸಮುದಾಯದ ಕ್ಷಮೆಯಾಚಿಸಬೇಕು. ಇಲ್ಲವಾದಲ್ಲಿ ಚಿತ್ರ ತಂಡದ ವಿರುದ್ಧ ಹೋರಾಟ ಅನಿವಾರ್ಯವಾಗಲಿದೆ’ ಎಂದು ಕೆಪಿಸಿಸಿ ವಕ್ತಾರ ಶಂಕರ ಗುಹಾ ದ್ವಾರಕನಾಥ್ ಹೇಳಿದ್ದಾರೆ.

‘ಸಂಜೋತಾ ಭಂಡಾರಿ ನಿರ್ದೇಶನದ ಈ ಚಿತ್ರದ ಟೀಸರ್‌ನಲ್ಲಿ, ಜನಿವಾರ ಧರಿಸಿದ ವ್ಯಕ್ತಿಯೋರ್ವ ಲಂಗೋಟಿಯಲ್ಲಿ ಓಡುತ್ತಿರುವ ಹಾಗೆ ಚಿತ್ರೀಕರಣ ಮಾಡಲಾಗಿದೆ. ಈ ಮೂಲಕ ಬ್ರಾಹ್ಮಣರನ್ನು ಹಾಗೂ ಬ್ರಾಹ್ಮಣರ ಪಾರಂಪರಿಕ ವಸ್ತ್ರಧಾರವನ್ನು ಟೀಕಿಸಿರುವುದು ಗಮನಕ್ಕೆ ಬಂದಿದೆ. ಯಾವುದೇ ಜಾತಿ ಹಾಗೂ ವರ್ಗದವರನ್ನು ನಿಂದಿಸುವುದು ತಪ್ಪು’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಈ ಚಲನಚಿತ್ರದ ನಿರ್ಮಾಪಕರು ಹಾಗೂ ನಿರ್ದೇಶಕರು ವಿವಾದಿತ ದೃಶ್ಯ ತೆಗೆಯಬೇಕು. ಯಾರ ಭಾವನೆಗೂ ಧಕ್ಕೆ ಬಾರದ ಹಾಗೆ ಸರಿಪಡಿಸಿ, ಕ್ಷಮೆ ಯಾಚಿಸಬೇಕು. ಇಲ್ಲವಾದಲ್ಲಿ ಅರ್ಚಕರ ಸಂಘದವರ ಜೊತೆಗೆ ನಿಂತು ತೀವ್ರ ಹೋರಾಟ ಮಾಡಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾರಿ • ಜಿಪಿಎಸ್ ದತ್ತಾಂಶದಿಂದ ನಿಖರ ಮಾಹಿತಿ

ಆಸ್ತಿ ಮಾಹಿತಿಗೆ ಮನೆ ಸಮೀಕ್ಷೆ

• ನವೀನ್ ಮಿನೇಜಸ್

- ಈ ವರ್ಷ ₹5,200 ಕೋಟಿ ಆಸ್ತಿ ತೆರಿಗೆ ಸಂಗ್ರಹದ ಗುರಿ
- ತೆರಿಗೆಯಿಂದ ಹೊರಗುಳಿದಿವೆ ಐದು ಲಕ್ಷಕ್ಕೂ ಅಧಿಕ ಆಸ್ತಿಗಳು
- ಸಮರ್ಪಕ ಸಂಗ್ರಹದಿಂದ ವರಮಾನದಲ್ಲಿ ಮೂರು ಪಟ್ಟು ಹೆಚ್ಚಳ ಸಾಧ್ಯತೆ

ಬೆಂಗಳೂರು: ನಗರದಲ್ಲಿರುವ 20 ಲಕ್ಷ ಆಸ್ತಿಗಳಿಗೆ ಸಂಬಂಧಿಸಿದಂತೆ ಜಿಪಿಎಸ್ ದತ್ತಾಂಶಗಳೊಂದಿಗೆ ನಿಖರ ಮಾಹಿತಿ ಸಂಗ್ರಹಿಸಲು ಇದೇ ಮೊದಲ ಬಾರಿಗೆ ಮನೆ, ಮನೆ ಸಮೀಕ್ಷೆ ಆರಂಭಿಸಲು ಬಿಬಿಎಂಪಿ ಮುಂದಾಗಿದೆ.

ಇದಕ್ಕಾಗಿ ಬಿಬಿಎಂಪಿಯ ಕಂದಾಯ ವಿಭಾಗದ 150 ಅಧಿಕಾರಿಗಳಿಗೆ ನೆರವಾಗಲು 200 ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗಿದೆ. ದತ್ತಾಂಶ ಸಂಗ್ರಹಕ್ಕೆ ಪ್ರತ್ಯೇಕ ಮೊಬೈಲ್ ಆ್ಯಪ್ ಕೂಡ ಸಿದ್ಧವಾಗಿದೆ.

ಆಸ್ತಿಗಳ ಫೋಟೊವನ್ನು ಆಸ್ತಿ ಗುರುತಿನ ಸಂಖ್ಯೆ ಹಾಗೂ ಆಸ್ತಿ ಇರುವ ಸ್ಥಳದ ಕುರಿತು ಜಿಪಿಎಸ್ ಮೂಲಕ ಸಂಗ್ರಹಿಸಿರುವ ಅಕ್ಷಾಂಶ ಮತ್ತು ರೇಖಾಂಶಗಳನ್ನು ಜೋಡಿಸುವ ಪ್ರಸ್ತಾವ ಯೋಜನೆಯಲ್ಲಿದೆ. ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುವ ಆಸ್ತಿಗಳನ್ನು ಗುರುತಿಸಲು ಅಧಿಕಾರಿಗಳಿಗೆ ನೆರವಾಗುವುದು ಮತ್ತು ಆಸ್ತಿ ತೆರಿಗೆ ಸಂಗ್ರಹ ಹೆಚ್ಚಿಸುವುದು ಯೋಜನೆಯ ಉದ್ದೇಶಗಳಲ್ಲಿ ಸೇರಿದೆ.

ಸಮೀಕ್ಷೆಗೆ ಬರುವ ಸಿಬ್ಬಂದಿ ಆಸ್ತಿಗಳ ಮಾಲೀಕರಿಂದ ತೆರಿಗೆ ಪಾವತಿ ರಸೀದಿ ಮತ್ತು ಬೆಸ್ಕಾಂ ವಿದ್ಯುತ್ ಶುಲ್ಕದ ಬಿಲ್ ಕೇಳಬಹುದು. ಕ್ರಯಪತ್ರ ಸೇರಿದಂತೆ ಬೇರೆ ಯಾವುದೇ ದಾಖಲೆಗಳನ್ನು ಕೇಳಲು ಅವಕಾಶ ಇರುವುದಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

‘ಎಲ್ಲ ಆಸ್ತಿಗಳ ಮಾಹಿತಿ ನಿಖರವಾಗಿ ಸಂಗ್ರಹಿಸುವುದರಿಂದ ತೆರಿಗೆ ವಂಚನೆ ತಪ್ಪಿಸಬಹುದು. ಈಗ ನಮ್ಮ ಬಳಿ ಪಿಐಡಿ ಸಂಖ್ಯೆಗಳು ಮಾತ್ರ ಇವೆ. ಅದರಿಂದ ಆಸ್ತಿಯನ್ನು ನಿಖರವಾಗಿ ಗುರುತಿಸಲು ಸಾಧ್ಯವಿಲ್ಲ. ಈ ಕಾರಣದಿಂದಾಗಿಯೇ ಬಿಬಿಎಂಪಿಗೆ ತೆರಿಗೆ ಸಂಗ್ರಹದಲ್ಲಿ ಹಿನ್ನಡೆಯಾಗುತ್ತಿದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

‘ಜಿಪಿಎಸ್ ದತ್ತಾಂಶಗಳನ್ನು ಸಂಗ್ರಹಿಸಿದ ಬಳಿಕ ವಿಶ್ಲೇಷಣೆಗೆ ತಂಡವೊಂದನ್ನು ನೇಮಿಸಲಾಗುವುದು. ಉಪಗ್ರಹ ಚಿತ್ರಗಳು ಸೇರಿದಂತೆ ವಿವಿಧ ಮೂಲಗಳ ದಾಖಲೆಗಳೊಂದಿಗೆ ತಾಳೆಮಾಡಿ ಪರಿಶೀಲನೆ ಮಾಡಲಾಗುವುದು’ ಎಂದರು.

ಆಸ್ತಿ ತೆರಿಗೆಗೆ ಸಂಬಂಧಿಸಿದ ದಾಖಲೆಗಳ ಡಿಜಿಟಲೀಕರಣದ ಭಾಗವಾಗಿ ಇಂತಹ ಸಮೀಕ್ಷೆ ನಡೆಸುವುದಾಗಿ ಬಿಬಿಎಂಪಿ ಕಳೆದ ನವೆಂಬರ್‌ನಲ್ಲಿ ಪ್ರಕಟಿಸಿತ್ತು. ಈ ಯೋಜನೆಗೆ ಸಹಕಾರ ಕೋರಿ ಆಸ್ತಿಗಳ ಮಾಲೀಕರಿಗೆ ಎಸ್‌ಎಂಎಸ್ ಮೂಲಕ ಮನವಿಯನ್ನೂ ಕಳುಹಿಸಿತ್ತು. ಲೋಕಸಭಾ ಚುನಾವಣೆಯ ಕೆಲಸಗಳ ಒತ್ತಡ ಹೆಚ್ಚಿರುವುದಾಗಿ ಕಂದಾಯ ವಿಭಾಗದ ಅಧಿಕಾರಿಗಳು ಹೇಳಿದ್ದರಿಂದ ಸಮೀಕ್ಷೆ ನನೆಗುದಿಗೆ ಬಿದ್ದಿತ್ತು. ಆ ಬಳಿಕ ಸಮೀಕ್ಷೆಗಾಗಿ ಪ್ರತ್ಯೇಕ ತಂಡ ರಚನೆಗೆ ತೀರ್ಮಾನಿಸಲಾಗಿತ್ತು.

ಅಕ್ಷಾಂಶ, ರೇಖಾಂಶ ವಿವರ ನಮೂದು ಕಡ್ಡಾಯ

2024–25ರ ಆಸ್ತಿ ತೆರಿಗೆ ಪಾವತಿ ಸಂದರ್ಭದಲ್ಲೇ ಆಸ್ತಿಗಳಿರುವ ಸ್ಥಳದ ಅಕ್ಷಾಂಶ ಮತ್ತು ರೇಖಾಂಶಗಳ ವಿವರಗಳನ್ನು ನಮೂದಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಹೆಚ್ಚಿನ ಆಸ್ತಿ ಮಾಲೀಕರಿಗೆ ಇದರಿಂದ ತೆರಿಗೆ ಪಾವತಿ ಅಸಾಧ್ಯವಾಗಿದ್ದರಿಂದ ಆಸ್ತಿ ಮಾಲೀಕರ ಆಯ್ಕೆಯ ಅವಕಾಶವನ್ನು ಬಿಡಲಾಗಿತ್ತು.

ದೆಹಲಿ ಮಹಾನಗರ ಪಾಲಿಕೆಯು ಈ ರೀತಿ ಆಸ್ತಿಗಳ ನಿಖರ ಮಾಹಿತಿ ಸಂಗ್ರಹಿಸಿತ್ತು. ಆಸ್ತಿಗಳ ಅಕ್ಷಾಂಶ ಮತ್ತು ರೇಖಾಂಶದ ಮಾಹಿತಿಯನ್ನು ಸಲ್ಲಿಸಿದವರಿಗೆ ಆಸ್ತಿ ತೆರಿಗೆಯಲ್ಲಿ ಶೇ 10ರಷ್ಟು ರಿಯಾಯಿತಿಯನ್ನೂ ನೀಡಿತ್ತು.

‘ಚನ್ನಪಟ್ಟಣ ಅಭ್ಯರ್ಥಿ: ಬಿಜೆಪಿ ನಿರ್ಧರಿಸಲಿದೆ’

ಪ್ರಜಾವಾಣಿ ವಾರ್ತೆ

ನಿಖಿಲ್

ಬೆಂಗಳೂರು: ‘ಚನ್ನಪಟ್ಟಣ ಉಪಚುನಾವಣೆಗೆ ಎನ್‌ಡಿಎ ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ಬಿಜೆಪಿ ಹೈಕಮಾಂಡ್ ನಿರ್ಧರಿಸಲಿದೆ. ಈ ಸಂಬಂಧ ವರದಿ ಕಳುಹಿಸಿದ್ದೇವೆ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಪಂಚಾಯತಿ ಮತ್ತು ವಿಧಾನಸಭಾ ಉಪಚುನಾವಣೆಗೆ ಸಿದ್ಧತೆಗಾಗಿ ಪಕ್ಷದ ಕಚೇರಿಯಲ್ಲಿ ನಡೆದ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ‘ಕೆಲವೇ ದಿನಗಳಲ್ಲಿ ಎನ್‌ಡಿಎ ತನ್ನ ಅಭ್ಯರ್ಥಿಯನ್ನು ಘೋಷಿಸಲಿದೆ’ ಎಂದರು.

‘ಚನ್ನಪಟ್ಟಣ ಜೆಡಿಎಸ್‌ನ ಭದ್ರ ಕೋಟೆ. ಬಿಜೆಪಿಯ ಸಿ.ಪಿ. ಯೋಗೇಶ್ವರ್ ಅವರ ವರ್ಚಸ್ಸು ಸೇರಿದರೆ, ಎನ್‌ಡಿಎ ಅಭ್ಯರ್ಥಿಯ ಗೆಲುವು ಖಚಿತ. ಕಾಂಗ್ರೆಸ್‌ಗೆ ಅಲ್ಲಿ ಹೆಜ್ಜೆ ಇಡಲೂ ಆಗುವುದಿಲ್ಲ’ ಎಂದರು.

ಗಣಿಭೂಮಿ ಹಂಚಿಕೆಗೆ ಕುಮಾರಸ್ವಾಮಿ ಸಹಿ ಮಾಡಿಲ್ಲ. ಮುಡಾ ಹಗರಣ ಮುಚ್ಚಿಹಾಕಲು, ಇಲ್ಲಸಲ್ಲದ ಸುಳ್ಳು ಹೇಳುತ್ತಿದ್ದಾರೆ
ನಿಖಿಲ್ ಕುಮಾರಸ್ವಾಮಿ
ಜೆಡಿಎಸ್ ಯುವಘಟಕದ ಅಧ್ಯಕ್ಷ

ಸುದ್ದಿ 2 ನಿಮಿಷ

ಜಾಗೃತಿ: ಸೆ.8ರವರೆಗೆ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ

ಬೆಂಗಳೂರು: ನೇತ್ರದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಇದೇ 25ರಿಂದ ಸೆ.8ರವರೆಗೆ ‘39ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ’ ಎಂದು ಘೋಷಿಸಿದೆ.

ಈ ಅವಧಿಯಲ್ಲಿ ಲಯನ್ಸ್ ಅಂತರರಾಷ್ಟ್ರೀಯ ನೇತ್ರ ಬ್ಯಾಂಕ್ ಜನರಲ್ಲಿ ನೇತ್ರದಾನದ ಅಗತ್ಯತೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ.

‘ಕಾರ್ನಿಯಲ್’ ಅಂಧತ್ವದಿಂದ ಮಕ್ಕಳು ಮತ್ತು ಯುವಕರು ಇಡೀ ಬದುಕನ್ನು ಕತ್ತಲೆಯಲ್ಲಿ ಕಳೆಯುವ ಸಂದರ್ಭಗಳಿವೆ. ಕಸಿ ಮಾಡುವ ಮೂಲಕ ಈ ಅಂಧತ್ವವನ್ನು ನಿವಾರಿಸಬಹುದು. ಹೀಗಾಗಿ, ಶವಸಂಸ್ಕಾರದ ಸಂದರ್ಭದಲ್ಲಿ ಕಣ್ಣುಗಳನ್ನು ಸುಡುವ ಬದಲು ಅಥವಾ ಮಣ್ಣಿನಲ್ಲಿ ಹೂಳುವ ಬದಲು ದಾನ ಮಾಡಬಹುದು ಎಂದು ನೇತ್ರ ಬ್ಯಾಂಕ್‌ನ ವ್ಯವಸ್ಥಾಪಕ ಟ್ರಸ್ಟಿ ಲಯನ್ ಪಿ.ಎಸ್. ಪ್ರೇಮನಾಥ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ www.lionsinternationaleyebankbangalore.in ವೆಬ್‌ಸೈಟ್ ವೀಕ್ಷಿಸಬಹುದು. **ಸಂಪರ್ಕಿಸಿ:** 9740556666.

ಕುಕ್ಕುಟೋದ್ಯಮ: ಅಮೆರಿಕದ ಸಂಸ್ಥೆಗಳೊಂದಿಗೆ ಒಪ್ಪಂದ

ಬೆಂಗಳೂರು: ರಾಜ್ಯದಲ್ಲಿ ವೇಗವಾಗಿ ಬೆಳೆಯುತ್ತಿರುವ ಕೋಳಿ ಸಾಕಾಣಿಕೆ ಉದ್ಯಮದಲ್ಲಿ ಉದ್ಯೋಗ ಸೃಷ್ಟಿ ಹೆಚ್ಚಿಸಲು, ಪೌಷ್ಟಿಕ ಆಹಾರ ಪೂರೈಸುವ ನಿಟ್ಟಿನಲ್ಲಿ ಉದ್ಯೋಗಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ವರ್ಧನೆಯನ್ನು ವೇಗಗೊಳಿಸಲು ಕರ್ನಾಟಕ ಕೋಳಿ ಸಾಕಾಣಿಕೆದಾರರ ಸಂಘವು ಅಮೆರಿಕದ ಎರಡು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಯುಎಸ್‌ಎಸ್‌ಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಮ್ ಸುಟರ್ ಮತ್ತು ಅಮೆರಿಕದ ಸೋಯಾ ಉತ್ಕೃಷ್ಟತಾ ಕೇಂದ್ರಗಳೊಂದಿಗೆ ಸಹಯೋಗ ಹೊಂದುವ ಉದ್ದೇಶದಿಂದ ಕರ್ನಾಟಕ ಕೋಳಿ ರೈತರ ಮತ್ತು ತಳಿಗಾರರ ಸಂಘದ ಅಧ್ಯಕ್ಷ ನವೀನ್ ಪಶುಪರ್ತಿ ಒಪ್ಪಂದಕ್ಕೆ ಸಹಿ ಮಾಡಿದರು.

ಕೌಶಲ ಭಾರತ ಯೋಜನೆಯಡಿ ಭಾರತದ ಕೋಳಿ ಉದ್ಯಮದಲ್ಲಿ ಕ್ಷಿಪ್ರ ಪ್ರಗತಿ ಸಾಧಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಕೋಳಿ ಮತ್ತು ಕೋಳಿ ತಳಿಗಳಿಗೆ ಸಂಬಂಧಿಸಿದಂತೆ ಸಹಭಾಗಿತ್ವದಲ್ಲಿ ಕೆಲಸ ಮಾಡಲು ಕರ್ನಾಟಕ ಸರ್ಕಾರ ಮತ್ತು ಅಮೆರಿಕದ ಒಕ್ಕೂಟ ಸರ್ಕಾರದ ಸಂಸ್ಥೆಗಳು ಒಡಂಬಡಿಕೆಗೆ ಸಹಿ ಹಾಕಿವೆ ಎಂದು ಕೋಮರ್ಲ ನಂದು ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಮತ್ತು ನಂದುಸ್‌ನ ನಿರ್ದೇಶಕರೂ ಆಗಿರುವ ಪಶುಪರ್ತಿ ಮಾಹಿತಿ ನೀಡಿದರು.

ಶ್ರೀ
ಆಂಧ್ರ ದೇವಾಂಗ ಸಂಘಮು (ರಿ)
35/36, 3ನೇ ಮಹಡಿ, ಆಂಧ್ರ ದೇವಾಂಗ ವಾಣಿಜ್ಯ ಸಂಕೀರ್ಣ, ಶ್ರೀ. ದೇವರ ದಾಸಿಮಯ್ಯ ರಸ್ತೆ (ಜಿ.ಎಂ.ರಸ್ತೆ), ಬೆಂಗಳೂರು–560002.
ಪ್ರಕಟಣೆ
ಮೇಲ್ಕಂಡ ಸಂಘದ 2023–24 ನೇ ಸಾಲಿನ 40ನೇ ವಾರ್ಷಿಕ ಸಾಮಾನ್ಯ ಸರ್ವಸದಸ್ಯರ ಸಭೆಯನ್ನು ದಿನಾಂಕ:– 31–08–2024 ರಂದು ಶನಿವಾರ ಬೆಳಿಗ್ಗೆ 10.30 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ.ಡಿ.ವಿ.ಕೃಷ್ಣಮೂರ್ತಿ ರವರ ಅಧ್ಯಕ್ಷತೆಯಲ್ಲಿ ಎ.ಡಿ.ಎಸ್.ಕನ್ವೆನ್ಷನ್ ಸಂಟರ್, 5ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗಾಂಧೀನಗರ, ಬೆಂಗಳೂರು–560009 ಇಲ್ಲಿ ಏರ್ಪಡಿಸಿರುತ್ತದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಬಂದು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ವಿನಂತಿ. ಹಾಗೂ ದಿನಾಂಕ: 01–09–2024 ರ ಭಾನುವಾರ ದಂದು ಬೆಳಿಗ್ಗೆ 8.00 ಘಂಟೆಯಿಂದ ಸಂಜೆ 5.00 ಘಂಟೆಯವರೆಗೆ ಸಂಘದ ಆಡಳಿತ ಮಂಡಳಿಯ ಚುನಾವಣೆಯನ್ನು ಬೆಂಗಳೂರು ನಗರ ಕಾರ್ಪೋರೇಷನ್ ಹಿಂಭಾಗ, ದೇವಾಂಗ ಹಾಸ್ಟೆಲ್ ರಸ್ತೆ, ದೇವಾಂಗ ಸಂಘದ ಶಾಲಾ ಕಾಲೇಜಿನಲ್ಲಿ ನಡೆಸಲಾಗುತ್ತಿದೆ. ಮಾನ್ಯ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ ಕಡ್ಡಾಯವಾಗಿ ಮತದಾನ ಮಾಡಲು ಈ ಮೂಲಕ ಕೋರಿದೆ.
ಆಂಧ್ರ ದೇವಾಂಗ ಸಂಘಮು (ರಿ), ಬೆಂಗಳೂರು

ಕುವೆಂಪು ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿಯಮಿತ
(ಸ.ನಿ. 44 ನೋಂದಣಿ 21/19776/95-96 ದಿನಾಂಕ: 04-09-1995)
ನಂ. 899/ಎ, 1ನೇ ಅಡ್ಡರಸ್ತೆ, 'ಡಿ' ಬ್ಲಾಕ್, (ಶನಿಮಹಾತ್ಮ ದೇವಸ್ಥಾನದ ಹಿಂಭಾಗ)
ರಾಜಾಜಿನಗರ 2ನೇ ಹಂತ, ಬೆಂಗಳೂರು-560 010 ದೂರವಾಣಿ: 080-23422918

ಲಗ್ಗೆರೆ ಶಾಖೆ	ನಾಗರಭಾವಿ ಶಾಖೆ	ಬಸವೇಶ್ವರನಗರ ಶಾಖೆ
080-28397755	080-26744674	080-23108899

ಸಹಕಾರಿ ಬಂಧುಗಳೇ
ದಿನಾಂಕ 01–09–2024 ರಂದು ಭಾನುವಾರ ಬೆಳಿಗ್ಗೆ 11:00 ಘಂಟೆಗೆ ಸಂಸ್ಥೆಯ 2023–24ನೇ ಸಾಲಿನ 29ನೇ ಸರ್ವ ಸದಸ್ಯರ ಸಭೆಯನ್ನು ಡಾ. ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣ, ಗೆಳೆಯರ ಬಳಗ, ಶನಿಮಹಾತ್ಮ ದೇವಸ್ಥಾನದ ಮುಂಭಾಗ, ಮಹಾಲಕ್ಷ್ಮೀಪುರಂ, ಬೆಂಗಳೂರು–86 ಇಲ್ಲಿ ಏರ್ಪಡಿಸಲಾಗಿದೆ. ಈ ಮಹಾಸಭೆಯ ನೋಟೀಸನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿಕೊಡಲಾಗಿದೆ. ಒಂದು ವೇಳೆ ಅಂಚೆ ತಲುಪದಿದ್ದರೆ ಈ ಪ್ರಕಟಣೆಯನ್ನೇ ಆಹ್ವಾನ ಪತ್ರವೆಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.
ಆಡಳಿತ ಮಂಡಳಿ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: 26–08–2024
ಸಹಿ/– ಕೆ. ಪುಟ್ಟಸ್ವಾಮಿಗೌಡ, ಕಾರ್ಯದರ್ಶಿ

ಕುಡಿದು ವಾಹನ ಚಾಲನೆ: 779 ಪ್ರಕರಣ ದಾಖಲು

ಬೆಂಗಳೂರು: ಮದ್ಯಸೇವಿಸಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು, ಶುಕ್ರವಾರ ಒಂದೇ ದಿನ 779 ಪ್ರಕರಣ ದಾಖಲಿಸಿದ್ದಾರೆ.

ನಗರದಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ, ಅಪಘಾತ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಇಲಾಖೆಯು ಪ್ರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಪಾನಮತ್ತ ಚಾಲನೆ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುತ್ತಿದೆ.

ಶುಕ್ರವಾರ ಕಾರ್ಯಾಚರಣೆ ನಡೆಸಿದ 1,200 ಅಧಿಕಾರಿಗಳು, ಸಿಬ್ಬಂದಿ, 34,676 ವಾಹನಗಳ ತಪಾಸಣೆ ನಡೆಸಿ, 779 ಪ್ರಕರಣ ದಾಖಲಿಸಿದ್ದಾರೆ. ವಾಹನಗಳನ್ನು ವಶಕ್ಕೆ ಪಡೆದು, ನೋಟಿಸ್ ನೀಡಿ ಕಳುಹಿಸಿದ್ದಾರೆ. ಚಾಲನಾ ಪರವಾನಗಿ ಅಮಾನತಿಗೂ ಶಿಫಾರಸು ಮಾಡಿದ್ದಾರೆ.

ವೈದ್ಯರ ಮೇಲಿನ ನಂಬಿಕೆ ಕುಸಿಯುತ್ತಿದೆ: ದಿನೇಶ್

ಪ್ರಜಾವಾಣಿ ವಾರ್ತೆ

ಧೀ ಆಸ್ಪತ್ರೆಯನ್ನು ಶ್ರೀ ಶ್ರೀ ರವಿಶಂಕರ್ ಗುರೂಜಿ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ರೋಟೇರಿಯನ್ ರವಿಶಂಕರ್ ಡಕೋಜು ಹಾಗೂ ಡಾ. ಚಂದ್ರಶೇಖರ್ ಚಿಕ್ಕಮುನಿಯಪ್ಪ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಆಸ್ಪತ್ರೆಗಳು ವಾಣಿಜ್ಯೀಕರಣಗೊಂಡಿದ್ದು, ರೋಗಿಗಳು ಆಸ್ಪತ್ರೆಗಳಿಗೆ ಬರುತ್ತಿದ್ದಂತೆ ಹತ್ತಾರು ಪರೀಕ್ಷೆಗಳಿಗೆ ಸೂಚಿಸಲಾಗುತ್ತಿದೆ. ಇದರಿಂದ ಜನರಲ್ಲಿ ವೈದ್ಯರ ಮೇಲಿನ ನಂಬಿಕೆ ಕಡಿಮೆಯಾಗುತ್ತಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬೇಸರ ವ್ಯಕ್ತಪಡಿಸಿದರು.

ಕನಕಪುರ ರಸ್ತೆಯಲ್ಲಿ ಆರಂಭವಾಗಿರುವ ಧೀ ಆಸ್ಪತ್ರೆ ಉದ್ಘಾಟನಾ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.

‘ಲಾಭ–ನಷ್ಟದ ಲೆಕ್ಕಾಚಾರ ಹಾಕುವ ಖಾಸಗಿ ಆಸ್ಪತ್ರೆಗಳು, ಸ್ಕ್ಯಾನಿಂಗ್ ಸೇರಿ ವಿವಿಧ ಪರೀಕ್ಷೆ ಹಾಗೂ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ವೈದ್ಯರಿಗೆ ಗುರಿ ನೀಡುತ್ತಿವೆ. ಇದು ವೈದ್ಯಕೀಯ ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ವೈದ್ಯರಾದವರು ಸೇವಾ ಮನೋಭಾವ ರೂಢಿಸಿಕೊಂಡು, ರೋಗಿಗಳಿಗೆ ಚಿಕಿತ್ಸೆ ಒದಗಿಸಬೇಕು’ ಎಂದರು.

‘ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ವಿವಿಧ ವ್ಯಸನಗಳಿಂದ ಅಧಿಕ ರಕ್ತದೊತ್ತಡ, ಮಧುಮೇಹದಂತಹ ಅನಾರೋಗ್ಯ ಸಮಸ್ಯೆಗಳು ಹೆಚ್ಚಿನವರನ್ನು ಕಾಡಲಾರಂಭಿಸಿವೆ. ಆರೋಗ್ಯ ಕೆಡುವ ಮೊದಲು ಮುನ್ನೆಚ್ಚರಿಕೆ ವಹಿಸಬೇಕು’ ಎಂದು ತಿಳಿಸಿದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ ಮಾತನಾಡಿ, ‘ಭಾರತೀಯ ಪರಂಪರೆಯಲ್ಲಿ ವೈದ್ಯರನ್ನು ದೇವರಂತೆ ಕಾಣಲಾಗುತ್ತದೆ. ವೈದ್ಯರಾದವರು ಮಾತೃ ಹೃದಯ ಹೊಂದಿರಬೇಕು. ಸ್ವಸ್ಥ ಸಮಾಜ ನಿರ್ಮಾಣವಾಗಬೇಕಾದರೆ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಪ್ರತಿಯೊಬ್ಬರೂ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದರು.

ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಚಂದ್ರಶೇಖರ್ ಚಿಕ್ಕಮುನಿಯಪ್ಪ ಮಾತನಾಡಿ, ‘ವಿದೇಶಗಳಲ್ಲಿ ಕಾರ್ಯನಿರ್ವಹಿಸಿ, ತಾಯ್ನಾಡಿನ ಸೆಳೆತದಿಂದ ಇಲ್ಲಿ ಆಸ್ಪತ್ರೆ ನಿರ್ಮಿಸಲಾಗಿದೆ. ರೋಟರಿ ಸಂಸ್ಥೆಯ ನೆರವಿನಿಂದ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರವನ್ನು ಪ್ರಾರಂಭಿಸಲಾಗಿದೆ’ ಎಂದು ವಿವರಿಸಿದರು.

ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಭಾನುವಾರ ನಡೆದ ‘ನಾಟ್ ಜಸ್ಟ್ ಎ ಲಾಫಿಂಗ್ ಮ್ಯಾಟರ್’ ಅಬು ಅಬ್ರಹಾಂ ಅವರ ವ್ಯಂಗ್ಯ ಚಿತ್ರಗಳ ಕುರಿತ ಚರ್ಚೆಯಲ್ಲಿ ಇತಿಹಾಸಕಾರರಾದ ಜಾನಕಿ ನಾಯರ್, ವ್ಯಂಗ್ಯಚಿತ್ರಕಾರ ಗೋಕುಲ್ ಗೋಪಾಲಕೃಷ್ಣನ್, ಲೇಖಕ ಎ.ಎಸ್. ಪನ್ನೀರಸೆಲ್ವನ್, ವ್ಯಂಗ್ಯಚಿತ್ರಕಾರ ಇ.ಪಿ. ಉನ್ನಿ ಮತ್ತು ಲೇಖಕಿ ರೋಹಿಣಿ ಮೋಹನ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Lost

DOCUMENT LOST
I, Nagaiah S Hiremath S/o Shankariah R. Hiremath Residing at Old No. 8, New No. 20, 1st Main, 4th "A" Cross Near Kashi Vishwanatha Temple B Channasandra, Bangalore North-560043. Lost Original Absolute Sale Deed Document No/ Identification: 7007-1994-95 Dt. 02.01.1995 Registered at Sub-Registrar, Bangalore South Taluk. While transit If found please Contact: 9845580812

BUSINESS

Business Offers

Business Centre

EXCLUSIVE HAND Made Carpets of Iran/ Kashmir Special Offers for Architects/ Interior Designers. Cavery Industries Exibits 131 Infantry Road Opp: Maruti Car Showroom: 8861510092

Finance

URGENT LOAN avail @3.5% per annum Business, Personal, Projects, Takeover all types Loans OM Sai Finance. Phone: 8826494700.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Sarjapur Road

DOMMASANDRA ELECTRONIC City Main Road DPS Commercial 4600Sft, RS.5000 Per Sft: 8884501767

JOB OPPORTUNITIES

Wanted

WANTED FEMALE Office Assistant- any Degree, Good Communication Skills English & Hindi for Pvt Ltd Company in Rajajinagar Contact :9108458798/ 9845579620

DH DECCAN HERALD Classifieds More value, more impact
NAME CHANGE ಪ್ರಜಾವಾಣಿ
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

4ನೇ ರಾಷ್ಟ್ರೀಯ ಸ್ಟೆಮ್ ಚಾಲೆಂಜ್ ಸ್ಪರ್ಧೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಎಜುಕೇಷನ್ ಫೌಂಡೇಷನ್ ಹಾಗೂ ಬ್ರಿಲ್ಲಿಯೊ ಸಹಯೋಗದಲ್ಲಿ ನಡೆಯುತ್ತಿರುವ ನಾಲ್ಕನೇ ರಾಷ್ಟ್ರೀಯ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಗಣಿತ) ಚಾಲೆಂಜ್ ಅಂತಿಮ ಸುತ್ತಿನ ಸ್ಪರ್ಧೆ ಬನಶಂಕರಿಯ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆಯಲ್ಲಿ ಮಂಗಳವಾರ (ಆಗಸ್ಟ್ 27) ನಡೆಯಲಿದೆ.

ಈ ವರ್ಷದ ಸ್ಪರ್ಧೆಯಲ್ಲಿ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ಅಂತಿಮ ಸುತ್ತಿಗೆ ದೇಶದ ವಿವಿಧ ಭಾಗಗಳಿಂದ ಒಟ್ಟು 60 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಇವರು ಸ್ಟೆಮ್ ವಿಭಾಗದಲ್ಲಿ ತಮ್ಮ ಕೌಶಲ, ಅನ್ವೇಷಣೆ ಹಾಗೂ ಕ್ರಿಯಾಶೀಲತೆ ಪ್ರದರ್ಶಿಸಲಿದ್ದಾರೆ.

ಬ್ರಿಲ್ಲಿಯೊ ಕಂಪನಿಯು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಉಪಕ್ರಮದ ಭಾಗವಾಗಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಈ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಈ ಕಂಪನಿ ಸಹಯೋಗದಲ್ಲಿ ನ್ಯಾಷನಲ್ ಎಜುಕೇಷನ್ ಫೌಂಡೇಷನ್ ಈ ಕಾರ್ಯಕ್ರಮದ ಆತಿಥ್ಯ ವಹಿಸಲಿದೆ.

ಈ ಕುರಿತು ಮಾಹಿತಿ ನೀಡಿರುವ ನ್ಯಾಷನಲ್ ಎಜುಕೇಷನ್ ಫೌಂಡೇಷನ್‌ನ ಐಶ್ವರ್ಯ ಡಿಕೆಎಸ್ ಹೆಗ್ಡೆ, ‘ರಾಷ್ಟ್ರೀಯ ಸ್ಟೆಮ್ ಚಾಲೆಂಜ್ ಸ್ಪರ್ಧೆಯು ನಮ್ಮ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿರುವ ಪ್ರತಿಭೆಗಳಿಗೆ ಉತ್ತಮ ಅವಕಾಶ ನೀಡಲಿದೆ. ಅಲ್ಲದೆ, ಅತ್ಯುತ್ತಮ ಶಿಕ್ಷಣ ನೀಡುವ ನಮ್ಮ ಧ್ಯೇಯ ಸಾಧನೆಗೆ ಪೂರಕವಾಗಿದೆ’ ಎಂದಿದ್ದಾರೆ.

ರಾಮ್‌ರಾಜ್ ಕಾಟನ್ ಎರಡು ಘಟಕ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ತಿರುಪ್ಪೂರ್‌ನ ಇಡುವಂಪಾಲ್ಯಂ ಮತ್ತು ಈರೋಡು ಬಳಿಯ ಪೆರುಂದುರೈ ಬಳಿ ರಾಮ್‌ರಾಜ್ ಕಾಟನ್‌ನ ಎರಡು ಹೊಸ ಘಟಕಗಳನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಇತ್ತೀಚೆಗೆ ಉದ್ಘಾಟಿಸಿದರು.

ಪ್ರಸಕ್ತ ವರ್ಷದ ಜನವರಿಯಲ್ಲಿ ಚೆನ್ನೈನಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರಾಮ್‌ರಾಜ್ ಕಾಟನ್ ₹1 ಸಾವಿರ ಕೋಟಿ ವೆಚ್ಚದಲ್ಲಿ ಎರಡು ಹೊಸ ಕೈಗಾರಿಕಾ ಘಟಕ ಸ್ಥಾಪಿಸುವ ಬಗ್ಗೆ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿತ್ತು. ಈ ಒಪ್ಪಂದದ ಪತ್ರವನ್ನು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್‌ಗೆ ಹಸ್ತಾಂತರಿಸಲಾಗಿತ್ತು.

‘ಈ ಎರಡು ಹೊಸ ಕೈಗಾರಿಕೆಗಳಿಂದ ನೇರವಾಗಿ 2 ಸಾವಿರ ಮತ್ತು ಪರೋಕ್ಷವಾಗಿ 5 ಸಾವಿರ ಜನರಿಗೆ ಉದ್ಯೋಗ ಸಿಗಲಿವೆ. ಜೊತೆಗೆ, ತಮಿಳುನಾಡಿನ ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಲಿದೆ’ ಎಂದು ಕಂಪನಿಯ ಸಂಸ್ಥಾಪಕ ಮತ್ತು ಅಧ್ಯಕ್ಷ ಕೆ.ಆರ್. ನಾಗರಾಜನ್ ಹೇಳಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ರಾಜಕಾಲುವೆ ಸ್ವಚ್ಛಗೊಳಿಸಿ’

ಆರ್‌ಟಿ. ನಗರದ ಸೀತಪ್ಪ ಲೇಔಟ್‌ನ ರಾಜಕಾಲುವೆಯಲ್ಲಿ ಹಾಕಿರುವ ಕಸ

ಆರ್.ಟಿ. ನಗರದ ಸೀತಪ್ಪ ಬಡಾವಣೆಯ ಆರನೇ ಅಡ್ಡರಸ್ತೆಯ ರಾಜಕಾಲುವೆಯಲ್ಲಿ ಸ್ಥಳೀಯ ನಿವಾಸಿಗಳು ಪ್ರತಿನಿತ್ಯ ಕಸ ಹಾಕುತ್ತಿದ್ದಾರೆ. ಇದರಿಂದ, ರಾಜಕಾಲುವೆಯಲ್ಲಿ ನೀರು ಕಟ್ಟಿಕೊಂಡು ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸೊಳ್ಳೆಗಳ ಉತ್ಪತ್ತಿ ತಾಣವಾಗಿದ್ದು, ರಾಜಕಾಲುವೆಯ ಅಕ್ಕಪಕ್ಕದಲ್ಲಿರುವ ನಿವಾಸಿಗಳಲ್ಲಿ ಆತಂಕ ಶುರುವಾಗಿದೆ. ರಾಜಕಾಲುವೆ ಪ್ಲಾಸ್ಟಿಕ್ ಚೀಲಗಳಿಂದ ತುಂಬಿ ಹೋಗಿದ್ದು, ಇದನ್ನು ಸ್ವಚ್ಛಗೊಳಿಸುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನ ವಾಗುತ್ತಿಲ್ಲ. ಕೂಡಲೇ ರಾಜಕಾಲುವೆಯ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಕಲ್ಪಿಸಬೇಕು.

ಮೊಹಮ್ಮದ್ ರಫಿ, ಸೀತಪ್ಪ ಲೇಔಟ್

‘ರಾಜಾಜಿನಗರ: ರಸ್ತೆ ಸರಿಪಡಿಸಿ’

ರಾಜಾಜಿನಗರದ ಜೈನ್ ದೇವಸ್ಥಾನಕ್ಕೆ ಸಂಪರ್ಕಿಸುವ ರಸ್ತೆಯ ದುಃಸ್ಥಿತಿ

ರಾಜಾಜಿನಗರದ ಎರಡನೇ ಮುಖ್ಯರಸ್ತೆಯ ನಾಲ್ಕನೇ ಬ್ಲಾಕ್‌ನ ನಾಕೋಡ್ ಜೈನ್ ದೇವಸ್ಥಾನವನ್ನು ಸಂಪರ್ಕಿಸುವ ರಸ್ತೆ ಮತ್ತು ಪಾದಚಾರಿ ಮಾರ್ಗದಲ್ಲಿ ಗುಂಡಿ ಬಿದ್ದಿದೆ. ಇದರಿಂದ, ವಾಹನ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ರಸ್ತೆಯಲ್ಲಿ ಗುಂಡಿ ಬಿದ್ದ ಪರಿಣಾಮ ಪ್ರತಿನಿತ್ಯ ಸಂಚಾರದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸಿದ ಉದಾಹರಣೆಗಳಿವೆ. ಇತ್ತೀಚೆಗೆ ನಗರದಲ್ಲಿ ಮಳೆ ಆಗುತ್ತಿದೆ. ಇದರಿಂದ, ಗುಂಡಿ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ಗುಂಡಿ ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವಪ್ರಸಾದ್, ರಾಜಾಜಿನಗರ

‘ಬಾಗಲಗುಂಟೆ: ರಸ್ತೆ ಗುಂಡಿ ಮುಚ್ಚಿ’

ಬಾಗಲಗುಂಟೆಯ ತೋಟದಗುಡ್ಡದಹಳ್ಳಿ ಅಕ್ಷರ ಸಿರಿ ವಿದ್ಯಾಮಂದಿರದ ಮುಂಭಾಗದ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ

ಬಾಗಲಗುಂಟೆ ವ್ಯಾಪ್ತಿಯ ತೋಟದಗುಡ್ಡದಹಳ್ಳಿಯ ಬೈರವೇಶ್ವರ ವೃತ್ತದ ಅಕ್ಷರ ಸಿರಿ ವಿದ್ಯಾಮಂದಿರದ ಮುಂಭಾಗದ ರಸ್ತೆ ಗುಂಡಿಗಳು ಬಿದ್ದು ಸಂಪೂರ್ಣವಾಗಿ ಹಾಳಾಗಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾದ ಪರಿಣಾಮ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಮಳೆಯಾದ ಸಂದರ್ಭದಲ್ಲಿ ವಾಹನ ಸವಾರರು ಈ ರಸ್ತೆಯಲ್ಲಿ ಸಂಚರಿಸಲು ಹರಸಾಹಸ ಪಡಬೇಕು. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕು.

ವೀರಪ್ಪ ಕೆ., ಬಾಗಲಗುಂಟೆ

‘ರಾಜರಾಜೇಶ್ವರಿನಗರ ಅಗೆದ ಗುಂಡಿ ಮುಚ್ಚಿ’

ರಾಜರಾಜೇಶ್ವರಿನಗರ ರಸ್ತೆಯ ಪಕ್ಕದಲ್ಲಿ ಅಗೆದಿರುವ ಗುಂಡಿ

ರಾಜರಾಜೇಶ್ವರಿನಗರ ಬಿಎಚ್‌ಇಎಲ್ ಲೇಔಟ್‌ನ 2ನೇ ಹಂತದ 7ನೇ ಕ್ರಾಸ್‌ನಲ್ಲಿ ಬೆಂಗಳೂರು ಜಲ ಮಂಡಳಿಯ ಕೊಳವೆ ದುರಸ್ತಿಗೆ ಅಗೆದ ಗುಂಡಿಯನ್ನು ಹಾಗೆಯೇ ಬಿಡಲಾಗಿದೆ. ಕೊಳವೆ ದುರಸ್ತಿ ಕೆಲಸವೂ ಮಾಡಿಲ್ಲ. ರಸ್ತೆಯ ತಿರುವಿನಲ್ಲಿಯೇ ಈ ಗುಂಡಿ ತೆಗೆದಿದ್ದು, ಅಪಾಯಕ್ಕೆ ಆಹ್ವಾನ ನೀಡಿದಂತಿದೆ. ಇದರಿಂದ, ವಾಹನ ಸವಾರರು ಹಾಗೂ ಪಾದಚಾರಿಗಳ ಸಂಚಾರಕ್ಕೆ ಸಂಚಕಾರ ಬಂದಿದೆ. ಕಳೆದ ಒಂದು ವಾರದಿಂದ ಈ ಭಾಗದ ನಿವಾಸಿಗಳಿಗೆ ಕುಡಿಯುವ ನೀರಿನ ಪೂರೈಕೆ ಮಾಡುತ್ತಿಲ್ಲ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳು ಈ ಕೊಳವೆ ದುರಸ್ತಿಗೊಳಿಸಿ, ಗುಂಡಿಯನ್ನು ಮುಚ್ಚಬೇಕು.

ರವಿ, ರಾಜರಾಜೇಶ್ವರಿನಗರ

‘ರಸ್ತೆಯಲ್ಲಿ ಹರಿಯುವ ಚರಂಡಿ ನೀರು’

ಬಿಟಿಎಂ ಲೇಔಟ್ ಎರಡನೇ ಹಂತದ ಶಾಪರ್ಸ್ ಸ್ಟಾಪ್ ಪಕ್ಕದ ಇಂಡಿಯನ್ ಓವರ್‌ಸಿಸ್ ಬ್ಯಾಂಕ್‌ನ ಮುಂಭಾಗದ ಮ್ಯಾನ್‌ಹೋಲ್ ಕಟ್ಟಿಕೊಂಡು ಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. 15 ದಿನಗಳಿಂದ ತ್ಯಾಜ್ಯ ನೀರು ರಸ್ತೆಯಲ್ಲಿಯೇ ಹರಿಯುತ್ತಿದೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಈ ಬಗ್ಗೆ ಗಮನ ಹರಿಸುತ್ತಿಲ್ಲ. ಕೂಡಲೇ ಇಲ್ಲಿ ಕಟ್ಟಿಕೊಂಡಿರುವ ಮ್ಯಾನ್‌ಹೋಲ್ ಅನ್ನು ಸರಿಪಡಿಸಬೇಕು.

ವೇಣು ಕುಮಾರ್, ಯತೀಶ್, ಬಿಟಿಎಂ ಲೇಔಟ್


ಬಿಟಿಎಂ ಲೇಔಟ್‌ನ ರಸ್ತೆಯಲ್ಲಿ ಹರಿಯುತ್ತಿರುವ ಚರಂಡಿ ನೀರು

ದಕ್ಷಿಣ ಭಾರತದ ಮೊದಲ ಹವಾನಿಯಂತ್ರಿತ ಪಾಲಿಕೆ ಬಜಾರ್ ● ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ

‘ನಗರದಲ್ಲಿ ಇನ್ನಷ್ಟು ಪಾಲಿಕೆ ಬಜಾರ್ ನಿರ್ಮಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಲು ನಗರದಲ್ಲಿ ಸಾಧ್ಯ ಇರುವ ಎಲ್ಲ ಕಡೆಗಳಲ್ಲಿ ಪಾಲಿಕೆ ಬಜಾರ್‌ಗಳನ್ನು ನಿರ್ಮಿಸಿ’ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ವಿಜಯನಗರ ಬಸ್ ಹಾಗೂ ಮೆಟ್ರೊ ನಿಲ್ದಾಣಗಳ ಬಳಿ ನಿರ್ಮಿಸಿರುವ ದಕ್ಷಿಣ ಭಾರತದ ಮೊದಲ ಹವಾನಿಯಂತ್ರಿತ ಮಾರುಕಟ್ಟೆಯನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಕೃಷ್ಣಪ್ಪ ಅವರ ಕನಸಿನ ಕೂಸು ಇದು. ಈ ಪಾಲಿಕೆ ಬಜಾರ್‌ನ ಹಿಂದೆ ಅವರ 10 ವರ್ಷಗಳ ಪ್ರಯತ್ನವಿದೆ. ಅವರು ನನ್ನ ಮುಂದೆ ಈ ಬಗ್ಗೆ ಪ್ರಸ್ತಾವ ಇಟ್ಟ ಬಳಿಕ 2017ರಲ್ಲಿ ನಾನು ಪಾಲಿಕೆ ಬಜಾರ್‌ಗೆ ₹5 ಕೋಟಿ ಮಂಜೂರು ಮಾಡಿದ್ದೆ. ಈಗ ಒಟ್ಟು ₹13 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಪಾಲಿಕೆ ಬಜಾರ್ ನಿರ್ಮಾಣಗೊಂಡಿದೆ’ ಎಂದು ಶ್ಲಾಘಿಸಿದರು.

ಪಾಲಿಕೆ ಬಜಾರ್ ವಿಶೇಷತೆ

- ಒಟ್ಟು ವಿಸ್ತೀರ್ಣ: **1,165** ಚದರ ಮೀಟರ್
- ಬಜಾರ್‌ನ ಉದ್ದ **136** ಮೀಟರ್, ಅಗಲ **11** ಮೀಟರ್
- ಪ್ರತಿ ಮಳಿಗೆಯ ವಿಸ್ತೀರ್ಣ **9** ಚದರ ಮೀಟರ್
- ಒಟ್ಟು ಮಳಿಗೆಗಳು **79**
- ಹೊರಾಂಗಣದಲ್ಲಿ **5**, ಒಳಾಂಗಣದಲ್ಲಿ **26** ಎ.ಸಿ. ಯುನಿಟ್‌ಗಳು
- **1** ಲಿಫ್ಟ್, **2** ಎಸ್ಕಲೇಟರ್, **8** ಪ್ರವೇಶ ದ್ವಾರ, **145** ವಿದ್ಯುತ್ ದೀಪಗಳು
- ಪ್ರತಿ ಮಳಿಗೆಗೆ ಅಗ್ನಿಶಾಮಕ ಉಪಕರಣ ಅಳವಡಿಕೆ

ವಿಜಯನಗರದಲ್ಲಿ ನಿರ್ಮಿಸಿರುವ ‘ಶ್ರೀಕೃಷ್ಣದೇವರಾಯ ಪಾಲಿಕೆ ಬಜಾರ್’ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಉದ್ಘಾಟಿಸಿದರು. ಶಾಸಕರಾದ ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಕಾಂಗ್ರೆಸ್ ಮುಖಂಡ ಬಿ.ಎಸ್. ಶಿವಣ್ಣ ಮಳವಳ್ಳಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಬೆಂಗಳೂರು ನಗರ ಬಹಳ ವೇಗವಾಗಿ ಬೆಳೆಯುತ್ತಿದೆ. ಇಲ್ಲಿ ಬಸ್ ನಿಲ್ದಾಣ ಹಾಗೂ ಮೆಟ್ರೊ ರೈಲು ನಿಲ್ದಾಣವಿರುವ ಸ್ಥಳದಲ್ಲಿಯೇ ಈ ಮಾರುಕಟ್ಟೆ ನಿರ್ಮಾಣಗೊಂಡಿರುವುದರಿಂದ ಜನರಿಗೆ ಅನುಕೂಲವಾಗಿದೆ. ಒಂದೇ ಕಡೆ ಎಲ್ಲ ತರಹದ ವ್ಯಾಪಾರಕ್ಕೆ ವ್ಯವಸ್ಥೆ ಕಲ್ಪಿಸಿರುವುದು ಉತ್ತಮ ಕಾರ್ಯ. ಗಾಂಧಿ ಬಜಾರ್‌ನಂಥ ಜನಸಂದಣಿ ಹೆಚ್ಚಿರುವ ಪ್ರದೇಶಗಳಲ್ಲಿ ಇಂಥ ಬಜಾರ್‌ಗಳು ನಿರ್ಮಾಣಗೊಳ್ಳಬೇಕು’ ಎಂದು ಸಲಹೆ ನೀಡಿದರು.

ಗ್ಯಾರಂಟಿ ಯೋಜನೆಗಳ ಬಗ್ಗೆ ವಿರೋಧ ಪಕ್ಷಗಳು ಎಷ್ಟೇ ಟೀಕೆ, ಅಪಪ್ರಚಾರ ಮಾಡಿದರೂ ‘ಗ್ಯಾರಂಟಿ’ ನಿಲ್ಲಿಸುವುದಿಲ್ಲ. ಜೊತೆಗೆ ಬೆಂಗಳೂರು ನಗರವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಲು ₹1.60 ಲಕ್ಷ ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ವಿವರಿಸಿದರು.

ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಮಾತನಾಡಿ, ‘ನಾನು ದೆಹಲಿಗೆ ಹೋದಾಗ ಅಲ್ಲಿನ ಪಾಲಿಕೆ ಬಜಾರ್ ನೋಡಿದ್ದೆ. ನಮ್ಮಲ್ಲಿಯೂ ಇಂಥ ಬಜಾರ್ ಆಗಬೇಕು ಎಂಬ ಯೋಚನೆ ಆಗ ಬಂದಿತ್ತು. ಬೀದಿ ಬದಿಯಲ್ಲಿ ವ್ಯಾಪಾರ ಮಾಡಿದಾಗ ಓಡಾಡುವ ಜನರಿಗೆ, ವಾಹನಗಳಿಗೆ ಮಾತ್ರವಲ್ಲ, ವ್ಯಾಪಾರಿಗಳಿಗೂ ತೊಂದರೆ ಉಂಟಾಗುತ್ತದೆ. ಅದನ್ನು ತಪ್ಪಿಸಲು ಈ ರೀತಿ ಪಾಲಿಕೆ ಬಜಾರ್ ನಿರ್ಮಿಸಬೇಕು ಎಂಬ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಂದೆ ಇಟ್ಟಾಗ ಅವರು ಅನುದಾನ ನೀಡಿದರು’ ಎಂದು ನೆನಪು ಮಾಡಿಕೊಂಡರು.

ಗೋವಿಂದರಾಜನಗರ ಶಾಸಕ ಪ್ರಿಯಕೃಷ್ಣ, ಕಾಂಗ್ರೆಸ್ ಮುಖಂಡ ಬಿ.ಎಸ್. ಶಿವಣ್ಣ ಮಳವಳ್ಳಿ, ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಸಂಗೀತ ನಿರ್ದೇಶಕ ಸಾಧು ಕೋಕಿಲ, ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

ಹೆಸರಿನ ಗೊಂದಲ!

ಪಾಲಿಕೆ ಬಜಾರ್‌ಗೆ ವಿಜಯನಗರದ ಅರಸನಾಗಿದ್ದ ಶ್ರೀಕೃಷ್ಣದೇವರಾಯನ ಹೆಸರನ್ನು ಇಟ್ಟಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರನ್ನು ಉಲ್ಲೇಖಿಸಿದರು.

‘ಮೈಸೂರು ರಾಜ್ಯದ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ನೀಡಿದ್ದರು. ಅವರ ಹೆಸರನ್ನು ಪಾಲಿಕೆ ಬಜಾರ್‌ಗೆ ಇಟ್ಟಿರುವುದು ಅವರಿಗೆ ನೀಡಿರುವ ಗೌರವ’ ಎಂದು ಹೇಳಿದರು.

ಮಹಿಳಾ ಮೀಸಲಾತಿ: ಭರವಸೆ

ತುಮಕೂರು: ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ಮುಂದಿನ ಲೋಕಸಭಾ ಚುನಾವಣೆಯೊಳಗೆ ಜಾರಿಯಾಗಲಿದೆ ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದಲ್ಲಿ ಭಾನುವಾರ ವೀರಶೈವ ಲಿಂಗಾಯತ ನೌಕರರ ಸಮಾವೇಶದಲ್ಲಿ ಮಾತನಾಡಿದರು. ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡುವುದರಿಂದ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಾಣವಾಗಲಿದೆ. ಇದರಿಂದ ಮಹಿಳೆಯರು ಸಂಘಟಿತರಾಗಬಹುದು. ಅವರ ಸಮಸ್ಯೆ ಸಮಾಜದ ಮುನ್ನೆಲೆಗೆ ಬರುತ್ತದೆ ಎಂದು ತಿಳಿಸಿದರು.

ನಗರದಲ್ಲಿ ಇಂದು

‘ಗದ್ದರ್’ ಪರಿನಿಬ್ಬಾಣ ದಿನ: ಚಾಲನೆ: ಎನ್. ವೆಂಕಟೇಶ್, ನುಡಿ ನಮನ: ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಆಶಯ ನುಡಿ: ಅಂಬಣ್ಣ ಅರೋಲಿಕರ್, ‘ಗದ್ದರ್ ಹೋರಾಟದ ಬದುಕು ಬೌದ್ಧತ್ವದೆಡೆಗೆ ಪಯಣ’ದ ಕುರಿತು: ಬಂಜಗೆರೆ ಜಯಪ್ರಕಾಶ್, ಅತಿಥಿಗಳು: ಜಿ.ವಿ. ವೆನ್ನಲ, ಸಿ. ದಾನಪ್ಪ ನಿಲೋಗಲ್, ಮಾವಳ್ಳಿ ಶಂಕರ್, ಗೊಲ್ಲಹಳ್ಳಿ ಶಿವಪ್ರಸಾದ್, ದು. ಸರಸ್ವತಿ, ಸ್ಥಳ: ಪುಟ್ಟಣಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಸಂಜೆ 4

ವಿ.ಜಿ. ಅಂದಾನಿ ಅವರಿಗೆ ಸನ್ಮಾನ ಹಾಗೂ ಅವರ ಕಲಾಕೃತಿಗಳ ಪ್ರದರ್ಶನ: ಅಧ್ಯಕ್ಷತೆ: ಬಿ.ಎಲ್. ಶಂಕರ್, ಪ್ರದರ್ಶನಕ್ಕೆ ಚಾಲನೆ: ಪ.ಸ. ಕುಮಾರ್, ಅತಿಥಿಗಳು: ಕೆ.ವಿ. ಸುಬ್ರಹ್ಮಣ್ಯ, ಜಿ.ಆರ್. ಈರಣ್ಣ, ಉಪಸ್ಥಿತಿ: ಎಂ.ಜೆ. ಕಮಲಾಕ್ಷಿ, ಕೆ.ಎಸ್. ಅಪ್ಪಾಜಯ್ಯ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

ಅಗರಬತ್ತಿ ಮತ್ತು ಸುಗಂಧ ವಸ್ತುಸಂಗ್ರಹಾಲಯದ ಉದ್ಘಾಟನೆ: ಅರುಣ್ ಯೋಗಿರಾಜ್, ಆಯೋಜನೆ: ಉಲ್ಲಾಸ್ ಅಗರಬತ್ತಿ, ಸ್ಥಳ: ಪ್ರೆಸ್ಟೀಜ್ ಶ್ರೀಹರಿಖೋಡೆ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಸಂಜೆ 4.30

‘ಶಾಸ್ತ್ರೀಯ ಭಾಷೆಯಾಗಿ ಕನ್ನಡ– ಇತ್ತೀಚಿನ ಸವಾಲು ಮತ್ತು ಸಾಧ್ಯತೆ’ ಚಿಂತನಾಗೋಷ್ಠಿ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಅತಿಥಿ: ಸಂತೋಷ ಹಾನಗಲ್ಲ, ವಿಷಯ ಮಂಡನೆ: ಅನ್ನಪೂರ್ಣ ಎನ್.ಎಸ್., ಪ್ರಾಸ್ತಾವಿಕ ನುಡಿ: ಎಂ. ತಿಮ್ಮಯ್ಯ, ಉಪಸ್ಥಿತಿ: ಮಹೇಶ ಜೋಶಿ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಶ್ರೀಕೃಷ್ಣ ಜನ್ಮಾಷ್ಟಮಿ: ಬೆಳಿಗ್ಗೆ 5ಕ್ಕೆ ಸುಪ್ರಭಾತ, ನಗರ ಸಂಕೀರ್ತನ, 9ಕ್ಕೆ ವಿಶೇಷ ಭಜನೆ, 10ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ವೇದಪಠಣ, ಕೃಷ್ಣ ನೀ ಬೇಗನೆ ಬಾರೋ ಗೀತಗಾಯನ: ಬಾಲವಿಕಾಸ ಮಕ್ಕಳಿಂದ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಬಾಬಾ ಆಶ್ರಮ, ಕಾಡುಗೋಡಿ

‘ಶ್ರೀಕೃಷ್ಣ ಲೀಲಾಮೃತಂ’ ನೃತ್ಯ ನಾಟಕ ಪ್ರದರ್ಶನ: ಪ್ರಸ್ತುತಿ: ಪವಿತ್ರಾ ಶ್ರೀಧರ್ ಮತ್ತು ತಂಡ, ಅತಿಥಿ: ನಂದಿನಿ ಕೆ. ಮೆಹ್ತಾ, ಆಯೋಜನೆ: ಕಲಾನಿಧಿ ಆರ್ಟ್ಸ್ ಅಕಾಡೆಮಿ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಭಜನೆ: ಆಯೋಜನೆ ಮತ್ತು ಸ್ಥಳ: ನಾರಾಯಣ ಸದನ ಭಜನೆ ಮಂದಿರ, ಚಾಮರಾಜಪೇಟೆ, ಸಂಜೆ 7

ಹರಿದಾಸರು ಕಂಡ ಶ್ರೀಕೃಷ್ಣ ದಾಸವಾಣಿ: ಗಾಯನ: ರಮ್ಯಾ ಸುಧೀರ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ್ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ಉಡುಪಿ ಪುತ್ತಿಗೆ ಮಠ, ಗೋವರ್ಧನಗಿರಿ, ಬಸವನಗುಡಿ, ರಾತ್ರಿ 10

ಗಾಂಧಿ ಸ್ಮಾರಕ ನಿಧಿ ಕಾರ್ಯಕ್ರಮದಲ್ಲಿ ಸಚಿವ ಎಚ್‌.ಕೆ. ಪಾಟೀಲ ಕಳವಳ

‘ಸರ್ಕಾರಿ ಬ್ಯಾಂಕ್‌ಗಳ ಹಣವೂ ದರೋಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭ್ರಷ್ಟಾಚಾರದ ಸ್ವರೂಪ ಇತ್ತೀಚೆಗೆ ಬದಲಾಗಿದ್ದು, ಸರ್ಕಾರಿ ಬ್ಯಾಂಕ್‌ಗಳ ಖಾತೆಗಳಲ್ಲಿರುವ ಹಣವೂ ನೇರವಾಗಿ ವಂಚಕರಿಗೆ ವರ್ಗಾವಣೆಯಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ 75ನೇ ವರ್ಷದ ಸಂಸ್ಮರಣೆಗಾಗಿ ಭಾನುವಾರ ಹಮ್ಮಿಕೊಂಡಿದ್ದ ‘21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ’ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಇತ್ತೀಚೆಗೆ ಗಾಂಧೀಜಿಯನ್ನೂ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಗಾಂಧೀಜಿ ಫೋಟೋ ಹೆಚ್ಚೆಚ್ಚು ಕಾಣುತ್ತಿರುವ ಕಡೆಯೇ ದರೋಡೆಕೋರರಿದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವು ದರೋಡೆ ಸ್ವರೂಪ ಪಡೆದಿದೆ. ಹಿಂದೆ ಯಾವುದೇ ಒಂದು ನಿರ್ದಿಷ್ಟ ಕೆಲಸ ಮಾಡಿಕೊಡಲು ಅಧಿಕಾರಿಗಳು ಲಂಚ ಪಡೆಯುತ್ತಿದ್ದರು. ಆ ಹಣದಿಂದ ಕಾರು, ಮನೆ ಖರೀದಿಸುತ್ತಿದ್ದರು. ಈಗ ದರೋಡೆಯ ಸ್ವರೂಪ ಕಲ್ಪನೆಗೂ ಮೀರಿ ಬದಲಾಗಿದೆ. ಇಂತಹ ಸಮಾಜದಲ್ಲಿ ಬದಲಾವಣೆ ತರಲು ಗಾಂಧಿ ಸ್ಮಾರಕ ನಿಧಿ ಮುಂದಾಗಬೇಕು’ ಎಂದು ಹೇಳಿದರು.

‘ಗಾಂಧೀಜಿ ಅವರು ಬುದ್ಧಿವಂತಿಕೆಯಿಂದ ಬ್ರಿಟಿಷರ ವಿರುದ್ಧ ಸತ್ಯಾಗ್ರಹ ಮಾಡಿದ್ದರು. ಈ ಮೂಲಕ ಸ್ವಾತಂತ್ರ್ಯ ಕೊಡಿಸಲು ಶ್ರಮಿಸಿದ್ದರು. ಈಗ ಸತ್ಯಾಗ್ರಹ ಅಪಾಯದಲ್ಲಿದೆ. ಅನ್ಯಾಯದ ವಿರುದ್ಧ ಸತ್ಯಾಗ್ರಹ ಕೈಗೊಂಡರೆ ಪೊಲೀಸರು ಬಂಧಿಸುತ್ತಾರೆ. ಕೇಂದ್ರ ಸರ್ಕಾರವು ಕಾನೂನು ತಿದ್ದುಪಡಿಯ ಮೂಲಕ ಸತ್ಯಾಗ್ರಹದ ಸತ್ವವನ್ನು ಕಿತ್ತೊಗೆಯುವ ಪ್ರಯತ್ನ ಮಾಡಿದೆ. ಗಾಂಧಿ ಸಂಸ್ಥೆಗಳ ಆಸ್ತಿ ಸಂರಕ್ಷಣೆಗೆ ವಿಶೇಷ ಕಾನೂನು ರೂಪಿಸಬೇಕಿದೆ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನ್ಯಾ. ಎನ್. ಸಂತೋಷ್ ಹೆಗ್ಡೆ, ಎಚ್‌.ಕೆ. ಪಾಟೀಲ ಹಾಗೂ ವೂಡೇ ಪಿ. ಕೃಷ್ಣ ಸಮಾಲೋಚನೆ ನಡೆಸಿದರು – ಪ್ರಜಾವಾಣಿ ಚಿತ್ರ

ದುರಾಸೆಗೆ ಮದ್ದಿಲ್ಲ: ನಿವೃತ್ತ ಲೋಕಾಯುಕ್ತ, ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಮಾತನಾಡಿ, ‘ಅಪರಾಧಗಳು ಹಾಗೂ ಭ್ರಷ್ಟಾಚಾರವನ್ನು ಹತ್ತಿರದಿಂದ ಕಂಡಿದ್ದೇನೆ. ಅಧಿಕಾರದಲ್ಲಿರುವವರ ಸ್ವಾರ್ಥ ಮತ್ತು ದುರಾಸೆಯು ಭ್ರಷ್ಟಾಚಾರವನ್ನು ಪೋಷಿಸುತ್ತಿದೆ. ಪ್ರಸ್ತುತ ಸನ್ನಿವೇಶಕ್ಕೆ ಸಮಾಜದ ಸ್ಥಿತಿಯೇ ಕಾರಣ. ಎಲ್ಲ ಕಾಯಿಲೆಗಳಿಗೂ ಮದ್ದಿದೆ. ಆದರೆ, ದುರಾಸೆಗೆ ಇಲ್ಲ’ ಎಂದರು.

‘ಜೀಪ್ ಹಗರಣ, ಬೊಫೋರ್ಸ್ ಹಗರಣ, ಕಾಮನ್‌ವೆಲ್ತ್ ಹಗರಣ, 2ಜಿ ಹಗರಣ, ಕಲ್ಲಿದ್ದಲು ಹಗರಣ ಸೇರಿ ವಿವಿಧ ಹಗರಣಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಲೂಟಿ ಹೊಡೆಯಲಾಗಿದೆ. ಆಡಳಿತದಲ್ಲಿ ರುವವರ ಸ್ವಾರ್ಥ-ದುರಾಸೆ ಇವುಗಳಿಗೆಲ್ಲಾ ಕಾರಣ’ ಎಂದು ತಿಳಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ವಿಚಾರ ಸಂಕಿರಣದ ಎರಡು ದಿನಗಳ ವರದಿ ಮಂಡಿಸಿದರು.

ಕೃಷ್ಣಜನ್ಮಾಷ್ಟಮಿ: ವಾಹನ ಸಂಚಾರ ನಿರ್ಬಂಧ

ಬೆಂಗಳೂರು: ಶ್ರೀಕೃಷ್ಣ ಜನ್ಮಾಷ್ಟಮಿ ಉತ್ಸವದ ಪ್ರಯುಕ್ತ ಸೋಮವಾರ ಮತ್ತು ಮಂಗಳವಾರ ನಗರದ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಸಂಚಾರ ವಿಭಾಗದ ಪೊಲೀಸರು ಆದೇಶ ಹೊರಡಿಸಿದ್ದಾರೆ.

ಸಂಚಾರ ನಿರ್ಬಂಧ, ಪರ್ಯಾಯ ಮಾರ್ಗಗಳ ಬಗ್ಗೆ ಪೊಲೀಸರು ‘ಎಕ್ಸ್’ನಲ್ಲಿ ಮಾಹಿತಿ ನೀಡಿದ್ದಾರೆ.

ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ದೇವಸಂದ್ರ ಮುಖ್ಯರಸ್ತೆಯಲ್ಲಿರುವ ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಪೂಜೆ ಮತ್ತು ರಥೋತ್ಸವ ಏರ್ಪಡಿಸಲಾಗಿದೆ.

ಈ ರಸ್ತೆಯಲ್ಲಿ ವಾಹನ ಸಂಚಾರವನ್ನು ಸೋಮವಾರ ಬೆಳಿಗ್ಗೆ 8ರಿಂದ ಮಂಗಳವಾರ ಬೆಳಿಗ್ಗೆ 6ರವರೆಗೆ ನಿರ್ಬಂಧಿಸಲಾಗಿದೆ. ವಾಹನ ಸವಾರರಿಗೆ ಬದಲಿ ಮಾರ್ಗ ವ್ಯವಸ್ಥೆ ಮಾಡಲಾಗಿದೆ.

ಪರ್ಯಾಯ ಮಾರ್ಗ: ಕೊಡಿಗೇಹಳ್ಳಿ ಮತ್ತು ಹೂಡಿ ಮುಖ್ಯರಸ್ತೆ ಕಡೆಯಿಂದ ದೇವಸಂದ್ರ ಮತ್ತು ಕೆ.ಆರ್.ಪುರ ಮಾರುಕಟ್ಟೆ ಕಡೆಗೆ ಸಂಚರಿಸುವ ವಾಹನ ಸವಾರರು ಜೈ ಭುವನೇಶ್ವರಿ ಜಂಕ್ಷನ್ ಲುಲೂಸ್ ಬೇಕರಿ ಹತ್ತಿರ ಬಲ ತಿರುವು ಪಡೆದು ಅಯ್ಯಪ್ಪನಗರ ಮುಖ್ಯರಸ್ತೆ – ಬಸವನಪುರ ಮುಖ್ಯರಸ್ತೆ ಭಟ್ಟರಹಳ್ಳಿ ಜಂಕ್ಷನ್ ಮೂಲಕ ಕೆ.ಆರ್.ಪುರ ಮಾರುಕಟ್ಟೆ ಕಡೆಗೆ ಸಂಚರಿಸಬೇಕು.

ಕೆ.ಆರ್.ಪುರ ಮಾರುಕಟ್ಟೆ ಕಡೆಯಿಂದ ಕೊಡಿಗೇಹಳ್ಳಿ ಮತ್ತು ಹೂಡಿ ಮುಖ್ಯರಸ್ತೆ ಕಡೆಗೆ ಸಂಚರಿಸುವ ವಾಹನ ಸವಾರರು ಜಿ.ಆರ್.ಟಿ. ಹತ್ತಿರ ಬಲ ತಿರುವು ಪಡೆದು ಬಸವನಪುರ ಮುಖ್ಯರಸ್ತೆಯಲ್ಲಿ (ಕೃಷ್ಣ ಟಾಕೀಸ್ ರಸ್ತೆ) ಸಂಚರಿಸಿ ಭಟ್ಟರಹಳ್ಳಿ ಜಂಕ್ಷನ್ ಮೂಲಕ ಸಾಗಬೇಕು.

ಕಾರ್ಯಕ್ರಮದಲ್ಲಿ ಡಾ.ಸಿ.ಎನ್. ಮಂಜುನಾಥ್ ಅವರು ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಹಾಗೂ ನೋಟ್ ಬುಕ್ ಕಿಟ್ ವಿತರಿಸಿದರು. ರಾಜೇಶ್ ಶಾ, ಸಂಜಯ್ ಲುಂಕದ್ ಉಪಸ್ಥಿತರಿದ್ದರು

ಪಠ್ಯಪುಸ್ತಕ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನ ಯುವಕ ಸಂಘವು ಸುವರ್ಣ ಮಹೋತ್ಸವದ ಪ್ರಯುಕ್ತ ನಗರದಲ್ಲಿ ಹಮ್ಮಿಕೊಂಡಿದ್ದ ಪುಸ್ತಕ ಬ್ಯಾಂಕ್ ಕಾರ್ಯಕ್ರಮದಲ್ಲಿ ಸರ್ಕಾರಿ ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳಿಗೆ ಕಂಪ್ಯೂಟರ್, ಪಠ್ಯಪುಸ್ತಕ ಮತ್ತು ನೋಟ್ ಬುಕ್‌ಗಳನ್ನು ವಿತರಿಸಲಾಯಿತು.

ಈ ವೇಳೆ ಮಾತನಾಡಿದ ರಾಜಸ್ಥಾನ ಯುವಕ ಸಂಘದ ಶೈಕ್ಷಣಿಕ ಮತ್ತು ಸಾರ್ವಜನಿಕ ಸೇವಾ ಟ್ರಸ್ಟ್‌ನ ಬೆಂಗಳೂರು ಘಟಕದ ಅಧ್ಯಕ್ಷ ರಾಜೇಶ್ ಶಾ, ‘ಕೆಲ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಖರೀದಿಸುವುದು ಕಷ್ಟಸಾಧ್ಯ. ಆದ್ದರಿಂದ ಪುಸ್ತಕ ಬ್ಯಾಂಕ್ ಯೋಜನೆ ಪ್ರಾರಂಭಿಸಲಾಯಿತು. ಯೋಜನೆಯಿಂದ 1.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಲಾಭ ಪಡೆದುಕೊಂಡಿದ್ದಾರೆ’ ಎಂದು ಹೇಳಿದರು.

ಸಂಘದ ಬೆಂಗಳೂರು ಘಟಕದ ಅಧ್ಯಕ್ಷ ಸಂಜಯ್ ಲುಂಕದ್, ‘ನಗರದ ಹೃದಯ ಭಾಗದಲ್ಲಿ ಇರುವ ಎಸ್‌ಎಲ್‌ಎನ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ₹3.25 ಕೋಟಿ ವೆಚ್ಚದಲ್ಲಿ ಸಂಘದ ಬ್ಲಾಕ್ ಪ್ರಾರಂಭಿಸಲಾಗುವುದು’ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಡಾ. ಸಿ. ಎನ್. ಮಂಜುನಾಥ್, ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಮತ್ತು ನೋಟ್ ಬುಕ್‌ಗಳನ್ನು ವಿತರಿಸಿ ಶುಭ ಹಾರೈಸಿದರು. ಭಗವಾನ್ ಮಹಾವೀರ ಜೈನ್ ಆಸ್ಪತ್ರೆಯ ಅಧ್ಯಕ್ಷ ಮೋಹನ್‌ಲಾಲ್ ರಂಕಾ ಮತ್ತು ನೇತ್ರ ತಜ್ಞ ಡಾ. ನರಪತ್ ಸೋಲಂಕಿ ಅವರನ್ನು ಗೌರವಿಸಲಾಯಿತು.

ಕೃಷ್ಣ ಜನ್ಮಾಷ್ಟಮಿ

ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಬೆಂಗಳೂರು ಪ್ರೆಸ್‌ಕ್ಲಬ್ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ಮತ್ತು ರಾಧೆಯ ವೇಷ ಭೂಷಣ ಧರಿಸಿದ್ದ ಮಕ್ಕಳು ಮನ ಸೆಳೆದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನಗರದ ರಾಜಾಜಿನಗರ ಇಸ್ಕಾನ್ ದೇವಾಲಯದಲ್ಲಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಭಾನುವಾರ ನಡೆದ ವಿಶೇಷ ಪೂಜೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ/ ಎಂ. ಎಸ್. ಮಂಜುನಾಥ್

ರಾಜ್ಯಮಟ್ಟದ ಸಮಾವೇಶ: ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅಭಿಮತ

‘ಶಿಕ್ಷಣ ನೀತಿ: ಸಂವಿಧಾನದ ಚೌಕಟ್ಟಿನಲ್ಲಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದ ಆಶಯಗಳು ಮತ್ತು ತತ್ವಗಳ ಚೌಕಟ್ಟಿನಲ್ಲೇ ಶಿಕ್ಷಣ ನೀತಿಯನ್ನು ರೂಪಿಸಬೇಕಿದೆ’ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಹೇಳಿದರು.

ಅಖಿಲ ಭಾರತೀಯ ವಿದ್ಯಾರ್ಥಿಗಳ ಸಂಘ (ಎಐಎಸ್‌ಎ) ಭಾನುವಾರ ಆಯೋಜಿಸಿದ್ದ ‘ರಾಜ್ಯ ಶಿಕ್ಷಣ ನೀತಿ–ಉತ್ತಮ ಶಿಕ್ಷಣಕ್ಕಾಗಿ ರಾಜ್ಯಮಟ್ಟದ ಸಮಾವೇಶ’ದಲ್ಲಿ ಅವರು ಮಾತನಾಡಿದರು.

‘ಸಂವಿಧಾನದ ಆಶಯಗಳಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಬಲಿಷ್ಠವಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕು. ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಲಾಗಿತ್ತು. ಆದರೆ, ಸತತವಾಗಿ ಈ ವ್ಯವಸ್ಥೆಯನ್ನು ದುರ್ಬಲಗೊಳಿಸಲಾಗಿದೆ’ ಎಂದು ದೂರಿದರು. ‘ಜಾತಿ, ಲಿಂಗ, ಧರ್ಮದ ಹೆಸರಿನಲ್ಲಿ ನಡೆಯುವ ತಾರತಮ್ಯಗಳನ್ನು ತಡೆಗಟ್ಟುವ ಶಿಕ್ಷಣ ನೀತಿ ರೂಪಿಸಬೇಕು. ಹಾಗೆಯೇ, ಮೂಲಭೂತ ಹಕ್ಕುಗಳನ್ನು ಆಧರಿಸಿ ಸಾರ್ವತ್ರಿಕ ಶಿಕ್ಷಣ ನೀಡುವಂತಹ ವ್ಯವಸ್ಥೆಗೆ ಆದ್ಯತೆ ನೀಡಬೇಕು. ಪ್ರತಿಯೊಬ್ಬರಿಗೆ ಶಿಕ್ಷಣ ಸಿಗುವಂತೆ ಮಾಡುವುದು ಸರ್ಕಾರದ ಜವಾಬ್ದಾರಿ ಆಗಿದೆ’ ಎಂದು ಹೇಳಿದರು.

‘ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕಾ ನಿಧಿ (ಸಿಎಸ್‌ಆರ್) ಬಳಸಿಕೊಂಡು ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವ ಪ್ರಸ್ತಾವ ಸರ್ಕಾರದ ಮುಂದಿದೆ. ಇದರಿಂದ, ಸರ್ಕಾರಿ ಶಾಲೆಗಳ ಬಲವರ್ಧನೆ ಹಾಗೂ ಗುಣಾತ್ಮಕ ಶಿಕ್ಷಣ ಪಡೆಯುವುದು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

ನಗರದಲ್ಲಿ ಭಾನುವಾರ ನಡೆದ ‘ರಾಜ್ಯ ಶಿಕ್ಷಣ ನೀತಿ–ಉತ್ತಮ ಶಿಕ್ಷಣಕ್ಕಾಗಿ ರಾಜ್ಯಮಟ್ಟದ ಸಮಾವೇಶ’ದಲ್ಲಿ ಶಿಕ್ಷಣ ತಜ್ಞರಾದ ವಿ.ಪಿ. ನಿರಂಜನಾರಾಧ್ಯ, ಜವಾಹರ್ ನೇಸನ್ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

‘ಧರ್ಮದ ಹೆಸರಲ್ಲಿ ದೇಶ ವಿಭಜನೆ ಯತ್ನ’

‘ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಮೂಲಕ ಭಾರತದಲ್ಲಿ ಕೇಂದ್ರಿಕೃತ ಶಿಕ್ಷಣ ತರುವ ಪ್ರಯತ್ನ ನಡೆದಿದೆ. ಆದರೆ, ಇವರ ಭಾರತ ಎಲ್ಲರನ್ನೂ ಒಳಗೊಂಡ ಭಾರತವಲ್ಲ. ಅದು ಜಾತಿ, ಧರ್ಮದ ಹೆಸರಿನಲ್ಲಿ ವಿಭಜನೆಗೊಂಡ ಭಾರತವಾಗಿದೆ’ ಎಂದು ಶಿಕ್ಷಣ ತಜ್ಞ ಜವಾಹರ್ ನೇಸನ್ ಹೇಳಿದರು.

‘ಎನ್‌ಇಪಿ ಕೇಸರಿಕರಣಕ್ಕೆ ಅವಕಾಶ ಕಲ್ಪಿಸುತ್ತದೆ. ವೇದ, ದರ್ಶನ, ಶಾಸ್ತ್ರಗಳನ್ನು ಆಧರಿಸಿದ ಶಿಕ್ಷಣಕ್ಕೆ ಆದ್ಯತೆ ನೀಡುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ತಮಗೆ ಬೇಕಾದ ಪ್ರತಿಯೊಂದು ಸಿದ್ಧಾಂತವನ್ನು ಶಿಕ್ಷಣ ನೀತಿಯ ಮೂಲಕ ಅನುಷ್ಠಾನಗೊಳಿಸುತ್ತಿದ್ದಾರೆ’ ಎಂದರು.

ಶಿಕ್ಷಣ ನೀತಿ ಎಂದರೆ ಯಾರೋ ನಾಲ್ಕು ಜನ ಮೇಧಾವಿಗಳು ಸೇರಿ ಮಾಡುವಂತಹದಲ್ಲ. ಶಿಕ್ಷಣದ ವಾರಸುದಾರರಾದ ಪಾಲಕರು, ಶಿಕ್ಷಕರು ಮತ್ತು ಜನಸಾಮಾನ್ಯರೊಂದಿಗೆ ಚರ್ಚಿಸಿ ನೀತಿ ರೂಪಿಸಬೇಕು

ವಿ.ಪಿ. ನಿರಂಜನಾರಾಧ್ಯ, ಶಿಕ್ಷಣ ತಜ್ಞ

ದಿ ರೂರಲ್ ಎಜುಕೇಷನ್ ಸೊಸೈಟಿ (ರಿ).,

ಎಂ ಜಿ ರಸ್ತೆ, ಕನಕಪುರ ಟೌನ್–562117, ರಾಮನಗರ ಜಿಲ್ಲೆ.

ಸಂಖ್ಯೆ: ಆರ್.ಇ.ಎಸ್./160/2024–25 **ಪ್ರಕಟಣೆ** ದಿನಾಂಕ: 24/08/2024

ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು, ರವರಿಂದ ಅನುಮೋದಿತ, ನಿರ್ದೇಶಕರು [ಪ್ರೌಢಶಿಕ್ಷಣ] ಶಾ.ಶಿ.ಇ. ಬೆಂಗಳೂರು, ರವರ ಜ್ಞಾಪನ ಪತ್ರದ ಸಂಖ್ಯೆ: ಸಿ8(8)ಶಾ.ಶಿ.ಅ.ಪ.ಪ್ರ.ಅನು/ಇ–1291440/1/2023–24 ದಿನಾಂಕ: 19.08.2024ರ ಜ್ಞಾಪನ ಪತ್ರದಂತೆ, ನಮ್ಮ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಗ್ರಾಮಾಂತರ ವಿವಿಧೋದ್ದೇಶ ಪ್ರೌಢಶಾಲೆ, ಕನಕಪುರ ಟೌನ್, ಇಲ್ಲಿ ಖಾಲಿ ಇರುವ ಸಹ ಶಿಕ್ಷಕ ಹುದ್ದೆ ಭರ್ತಿ ಮಾಡಿಕೊಳ್ಳಲು ಪ್ರಕಟಣೆ ನೀಡಲು ಅನುಮತಿ ನೀಡಿರುತ್ತಾರೆ. ಅದರಂತೆ ಅರ್ಹ ಅಭ್ಯರ್ಥಿಗಳಿಂದ ಈ ಕೆಳಕಂಡ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ.291.ಎಲ್.ಬಿ.ಪಿ2015 ದಿನಾಂಕ: 29.09.2016ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು ಹಾಗೂ ಪ್ರಚಲಿತ ಸರ್ಕಾರದ ಆದೇಶಗಳನ್ವಯ ವಯೋಮಿತಿ ಇರಬೇಕು.

ಕ್ರ.ಸಂ.	ಹುದ್ದೆಯ ವಿವರ	ಖಾಲಿ ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಅಭ್ಯರ್ಥಿ ಮೀಸಲಾತಿ–ಬಿಂದು
01	ಸಹ ಶಿಕ್ಷಕ– ಕಲಾ	01	ಬಿ.ಎ., ಬಿ.ಇಡ್.	ಸಾಮಾನ್ಯ (ಯೋ.ನಿ.ಅ) ಬಿಂದು – 34

ಷರತ್ತುಗಳು:–

1. ಅರ್ಹ ಅಭ್ಯರ್ಥಿಗಳು ತಮ್ಮ ಹೆಸರು, ವಿದ್ಯಾರ್ಹತೆ, ವಯಸ್ಸು, ಅನುಭವ ಇತ್ಯಾದಿ ವಿವರಗಳನ್ನೊಳಗೊಂಡ ಅರ್ಜಿಯ ಜೊತೆ ಶೈಕ್ಷಣಿಕ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು, ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಮುಚ್ಚಿದ ಲಕೋಟೆಯಲ್ಲಿ ಈ ಕೆಳಗಿನ ವಿಳಾಸಕ್ಕೆ ಜಾಹೀರಾತು ಪ್ರಕಟಣೆಯಾದ 21 ದಿನಗಳೊಳಗೆ ಸಲ್ಲಿಸುವುದು.
2. ಅರ್ಜಿಯ ಒಂದು ತತ್ಸಮಾನ ಪ್ರತಿಯನ್ನು, ಉಪನಿರ್ದೇಶಕರು [ಆಡಳಿತ], ಶಾಲಾ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ ಇವರಿಗೆ ಪ್ರತ್ಯೇಕವಾಗಿ ಸಲ್ಲಿಸುವುದು.
3. ಸಾಮಾನ್ಯ ಮತ್ತು ಇತರೆ ವರ್ಗದವರು ರೂ. 1000/– ಹಾಗೂ ಪ.ಜಾತಿ/ಪ.ಪಂಗಡದವರು ರೂ. 500/– ರ ಮೊಬಲಗಿನ ಬ್ಯಾಂಕ್ ಹುಂಡಿಯನ್ನು, ಕಾರ್ಯದರ್ಶಿ, ದಿ ರೂರಲ್ ಎಜುಕೇಷನ್ ಸೊಸೈಟಿ, ಕನಕಪುರ, ರವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು. ಡಿಡಿ ಮೊಬಲಗಿನ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
4. ಅರ್ಜಿಗಳ ಮುಖಪುಟ ಮತ್ತು ಕವರ್ ಮೇಲ್ಭಾಗದಲ್ಲಿ ಅರ್ಜಿ ಸಲ್ಲಿಸಿದ ಹುದ್ದೆಯ ಹೆಸರು, ಮೀಸಲಾತಿಯನ್ನು ಸ್ಪಷ್ಟವಾಗಿ, ಕಡ್ಡಾಯವಾಗಿ ನಮೂದಿಸಬೇಕು. ಅಸ್ಪಷ್ಟ ಮತ್ತು ದೃಢೀಕೃತ ದಾಖಲೆಗಳಿಲ್ಲದ, ಮಾಹಿತಿಗಳಿಲ್ಲದ ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.
5. ನಿಗದಿತ ದಿನಾಂಕವನ್ನು ಮೀರಿ ಬರುವ ಅರ್ಜಿಗಳನ್ನು ಯಾವ ಹಿಂಬರಹ ನೀಡದೆ ತಿರಸ್ಕರಿಸಲಾಗುವುದು ಹಾಗೂ ಹಿಂದಿರುಗಿಸಲಾಗುವುದಿಲ್ಲ.

ಅರ್ಜಿ ಸಲ್ಲಿಸುವ ವಿಳಾಸ:

ಕಾರ್ಯದರ್ಶಿಗಳು, ದಿ ರೂರಲ್ ಎಜುಕೇಷನ್ ಸೊಸೈಟಿ (ರಿ), ಕನಕಪುರ, ಎಂ ಜಿ ರಸ್ತೆ, ಕನಕಪುರ – 562117, ರಾಮನಗರ ಜಿಲ್ಲೆ.

ವಿಶೇಷ ಸೂಚನೆ:- ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ ಹಾಗೂ ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಯ ತೀರ್ಪು ಅಂತಿಮವಾಗಿರುತ್ತದೆ.

ಸಹಿ/– ಪುಟ್ಟಸ್ವಾಮಿ, ಕಾರ್ಯದರ್ಶಿಗಳು

ಹೊನ್ನಾವರ ತಾಲ್ಲೂಕಿನಲ್ಲಿ 12 ಸೆಂ.ಮೀ ಮಳೆ • ಹಿಡಕಲ್, ನವಿಲುತೀರ್ಥ ಜಲಾಶಯಗಳಲ್ಲಿ ಒಳಹರಿವು ಹೆಚ್ಚಳ

ಉತ್ತರ ಕನ್ನಡ ಜಿಲ್ಲೆಯ ಹಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಕಾರವಾರ/ಬೆಳಗಾವಿ: ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆ ಭಾನುವಾರ ಆಗಾಗ ಬಿರುಸಿನ ಮಳೆ ಸುರಿದಿದೆ. ಹೊನ್ನಾವರ ತಾಲ್ಲೂಕಿನಲ್ಲಿ 12 ಸೆಂ.ಮೀ ಮಳೆ ಬಿದ್ದಿದೆ.

ಜೊಯಿಡಾ ತಾಲ್ಲೂಕಿನ ಸೂಪಾ ಜಲಾಶಯಕ್ಕೆ ನೀರಿನ ಹರಿವಿನ ಪ್ರಮಾಣ 25 ಸಾವಿರ ಕ್ಯುಸೆಕ್ ತಲುಪಿದ್ದು, 147.55 ಟಿಎಂಸಿ ಅಡಿ ಸಂಗ್ರಹಣಾ ಸಾಮರ್ಥ್ಯದ ಜಲಾಶಯದಲ್ಲಿ 126.66 ಟಿಎಂಸಿ ಅಡಿ ನೀರು ಸಂಗ್ರಹಣೆಯಾಗಿದೆ. 'ಯಾವುದೇ ಕ್ಷಣದಲ್ಲಿ ಜಲಾಶಯದಿಂದ ನೀರು ಹೊರಬಿಡುವ ಸಾಧ್ಯತೆ ಇದೆ' ಎಂದು ಕೆಪಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಒಳಹರಿವು ಹೆಚ್ಚಳ: ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಭಾನುವಾರವೂ ಮಳೆ ಮುಂದುವರಿದಿದೆ. ಮಲಪ್ರಭಾ, ಘಟಪ್ರಭಾ ನದಿಗಳು ಉಕ್ಕಿ ಹರಿಯುತ್ತಿದ್ದು, ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಮತ್ತು ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯಗಳಲ್ಲಿ ಒಳಹರಿವಿನ ಪ್ರಮಾಣ ಹೆಚ್ಚಿದೆ.

ನವಿಲುತೀರ್ಥ ಅಣೆಕಟ್ಟಿಯಲ್ಲಿ 35.25 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಹಿಡಕಲ್ ಜಲಾಶಯದಲ್ಲಿ 50.39 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಶನಿವಾರ ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಬೆಳಗಾವಿ ತಾಲ್ಲೂಕಿನ ದೇಸೂರಿನಲ್ಲಿ ಮನೆಯೊಂದು ಕುಸಿದಿದೆ. ಮೂಡಲಗಿ ತಾಲ್ಲೂಕಿನ ಸುಣಧೋಳಿ ಮತ್ತು ಅವರಾದಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳು ಜಲಾವೃತಗೊಂಡಿವೆ. ಹಲವಾರು ಗ್ರಾಮಗಳ ಸಂಚಾರ ಕಡಿತಗೊಂಡಿದೆ.

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ) ವರದಿ: ಘಟಪ್ರಭಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿರುವುದರಿಂದ ನಂದಗಾಂವ-ಅವರಾದಿ ಸೇತುವೆ ಜಲಾವೃತವಾಗಿವೆ. ಕೆಲ ಗ್ರಾಮಗಳ ಸಂಪರ್ಕ ಕಡಿತವಾಗಿದೆ.

ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ಸಮೀಪದ ಢವಳೇಶ್ವರ ಸೇತುವೆವರೆಗೆ ನೀರು ಬಂದಿದೆ –ಪ್ರಜಾವಾಣಿ ಚಿತ್ರ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	123,72	4,537	4,189
ಹಾರಂಗಿ	2,859	2,857.70	576	700
ಕಬಿನಿ	2,284.00	2,282.32	3,220	1,000
ಹೇಮಾವತಿ	2,922	2,921	5,172	5,125
ಲಿಂಗನಮಕ್ಕಿ	1,819	1,816.90	14,980	7,345
ಸೂಪಾ (ಮೀ)	564	558.95	25,954	3,121.94
ಮಾಣಿ	595	589.38	1,314	0
ತುಂಗಭದ್ರಾ	1,633	1,624.87	23,725	10,023
ಮಲಪ್ರಭಾ	2,079.50	2,077.70	11,912	9,644
ಘಟಪ್ರಭಾ	2175	2,174.06	13,524	13,195
ಭದ್ರಾ *	186	180.05	5,486	3,241
ಆಲಮಟ್ಟಿ (ಮೀ)	519.60	519.60	28,838	28,838
ನಾರಾಯಣಪುರ (ಮೀ)	492.25	491.90	35,000	40,800

* ನೆಲಮಟ್ಟದಿಂದ

ಒಡೆದ ತುಂಗಾ ಮೇಲ್ದಂಡೆ ನಾಲೆ: 300 ಎಕರೆ ಬೆಳೆ ಹಾನಿ

ನ್ಯಾಮತಿ (ದಾವಣಗೆರೆ ಜಿಲ್ಲೆ): ತಾಲ್ಲೂಕಿನ ಬಸವನಹಳ್ಳಿ ಗ್ರಾಮದ ಬಳಿ ತುಂಗಾ ಮೇಲ್ದಂಡೆ ನಾಲೆ ಒಡೆದು ಭಾನುವಾರ ಅಪಾರ ಪ್ರಮಾಣದ ನೀರು ಜಮೀನು, ತೋಟಗಳಿಗೆ ನುಗ್ಗಿ ಹಾನಿಯಾಗಿದೆ.

ಎರಡು ದಶಕಗಳ ಹಿಂದೆ ನಿರ್ಮಾಣವಾಗಿದ್ದ ನಾಲೆಯ ಒಂದು ಬದಿ ಒಡೆದ ಪರಿಣಾಮ 300 ಎಕರೆ ಭೂಮಿ ಜಲಾವೃತವಾಗಿದೆ. ಇದರಿಂದ ಅಡಿಕೆ, ಮೆಕ್ಕೆಜೋಳ, ಭತ್ತ, ಹತ್ತಿ ಹಾಗೂ ತರಕಾರಿ ಬೆಳೆಗಳಿಗೆ ತೀವ್ರ ಹಾನಿಯಾಗಿದೆ.

ಈಚೆಗೆ ತುಂಗಾ ಜಲಾಶಯದಿಂದ ನೀರಾವರಿಗಾಗಿ ನೀರು ಹರಿಸಲಾಗಿತ್ತು. ಕಾಲುವೆ ಮೊದಲೇ ಶಿಥಿಲಗೊಂಡಿತ್ತು. ಒಂದು ಬದಿಯಲ್ಲಿ ಸಣ್ಣ ಸಣ್ಣ ರಂಧ್ರಗಳಿದ್ದರೂ ದುರಸ್ತಿ ಮಾಡದ ಪರಿಣಾಮ ನೀರಿನ ರಭಸಕ್ಕೆ ಕಾಲುವೆ ಒಡೆದಿದೆ.

'ಕಾಲುವೆಯನ್ನು ಉಡ, ಹೆಗ್ಗಣದಂತಹ ಪ್ರಾಣಿಗಳು ಕೊರೆದು ರಂಧ್ರ ಮಾಡಿದ್ದು, ನೀರಿನ ರಭಸಕ್ಕೆ ಕಾಲುವೆ ಒಡೆದಿರಬಹುದು. ನೀರು ಜಮೀನಿಗೆ ಹರಿದ ಕಾರಣ ಅಲ್ಲಲ್ಲಿ ಕಾಲುವೆಯ ಗೇಟ್‌ಗಳನ್ನು ತೆರೆದು ನೀರನ್ನು ಹಳ್ಳಗಳಿಗೆ ಹರಿಸಲಾಗಿದೆ. ಇದರಿಂದ ನೀರಿನ ರಭಸ ಕಡಿಮೆಯಾಗಿದ್ದು, ಹೆಚ್ಚಿನ ಹಾನಿ ತಪ್ಪಿಸಲಾಗಿದೆ. ದುರಸ್ತಿ ಕಾರ್ಯವನ್ನು ಕೂಡಲೇ ಕೈಗೊಳ್ಳಲಾಗುವುದು' ಎಂದು ತುಂಗಾ ಮೇಲ್ದಂಡೆ ಯೋಜನೆಯ ಎಂಜಿನಿಯರ್‌ಗಳಾದ ಕೃಷ್ಣಮೂರ್ತಿ, ಕೆ. ಮಂಜುನಾಥ 'ಪ್ರಜಾವಾಣಿ'ಗೆ ತಿಳಿಸಿದರು.

'ನಾಲೆ ಒಡೆದ ಪರಿಣಾಮ ನೂರಾರು ಎಕರೆ ಬೆಳೆ ನಾಶವಾಗಿದೆ. ಮುಂಗಾರು ಹಂಗಾಮಿನ ಬೆಳೆಗೆ ತೊಂದರೆಯಾಗದಂತೆ ದುರಸ್ತಿ ಕಾರ್ಯವನ್ನು ಸೋಮವಾರದಿಂದಲೇ ಪ್ರಾರಂಭಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಬೆಳೆ ಪರಿಶೀಲಿಸಿ ಪರಿಹಾರ ಕೊಡಿಸಲಾಗುವುದು' ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ಡಿ.ಜಿ.ಶಾಂತನಗೌಡ ಭರವಸೆ ನೀಡಿದರು.

ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿ ಗ್ರಾಮದ ಹೊರವಲಯದಲ್ಲಿ ತುಂಗಾ ಮೇಲ್ದಂಡೆ ಯೋಜನೆಯ ನಾಲೆ ಭಾನುವಾರ ಒಡೆಯಿತು

ಸುದ್ದಿ 2 ನಿಮಿಷ

ಮದ್ಯ, ಮಾಂಸಾಹಾರ ಮುಕ್ತ ರಾಜಭವನ: ಸಿಎಚ್‌ವಿ

ಮೈಸೂರು: 'ಶಿಲ್ಲಾಂಗ್‌ನಲ್ಲಿರುವ ರಾಜಭವನವನ್ನು ಮಾಂಸಾಹಾರ ಮತ್ತು ಮದ್ಯಪಾನದಿಂದ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದೇನೆ. ಇದನ್ನು, ನಾನು ಅಲ್ಲಿರುವವರೆಗೂ ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಸೂಚನೆಯನ್ನೂ ನೀಡಿದ್ದೇನೆ' ಎಂದು ಮೇಘಾಲಯದ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ತಿಳಿಸಿದರು.

ಇಲ್ಲಿನ ಸುತ್ತೂರು ಶಾಖಾ ಮಠದಲ್ಲಿ ಭಾನುವಾರ ನಡೆದ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 109ನೇ ಜಯಂತಿ ಮಹೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೈಸೂರು ಮತ್ತು ಮೇಘಾಲಯದ ಸಂಬಂಧ ನಾನು ರಾಜ್ಯಪಾಲ ಆಗಿರುವಷ್ಟು ಅವಧಿಯದ್ದಷ್ಟೇ ಆಗಬಾರದು. ಅದು ಮುಂದುವರಿಯಬೇಕು. ಇದಕ್ಕಾಗಿ ಶಿಲ್ಲಾಂಗ್ ಹಾಗೂ ಸುತ್ತೂರು ಮಠದ ನಡುವೆ ಶಾಶ್ವತ ಸೇತುವೆ ಕಟ್ಟುವ ಬಯಕೆ ನನ್ನದು. ಅದಕ್ಕಾಗಿ ಶ್ರೀಮಠ ಹಾಗೂ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಅಲ್ಲಿಗೆ ಪ್ರವೇಶಿಸಬೇಕು. ಇಲ್ಲಿನ ಕಲ್ಯಾಣ ಕಾರ್ಯಕ್ರಮವನ್ನು ಅಲ್ಲಿನ ಜನರೂ ಕಾಣುವಂತಾಗಬೇಕು. ವಂಚಿತರೂ ಸೇವೆ ಪಡೆಯುವಂತಾಗಬೇಕು' ಎಂದು ವೇದಿಕೆಯಲ್ಲಿದ್ದ ಶ್ರೀಗಳನ್ನು ಆಹ್ವಾನಿಸಿದರು.

'ವಿಜಯಶಂಕರ್ ಅವರು ರಾಜಭವನದ ಪಾವಿತ್ರ್ಯತೆ ಕಾಪಾಡುವ ಶಪಥ ಮಾಡಿರುವುದು ಶ್ಲಾಘನೀಯ' ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಬಿಸಿಯೂಟ ಸೇವಿಸಿ ಅಸ್ವಸ್ಥ ಮುಖ್ಯ ಶಿಕ್ಷಕಿ ಅಮಾನತು

ಕುಷ್ಟಗಿ (ಕೊಪ್ಪಳ ಜಿಲ್ಲೆ): ಬಿಸಿಯೂಟ ಸೇವನೆ ನಂತರ ತಾಲ್ಲೂಕಿನ ಬಿಜಕಲ್ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಬಹಳಷ್ಟು ವಿದ್ಯಾರ್ಥಿಗಳು ವಾಂತಿಯಿಂದ ಅಸ್ವಸ್ಥಗೊಂಡ ಘಟನೆಗೆ ಸಂಬಂಧಿಸಿದಂತೆ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ್ದಾರೆ ಎಂಬ ಕಾರಣಕ್ಕೆ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಮಂಜುಳಾ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಈ ವಿಷಯ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಶ್ರೀಶೈಲ ಬಿರಾದಾರ ಆ.24 ರಂದು ಆದೇಶ ಹೊರಡಿಸಿದ್ದಾರೆ. ಅದಕ್ಕೂ ಮೊದಲು ಶಿಕ್ಷಕಿಗೆ ಕಾರಣ ಕೇಳುವ ನೋಟಿಸ್ ಜಾರಿಗೊಳಿಸಲಾಗಿತ್ತು.

ಆ. 23ರಂದು ಶಾಲೆಯಲ್ಲಿ ಬಿಸಿಯೂಟ ಸೇವಿಸಿದ ನಂತರ ಸಂಜೆ ವೇಳೆ 70ಕ್ಕೂ ಅಧಿಕ ಮಕ್ಕಳು ಅಸ್ವಸ್ಥಗೊಂಡು ದೋಟಿಹಾಳ ಮತ್ತು ಕುಷ್ಟಗಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು.ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಿಸಿಯೂಟ ಯೋಜನೆಯಲ್ಲಿ ಅಡುಗೆ ಸಿಬ್ಬಂದಿಯನ್ನೂ ಕೆಲಸದಿಂದ ವಜಾಗೊಳಿಸಲಾಗಿದೆ ಎಂದು ಅಕ್ಷರ ದಾಸೋಹ ಯೋಜನೆ ಸಹಾಯಕ ನಿರ್ದೇಶಕ ಕೆ.ಶರಣಪ್ಪ ತಿಳಿಸಿದ್ದಾರೆ.

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಭಾನುವಾರ ಅಂತರರಾಷ್ಟ್ರೀಯ ದಾಖಲೆಗಾಗಿ ಏಕಕಾಲದಲ್ಲಿ 350 ಕಲಾವಿದರು ನೃತ್ಯ ಪ್ರದರ್ಶಿಸಿದರು

ದಾಖಲೆಗಾಗಿ 350 ಕಲಾವಿದರಿಂದ ನೃತ್ಯ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಅಂತರರಾಷ್ಟ್ರೀಯ ದಾಖಲೆಗಾಗಿ ಏಕಕಾಲದಲ್ಲಿ 350 ಕಲಾವಿದರು ಭಾನುವಾರ ಶ್ರೀನಾಮ ರಾಮಾಯಣಂ ನೃತ್ಯ ಪ್ರದರ್ಶಿಸಿದರು.

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠ ಹಾಗೂ ಚನ್ನರಾಯಪಟ್ಟಣ ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಅಕಾಡೆಮಿ, ಮಕ್ಕಳು ಹಾಗೂ ಮಠದ ಹೆಸರನ್ನು ಸೇರಿಸುವ ಹಿನ್ನೆಲೆಯಲ್ಲಿ ಜಪಾನ್, ಜರ್ಮನಿ, ಇಂಡೋನೇಷ್ಯಾ ಹಾಗೂ ದೇಶದ ವಿವಿಧೆಡೆಯಿಂದ ಆಗಮಿಸಿದ್ದ ನೃತ್ಯ ಕಲಾವಿದರು ಒಂದೇ ವೇದಿಕೆಯಲ್ಲಿ 15 ನಿಮಿಷಗಳ ಕಾಲ ಶ್ರೀ ನಾಮ ರಾಮಾಯಣಂ ಗೀತೆಗೆ ಸಾಮೂಹಿಕವಾಗಿ ಹೆಜ್ಜೆ ಹಾಕಿದರು.

ಸುಬುಧೇಂದ್ರ ತೀರ್ಥ ಸ್ವಾಮೀಜಿ ಉದ್ಘಾಟಿಸಿದರು. ನ್ಯಾಷನಲ್ ಕ್ಲಾಸಿಕಲ್ ಡ್ಯಾನ್ಸ್ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಡಾ.ಸ್ವಾತಿ ಪಿ. ಭಾರದ್ವಾಜ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಕೆಪಿಎಸ್‌ಸಿ ಪರೀಕ್ಷೆ ಮುಂದೂಡಿಕೆ ಆಗ್ರಹಿಸಿ ಠಾಣೆಗೆ ಮುತ್ತಿಗೆ

ಒಂದನೇ ಪುಟದಿಂದ...

'ಠಾಣೆ ಮುಂದೆ ಧರಣಿ ನಡೆಸುವಾಗ ಯುವ ಮೋರ್ಚಾ ಕಾರ್ಯಕರ್ತರ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ. ನ್ಯಾಯಯುತ ಬೇಡಿಕೆ ಮುಂದಿಟ್ಟು ತೆರಳುತ್ತಿದ್ದ ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದು ದೌರ್ಜನ್ಯ ಎಸಗಿದ್ದಾರೆ' ಎಂದು ಧೀರಜ್ ಮುನಿರಾಜು ಆರೋಪಿಸಿದರು.

'ಪರೀಕ್ಷೆ ಮುಂದೂಡಬೇಕು ಎಂದು ವಿದ್ಯಾರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದರು. ಅವರನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಯಲ್ಲಿ ಇರಿಸಲಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಪ್ರತಿಭಟನೆಯನ್ನು ಪೊಲೀಸ್ ಬಲ ಬಳಸಿ ಹತ್ತಿಕ್ಕುವ ಕೆಲಸ ಮಾಡುತ್ತಿದೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ದೂರಿದರು.

> **ಕೆಪಿಎಸ್‌ಸಿ 2 ತಿಂಗಳ ಹಿಂದೆಯೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದೆ. ವಿರೋಧಿಸಿದವರನ್ನು ಬಂಧಿಸಲಾಗಿದೆ. ಪೊಲೀಸರನ್ನು ಅಮಾನತು ಮಾಡಬೇಕು**
> **ಸಿ.ಟಿ. ರವಿ,** ವಿಧಾನ ಪರಿಷತ್ ಸದಸ್ಯ

> **ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸುವವರನ್ನು ಹತ್ತಿಕ್ಕಲು ರಾಜ್ಯ ಸರ್ಕಾರ ಪೊಲೀಸ್ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ.**
> **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ತರಾತುರಿಯಲ್ಲಿ ಕೆಪಿಎಸ್‌ಸಿ ಪರೀಕ್ಷೆ ನಡೆಸುತ್ತಿಲ್ಲ'

'ಗೆಜೆಟೆಡ್ ಪ್ರೊಬೇಷನರಿ ಪೂರ್ವಭಾವಿ ಪರೀಕ್ಷೆಗೆ ತಯಾರಿ ನಡೆಸಲು ಅಭ್ಯರ್ಥಿಗಳಿಗೆ ಸಮಯ ನೀಡಲಾಗಿದೆ. ಕೆಪಿಎಸ್‌ಸಿ ತರಾತುರಿಯಲ್ಲಿ ಪರೀಕ್ಷೆ ನಡೆಸುತ್ತಿದೆ ಎಂಬ ಆರೋಪಕ್ಕೆ ಯಾವುದೇ ಆಧಾರವಿಲ್ಲ' ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ.

ಸರ್ಕಾರದ ಪರವಾಗಿ ಪತ್ರಿಕಾ ಪ್ರಕಟಣೆ ನೀಡಿರುವ ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, 'ಪರೀಕ್ಷೆಯನ್ನು ಮುಂದೂಡುವಂತೆ ಅಭ್ಯರ್ಥಿಗಳ ಸಣ್ಣ ಗುಂಪೊಂದು ಲಾಬಿ ನಡೆಸುತ್ತಿದೆ. ಎಲ್ಲ ರೀತಿಯಲ್ಲಿ ಒತ್ತಡ ಹೇರಲು ಯತ್ನಿಸುತ್ತಿರುವ ಈ ಗುಂಪಿನಲ್ಲಿರುವವರು, ಕೆಪಿಎಸ್‌ಸಿ, ಡಿಪಿಎಆರ್ ಮತ್ತು ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದಾರೆ. ವಾಟ್ಸ್‌ಆ್ಯಪ್ ಸಂದೇಶಗಳ ಸುರಿಮಳೆ ಸುರಿಸುತ್ತಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಕೆಲವೊಮ್ಮೆ ನನ್ನ ಫೋನ್ ಅನ್ನು ಏರೋಪ್ಲೇನ್ ಮೋಡ್‌ನಲ್ಲಿ ಇಡಬೇಕಾದ ಪರಿಸ್ಥಿತಿ ಬಂದೊದಗಿದೆ' ಎಂದಿದ್ದಾರೆ.

'ಮುಂದಿನ ಎರಡು ತಿಂಗಳವರೆಗೆ ಭಾನುವಾರಗಳು ಖಾಲಿ ಇಲ್ಲದಿರುವುದರಿಂದ ಕೆಲಸದ ದಿನ ಪರೀಕ್ಷೆ ನಡೆಸಲಾಗುತ್ತಿದೆ. ಅಲ್ಲದೆ, 2.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದು, ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಸುಮಾರು ₹4 ಕೋಟಿಯಿಂದ ₹5 ಕೋಟಿ ಖರ್ಚಾಗುತ್ತದೆ. ಎರಡು ತಿಂಗಳು ಮುಂದೂಡಿದರೆ ಮುದ್ರಿತ ಪತ್ರಿಕೆಗಳನ್ನು ನಾಶಪಡಿಸಿ ಹೊಸ ಪತ್ರಿಕೆಗಳನ್ನು ಮುದ್ರಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆಯಾಗುವ ಅಪಾಯ ಇರುವುದರಿಂದ ಪ್ರಶ್ನೆ ಪತ್ರಿಕೆಗಳನ್ನು ಹೆಚ್ಚು ಸಮಯ ಇಡುವಂತಿಲ್ಲ. ಕೆಪಿಎಸ್‌ಸಿ ಸುತ್ತ ಅನುಮಾನಗಳ ಹುತ್ತ ಎಂಬಂಥ ಪದಗಳನ್ನು ಬಳಸಿ ತಪ್ಪು ಮಾಹಿತಿ ಹರಡಿ, ಹಗರಣ ನಡೆದಿದೆ ಎಂಬಂತೆ ಬಿಂಬಿಸುವ ಯತ್ನವೂ ನಡೆಯುತ್ತಿದೆ' ಎಂದೂ ಹೇಳಿದ್ದಾರೆ.

'ಕೆಪಿಎಸ್‌ಸಿ ಅಥವಾ ಸರ್ಕಾರ ನೀಡಿರುವ ವಯೋಮಿತಿ ಸಡಿಲಿಕೆ ಅವಕಾಶ ಪಡೆದು ಸುಮಾರು 1,500 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಈ ಅಭ್ಯರ್ಥಿಗಳ ಲಾಬಿಗೆ ಮಣಿದರೆ ಸುಮಾರು 2.5 ಲಕ್ಷಕ್ಕೂ ಹೆಚ್ಚು ಅರ್ಜಿದಾರರು ಸಂಕಷ್ಟಕ್ಕೆ ಸಿಲುಕುತ್ತಾರೆ ಮತ್ತು ಅನ್ಯಾಯವನ್ನು ಎದುರಿಸಬೇಕಾಗುತ್ತದೆ' ಎಂದಿದ್ದಾರೆ.

'ಪೂರ್ವಭಾವಿ ಪರೀಕ್ಷೆಯನ್ನು ಮೊದಲು ಮೇ 5ರಂದು ನಡೆಸಲು ನಿಗದಿಪಡಿಸಲಾಗಿತ್ತಾದರೂ ಲೋಕಸಭೆ ಚುನಾವಣೆ ಕಾರಣಕ್ಕೆ ಜುಲೈ 21ಕ್ಕೆ ಮುಂದೂಡಲಾಗಿತ್ತು. ಬಳಿಕ ಆಗಸ್ಟ್ 25ಕ್ಕೆ ಮರು ನಿಗದಿಪಡಿಸಲಾಗಿತ್ತು. ಐಬಿಪಿಎಸ್ ಪರೀಕ್ಷೆ ಇದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಕಚೇರಿಯಲ್ಲಿ ನಡೆದ ಚರ್ಚೆಯ ಬಳಿಕ ಆಗಸ್ಟ್ 27ರಂದು ಪರೀಕ್ಷೆ ನಡೆಸಲು ಕೆಪಿಎಸ್‌ಸಿ ತೀರ್ಮಾನಿಸಿದೆ' ಎಂದೂ ಅವರು ವಿವರಿಸಿದ್ದಾರೆ.

ಐಪಿಎಸ್–ಕೆ.ಸಿಗೆ ಗದಗಿನ ಡಾ.ಸೋಮಶೇಖರ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಕಲಬುರಗಿ: ಭಾರತೀಯ ಮನೋ ವೈದ್ಯಕೀಯ ಸಂಸ್ಥೆಯ ಕರ್ನಾಟಕ ಘಟಕಕ್ಕೆ (ಐಪಿಎಸ್-ಕೆಸಿ) ನೂತನ ಪದಾಧಿಕಾರಿಗಳನ್ನು ಘೋಷಿಸಲಾಗಿದ್ದು, ನೂತನ ಅಧ್ಯಕ್ಷರಾಗಿ ಗದಗಿನ ಜಿಮ್ಸ್‌ನ ಪ್ರಾಧ್ಯಾಪಕ ಡಾ.ಸೋಮಶೇಖರ ಬಿಜ್ಜಳ ಆಯ್ಕೆಯಾಗಿದ್ದಾರೆ.

ಕಲ್ಯಾಣ ಕರ್ನಾಟಕ ಮನೋವೈದ್ಯರ ಸಂಘ (ಕೆಕೆಪಿಜಿ)ದ ನಗರದಲ್ಲಿ ಆಶ್ರಯದಲ್ಲಿ ಹಮ್ಮಿಕೊಂಡ 'ಕ್ಯಾನ್‌ಸಿಪ್ಸ್–2024' ಸಮ್ಮೇಳನದಲ್ಲಿ ಭಾನುವಾರ ಈ ಕುರಿತು ಘೋಷಣೆ ಮಾಡಲಾಯಿತು. ಇದೇ ವೇಳೆ, 2025ರ ಕ್ಯಾನ್‌ಸಿಪ್ಸ್ ಸಮ್ಮೇಳನವನ್ನು ಚಿಕ್ಕಮಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಯಿತು.

ನೂತನ ಪದಾಧಿಕಾರಿಗಳು: ಐಪಿಎಸ್–ಅಧ್ಯಕ್ಷರಾಗಿ ಡಾ.ಸೋಮಶೇಖರ ಬಿಜ್ಜಳ (ಗದಗ), ನಿಯೋಜಿತ ಅಧ್ಯಕ್ಷರಾಗಿ ಡಾ.ಅನಿಲಕುಮಾರ್ ಎಂ.ಎನ್. (ಮಣಿಪಾಲ), ಗೌರವ ಕಾರ್ಯದರ್ಶಿಯಾಗಿ ಡಾ.ನಾರಾಯಣ ಮುತಾಲಿಕ್ (ಬಾಗಲಕೋಟೆ), ಜಂಟಿ ಕಾರ್ಯದರ್ಶಿಯಾಗಿ ಡಾ.ಸುರೇಶ ವಿ.ಸಿ. (ಚಿಕ್ಕಬಳ್ಳಾಪುರ), ಖಜಾಂಚಿಯಾಗಿ ಡಾ.ಅಲೋಕ ಘನಾತೆ (ಕಲಬುರಗಿ) ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿ ಸದಸ್ಯರಾಗಿ ಡಾ.ಲೋಕೇಶ ಬಾಬು (ತುಮಕೂರು), ಡಾ.ಅಭಿಜಿತ ಎಚ್. (ಮೈಸೂರು), ಡಾ.ಸುಪ್ರಿಯಾ ಹೆಗ್ಡೆ ಆರೂರ (ಮಂಗಳೂರು), ಡಾ.ರಾಹುಲ್ ಮಂದಾಕನಳ್ಳಿ (ಕಲಬುರಗಿ), ಡಾ.ಸಮೀರ್ (ಹುಬ್ಬಳ್ಳಿ), ಡಾ.ಶಶಿಧರ ಬೀಳಗಿ (ಬೆಂಗಳೂರು) ಆಯ್ಕೆಯಾಗಿದ್ದಾರೆ. ಪದಾಧಿಕಾರಿಗಳ ಅಧಿಕಾರಾವಧಿ ಒಂದು ವರ್ಷ.

ಅತ್ಯಾಚಾರ ಪ್ರಕರಣ: ಯುವತಿಯ ರಕ್ತದಲ್ಲಿ ಡ್ರಗ್ಸ್ ಅಂಶ ಪತ್ತೆ

ಉಡುಪಿ: ಕಾರ್ಕಳದಲ್ಲಿ ಅತ್ಯಾಚಾರಕ್ಕೆ ಒಳಗಾದ ಯುವತಿಯ ರಕ್ತ ಪರೀಕ್ಷೆಯ ವರದಿ ಬಂದಿದ್ದು, ಆಕೆಯ ರಕ್ತದ ಮಾದರಿಯಲ್ಲಿ ಡ್ರಗ್ಸ್ ಅಂಶ ಪತ್ತೆಯಾಗಿದೆ.

ಮೊದಲ ಆರೋಪಿ ಅಲ್ತಾಫ್‌ನ ರಕ್ತಪರೀಕ್ಷೆಯ ವರದಿ ಹಾಗೂ ಬಿಯರ್ ಬಾಟಲ್ ತಂದುಕೊಟ್ಟ ಎರಡನೇ ಆರೋಪಿ ಕ್ಸೇವಿಯರ್ ರಿಚರ್ಡ್‌ನ ರಕ್ತ ಪರೀಕ್ಷೆಯ ವರದಿ ನೆಗೆಟಿವ್ ಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್ ತಿಳಿಸಿದ್ದಾರೆ.

ಯುವತಿಯ ರಕ್ತದ ಮಾದರಿ ಪರೀಕ್ಷೆಯಲ್ಲಿ ಡ್ರಗ್ಸ್ ಅಂಶ ಪತ್ತೆಯಾಗಿರುವ ಕಾರಣ ಆರೋಪಿ ಅಲ್ತಾಫ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ, ಆತ ಕಾರಿನಲ್ಲಿದ್ದ ಒಂದು ಪುಡಿಯನ್ನು ತೋರಿಸಿ 'ಇದನ್ನೇ ಆ ಹುಡುಗಿಗೆ ನೀಡಿದ್ದು' ಎಂದು ಹೇಳಿದ್ದಾನೆ ಎಂದೂ ವಿವರಿಸಿದ್ದಾರೆ. 'ಆ ಪುಡಿಯನ್ನು ನಾವು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ, ಅದು ಯಾವ ಮಾದಕ ದ್ರವ್ಯ ಎಂಬುದನ್ನು ದೃಢೀಕರಿಸುತ್ತೇವೆ ಮತ್ತು ಅದನ್ನೇ ಹುಡುಗಿಗೆ ನೀಡಲಾಗಿತ್ತೇ ಎಂಬುದರ ಬಗ್ಗೆ ಕೂಡ ತನಿಖೆ ನಡೆಸುತ್ತೇವೆ' ಎಂದು ಎಸ್‌ಪಿ ತಿಳಿಸಿದ್ದಾರೆ.

ಈ ಕುರಿತು ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಈ ಮಾದಕದ್ರವ್ಯವನ್ನು ಎಲ್ಲಿಂದ ಪಡೆದಿದ್ದಾರೆ ಮತ್ತು ಇದು ಎಲ್ಲಿಂದ ಬಂದಿದೆ ಎನ್ನುವುದರ ಬಗ್ಗೆ ತನಿಖೆ ನಡೆಯಲಿದೆ ಎಂದಿದ್ದಾರೆ.

'ಯುವತಿಯ ಆರೋಗ್ಯ ಸ್ಥಿತಿ ಸುಧಾರಿಸಿದ ಬಳಿಕ ಅವರನ್ನು ನ್ಯಾಯಾಂಗದ ಮುಂದೆ ಹಾಜರುಪಡಿಸಿ, ಆದಷ್ಟು ಬೇಗನೆ ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸುತ್ತೇವೆ' ಎಂದೂ ಹೇಳಿದ್ದಾರೆ.

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN - U04010KA2002SGC030438

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಬೆ.ವಿ.ಕಂ, ವಿಚಾರಣಾ ಸಂಖ್ಯೆ: **ಬೆವಿಕಂ/ಪ್ರವ್ಯ–ಡಾಸ್/ಸಿಎಸ್/ಒಎಫ್‌ಸಿ/24–25/10** ರ ಅನುಸಾರ 100 Mbps ಪಾಯಿಂಟ್ ಟು ಪಾಯಿಂಟ್ ಈಥರ್ನೆಟ್ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರು ಆಹ್ವಾನಿಸಲಾಗಿದೆ.
ಬಿಡ್ ದಾಖಲೆಗಳು ದಿನಾಂಕ: **26.08.2024, 16:00 ಗಂಟೆಯಿಂದ ಲಭ್ಯವಿರುತ್ತವೆ.** ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.09.2024 ರಂದು ಮಧ್ಯಾಹ್ನ 16:00 ಗಂಟೆಗೆ.** ಬಿಡ್‌ಗಳನ್ನು ದಿನಾಂಕ: **11.09.2024 ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು.**
ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in** ಮೂಲಕ ಪಡೆಯಬಹುದು. ಮಾಹಿತಿಗಾಗಿ ಕೆಪಿಪಿ ಸಹಾಯವಾಣಿ: +91 80 46010000, +91 80 68948777 ಅಥವಾ ಇ–ಮೇಲ್: **support@eprochelpdesk.com** ಸಂಪರ್ಕಿಸಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಡಾಸ್),
ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ **Mobile APP** ಡೌನ್‌ಲೋಡ್ ಮಾಡಿಕೊಳ್ಳಿ

ಅತ್ಯಾಚಾರಕ್ಕೆ ಯತ್ನ: ಯುವಕನಿಗೆ ಥಳಿತ

ಸುನೀಲ ಸಿದ್ದಪ್ಪ

ರಾಯಬಾಗ (ಬೆಳಗಾವಿ): ಪಟ್ಟಣದ ಹೊರವಲಯದಲ್ಲಿ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಯುವಕ ಸುನೀಲ ಸಿದ್ದಪ್ಪ ಧೀಪಾಳೆ(27) ಎಂಬಾತನನ್ನು ಸಾರ್ವಜನಿಕರೇ ಹಿಡಿದು ಥಳಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ.

'ಶಾಲೆ ಬಿಟ್ಟ ನಂತರ ಬಾಲಕಿ ಮನೆಗೆ ಹೊರಟಿದ್ದಾಗ ಡ್ರಾಪ್ ಕೊಡುವ ನೆಪದಲ್ಲಿ ಅತ್ಯಾಚಾರಕ್ಕೆ ಯತ್ನಿಸಿದ್ದ, ಪೋಕ್ಸೊ ಅಡಿ ಪ್ರಕರಣ ದಾಖಲಾಗಿದೆ.

ಆರು ನಿರ್ಣಯಗಳ ಅಂಗೀಕಾರ

ಬೆಳಗಾವಿ: ಇಲ್ಲಿ ವೈದ್ಯ ಸಾಹಿತಿ ಡಾ.ನಾ. ಸೋಮೇಶ್ವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಕನ್ನಡ ವೈದ್ಯ ಬರಹಗಾರರ ರಾಜ್ಯಮಟ್ಟದ 5ನೇ ಸಮ್ಮೇಳನದಲ್ಲಿ ಭಾನುವಾರ ಆರು ನಿರ್ಣಯಗಳನ್ನು ಅಂಗೀಕರಿಸಲಾಯಿತು.

'ಕನ್ನಡ ಸಂಘ ಮತ್ತು ಕನ್ನಡ ಬಳಗಗಳ ಮೂಲಕ ಕನ್ನಡ ವೈದ್ಯಕೀಯ ಸಾಹಿತ್ಯದ ಬೆಳವಣಿಗೆಗೆ ಕ್ರಮ ವಹಿಸಬೇಕು. ವೈದ್ಯರು ರಚಿಸಿದ ಕಥೆಗಳನ್ನು ಆಹ್ವಾನಿಸಿ, ಪ್ರಾತಿನಿಧಿಕ ಕಥಾ ಸಂಕಲನ ಪ್ರಕಟಿಸಬೇಕು. ವೈದ್ಯಕೀಯ ಸಾಹಿತ್ಯಕ್ಕೆ ಸಂಬಂಧಿಸಿದ ಮಾಹಿತಿ ಪ್ರಕಟಿಸಲು ಪ್ರಸಾರಾಂಗ ಸ್ಥಾಪಿಸಬೇಕು ಮತ್ತು ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಸಂಸ್ಥೆಗಳ ಪ್ರಸಾರಾಂಗಗಳ ಸಹಕಾರ ಪಡೆಯಬೇಕು. ವೈದ್ಯಕೀಯ ಗ್ರಂಥಾಲಯಗಳಲ್ಲಿ ಕನ್ನಡ ವೈದ್ಯಕೀಯ ಸಾಹಿತ್ಯವೂ ಲಭಿಸಲು ಕ್ರಮ ವಹಿಸಬೇಕು. ಪಠ್ಯ ಪುಸ್ತಕಗಳಲ್ಲಿ ಆರೋಗ್ಯ ಸಾಹಿತ್ಯಕ್ಕೆ ಒತ್ತು ನೀಡಬೇಕು. ಕನ್ನಡದ ಎಲ್ಲ ವೈದ್ಯ ಬರಹಗಾರರ ಮಾಹಿತಿ ದಾಖಲಿಸುವ ಕೆಲಸವಾಗಬೇಕು' ಎಂಬ ಆರು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕನ್ನಡ ವೈದ್ಯ ಬರಹಗಾರರ ಸಮಿತಿ ಅಧ್ಯಕ್ಷೆ ಡಾ.ವೀಣಾ ಸುಳ್ಯ ಇವುಗಳನ್ನು ಮಂಡಿಸಿದರು.

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in

No. DMG/MLS/Auction/2024-25 Dated: 26.08.2024

ಟೆಂಡರ್ ಪ್ರಕಟಣೆ

ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅವಧಿ ಮೀರಿದ / ರದ್ದುಗೊಂಡಿರುವ ಗಣಿ ಗುತ್ತಿಗೆಗಳಲ್ಲಿರುವ ಹಾಗೂ ರದ್ದುಗೊಂಡ ಸ್ಟಾಕ್‌ಯಾರ್ಡ್‌ಗಳಲ್ಲಿರುವ ಹಳೆಯ ದಾಸ್ತಾನನ್ನು MSTC ಮೂಲಕ ಹರಾಜು ಮಾಡಲು ಟೆಂಡರ್ ಕರೆಯಲಾಗಿದೆ.
ಅರ್ಹತಾ ಷರತ್ತುಗಳು, ನಿಯಮಗಳು ಮತ್ತು ಷರತ್ತುಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸುವ ದಿನಾಂಕ ಮತ್ತು ಸಮಯವನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನೀಡಲಾಗಿದೆ. MSTC ಪೋರ್ಟಲ್‌ನಲ್ಲಿ ಪ್ರತ್ಯೇಕ ಲಾಟ್ ವೈಸ್ ಹರಾಜು ಅಧಿಸೂಚನೆಗಳನ್ನು ಪ್ರಕಟಿಸಲಾಗಿದೆ. ಆಯಾ ಲಾಟ್‌ಗಳ ಇ–ಹರಾಜು ಪ್ರಕ್ರಿಯೆಗಾಗಿ ಟೆಂಡರ್ ದಾಖಲೆಗಳು, ಅಧಿಸೂಚನೆಗಳು, ಇತ್ತೀಚಿನ ಮಾಹಿತಿಗಳು ಮತ್ತು ಇತರ ವಿವರಗಳು MSTC Ltd ನ ವೆಬ್‌ಸೈಟ್ https://www.mstcecommerce.com/auctionhome/aucsearch/search.jsp–ಇದರಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಲಭ್ಯವಿರುತ್ತವೆ.
ಹಳೆಯ ದಾಸ್ತಾನಿನ ಪ್ರತಿ ಲಾಟ್ ಅನ್ನು "ಎಲ್ಲಿ ಹೇಗಿದೆಯೋ ಹಾಗೆ ಮತ್ತು ಯಾವುದೇ ದೂರು ರಹಿತ" ಆಧಾರದ ಮೇಲೆ ಹರಾಜು ಮಾಡಲಾಗುತ್ತದೆ. ಭಾಗವಹಿಸುವ ಮೊದಲು ಆಸಕ್ತ ಬಿಡ್‌ದಾರರು ಕಬ್ಬಿಣ/ಮ್ಯಾಂಗನೀಸ್ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತ ಪಡಿಸಿಕೊಳ್ಳಬೇಕು. ಬಿಡ್‌ನ ದೃಢೀಕರಣದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಲ್ಲ.
ಆಸಕ್ತ ಬಿಡ್ ದಾರರು MSTC Ltd ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸಹಿ/–
ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ

DIPR/CP/1651/Zen/2024-25

ಸಚಿವೆ ಹೆಬ್ಬಾಳಕರ ಅವರಿಂದ ರೇಷ್ಮೆ ಸೀರೆ ಉಡುಗೊರೆ

'ಗೃಹಲಕ್ಷ್ಮಿ' ಹಣದಲ್ಲಿ ಮಹಿಳೆಯರಿಗೆ ಹೋಳಿಗೆ ಊಟ

ಪ್ರಜಾವಾಣಿ ವಾರ್ತೆ

ರಾಯಬಾಗ(ಬೆಳಗಾವಿ ಜಿಲ್ಲೆ): 'ಗೃಹಲಕ್ಷ್ಮಿ' ಯೋಜನೆಯಡಿ ಬಂದ ಹಣದಲ್ಲಿ ತಾಲ್ಲೂಕಿನ ಸುಟ್ಟಟ್ಟಿಯಲ್ಲಿ ವೃದ್ಧೆಯೊಬ್ಬರು, ಊರಿನ ಮಹಿಳೆಯರಿಗೆ ಉಡಿ ತುಂಬಿ ಹೋಳಿಗೆ ಊಟ ಹಾಕಿಸಿದ್ದಾರೆ.

ಇಲ್ಲಿನ ಗ್ರಾಮದೇವತೆ ದೇವಸ್ಥಾನದಲ್ಲಿ ಶುಕ್ರವಾರ ಐವರು ಮಹಿಳೆಯರಿಗೆ ಉಡಿ ತುಂಬಿ, ಗ್ರಾಮದ 200 ಮಹಿಳೆಯರಿಗೆ ಹೋಳಿಗೆ ಊಟ ಹಾಕಿಸಿದ ಅಕ್ಕಾತಾಯಿ ಲಂಗೋಟಿ, 'ಗ್ಯಾರಂಟಿ ಯೋಜನೆ ಜಾರಿಗೊಳಿಸಿ, ಬಡವರ ಬದುಕಿಗೆ ಶಕ್ತಿ ತುಂಬಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಳಿತಾಗಲಿ' ಎಂದು ದೇವರಲ್ಲಿ ಪ್ರಾರ್ಥಿಸಿದ್ದಾರೆ.

ರಾಯಬಾಗ ತಾಲ್ಲೂಕಿನ ಸುಟ್ಟಟ್ಟಿಯಲ್ಲಿ ಮಹಿಳೆಯರಿಗೆ ಹೋಳಿಗೆ ಊಟ ಹಾಕಿಸಿದ ಅಕ್ಕಾತಾಯಿ ಲಂಗೋಟಿ

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ಜಾರಿಗೊಳಿಸಿದ ಗೃಹಲಕ್ಷ್ಮಿ ಯೋಜನೆ ಹಣದಿಂದ ನಮಗೆ ಅನುಕೂಲವಾಗಿದೆ. ನನಗೆ 10 ಕಂತುಗಳ ಹಣ ಬಂದಿದೆ. ನಮ್ಮಂಥವರಿಗೆ ನೆರವಾದ ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದಲ್ಲಿ ಮತ್ತಷ್ಟು ಎತ್ತರಕ್ಕೆ ಬೆಳೆಯಲೆಂದು ದೇವರಲ್ಲಿ ಪ್ರಾರ್ಥಿಸಿ, ಊಟ ಹಾಕಿಸಿದ್ದೇನೆ. ₹14 ಸಾವಿರ ಖರ್ಚಾಗಿದೆ' ಎಂದು ಹೇಳಿದರು.

> **ಗೃಹಲಕ್ಷ್ಮಿ ಯೋಜನೆ ಹಣ ಇಂಥವರ ಮನೆಗೆ ತಲುಪುತ್ತಿರುವುದರಿಂದ ಏನೆಲ್ಲ ಅನುಕೂಲವಾಗುತ್ತಿದೆ ಎಂದು ತಿಳಿದು ಸಂತಸವಾಗುತ್ತಿದೆ**
> **ಲಕ್ಷ್ಮಿ ಹೆಬ್ಬಾಳಕರ,** ಸಚಿವೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಚಿವೆಯಿಂದ ಸೀರೆ ಉಡುಗೊರೆ: ಅಕ್ಕಾತಾಯಿ ಲಂಗೋಟಿ ಅವರಿಗೆ ಕರೆ ಮಾಡಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ರೇಷ್ಮೆ ಸೀರೆಯನ್ನು ಭಾನುವಾರ ಉಡುಗೊರೆಯಾಗಿ ಕೊಟ್ಟಿದ್ದಾರೆ.

'ಈಗ ಊರಿನವರಿಗೆ ಹೋಳಿಗೆ ಊಟ ಹಾಕಿಸಿದ್ದಿ. ನಿನ್ನ ಮಗಳಾದ ನನಗೆ ಯಾವಾಗ ಹಾಕಿಸುತ್ತೀಯಾ?' ಎಂದು ಅವರು ಕೇಳಿದಾಗ, 'ಖಂಡಿತವಾಗಿ ಬಾ. ನಿನಗೂ ಊಟ ಹಾಕಿಸ್ತೀನಿ. ನೀನೇ ನಮಗೆಲ್ಲ ಗೃಹಲಕ್ಷ್ಮಿ ಯೋಜನೆ ಹಣ ಕೊಡುವ ಮನೆಮಗಳು. ನಿನಗೆ ಇಲ್ಲ ಎನ್ನಲಾಗುವುದೇ' ಎಂದು ಅಕ್ಕಾತಾಯಿ ಹೇಳಿದರು. ಆಗ ಅಕ್ಕಾತಾಯಿ ಅವರಿಗೆ ರೇಷ್ಮೆ ಸೀರೆ ಕಳುಹಿಸುವುದಾಗಿ ಸಚಿವೆ ತಿಳಿಸಿದರು. ನಂತರ ತಮ್ಮ ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು ಅಜ್ಜಿಯ ಮನೆಗೆ ಕಳುಹಿಸಿ, ರೇಷ್ಮೆ ಸೀರೆ ನೀಡಿ ಸನ್ಮಾನಿಸಿದ್ದಾರೆ.

ಅತ್ಯಾಚಾರ: ಶಿಕ್ಷೆ ಪ್ರಮಾಣ ಶೇ 0.76ಕ್ಕೆ ಸೀಮಿತ

• ಚೇತನ್ ಬಿ.ಸಿ.

ಬೆಂಗಳೂರು: ಅತ್ಯಾಚಾರ ಪ್ರಕರಣಗಳ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂಬ ಕೂಗು ದೇಶದಾದ್ಯಂತ ಕೇಳುತ್ತಿರುವ ಹೊತ್ತಿನಲ್ಲೇ, ಬೆಂಗಳೂರಿನಲ್ಲಿ ದಾಖಲಾದ ಅತ್ಯಾಚಾರ ಪ್ರಕರಣಗಳ ಶಿಕ್ಷೆ ಪ್ರಮಾಣ ಶೇಕಡ 1ಕ್ಕಿಂತ ಕಡಿಮೆ ಇದೆ.

2013ರಿಂದ 2023ರವರೆಗೆ ಬೆಂಗಳೂರಿನಲ್ಲಿ ಒಟ್ಟು 1,322 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, ಶಿಕ್ಷೆಯಾಗಿದ್ದು 10 ಪ್ರಕರಣಗಳಲ್ಲಿ ಮಾತ್ರ. ಇದು ಒಟ್ಟು ಪ್ರಕರಣಗಳ ಶೇಕಡ 0.76ರಷ್ಟು ಮಾತ್ರ.

ಇಂತಹ ಪ್ರಕರಣಗಳ ನಿರ್ವಹಣೆಯಲ್ಲಿ ಅನುಭವವಿರುವ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, 'ಸಾಕ್ಷ್ಯ ಕೊರತೆ, ಸುಳ್ಳು ಪ್ರಕರಣಗಳ ಕಾರಣದಿಂದ ಶಿಕ್ಷೆ ಪ್ರಮಾಣ ಕಡಿಮೆಯಾದಂತೆ ತೋರಿದರೂ, ಬಹುತೇಕ ಪ್ರಕರಣಗಳಲ್ಲಿ ಸಂತ್ರಸ್ತೆಯರೇ ಪ್ರತಿಕೂಲ ಸಾಕ್ಷಿಯಾಗಿ ಬದಲಾಗುತ್ತಾರೆ. ಪ್ರಕರಣಗಳು ನ್ಯಾಯಾಲಯದಲ್ಲಿ ಬಿದ್ದು ಹೋಗುತ್ತವೆ' ಎಂದು ಶಿಕ್ಷೆ ಪ್ರಮಾಣ ಕಡಿಮೆ ಇರಲು ಕಾರಣವನ್ನು ವಿಶ್ಲೇಷಿಸುತ್ತಾರೆ.

'ಸಹ ಜೀವನದ ಸಂಗಾತಿಗಳೂ ಅತ್ಯಾಚಾರ ಪ್ರಕರಣ ದಾಖಲಿಸಿರುತ್ತಾರೆ. ನಂತರ ಹೊಂದಿಕೊಂಡು ಹೋಗುತ್ತಾರೆ. ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ಪೋಷಕರು, ಆರೋಪಿಯನ್ನೇ ಮದುವೆ ಆಗುವಂತೆ ಬಾಲಕಿಯರನ್ನು ಒತ್ತಾಯಿಸಿರುತ್ತಾರೆ. ಅವರು ಪ್ರತಿಕೂಲ ಸಾಕ್ಷಿಯಾಗುವ ಕಾರಣ ಈ ಪ್ರಕರಣಗಳೆಲ್ಲಾ ಬಿದ್ದುಹೋಗುತ್ತವೆ. ಹೀಗಾಗಿಯೇ ಶಿಕ್ಷೆಯಾಗುವ ಪ್ರಕರಣಗಳ ಸಂಖ್ಯೆ ಮತ್ತು ಪ್ರಮಾಣ ಕಡಿಮೆ ಎನಿಸುತ್ತದೆ' ಎಂಬುದು ಅವರ ವಿವರಣೆ.

ಆದರೆ ತನಿಖೆ ಮತ್ತು ವಿಚಾರಣೆ ವಿಳಂಬವಾಗುವುದೂ ಇದಕ್ಕೆ ಒಂದು ಪ್ರಬಲ ಕಾರಣ ಎಂಬುದನ್ನು ಮಹಿಳಾ ಹಕ್ಕುಗಳ ಹೋರಾಟಗಾರರು ಹೇಳುತ್ತಾರೆ.

'ಅತ್ಯಾಚಾರ ಪ್ರಕರಣಗಳಲ್ಲಿ ವಿಚಾರಣೆ 5–6 ವರ್ಷಗಳವರೆಗೆ ಎಳೆಯುತ್ತದೆ, ಹಲವು ಪ್ರಕರಣಗಳಲ್ಲಿ 10 ವರ್ಷಗಳೇ ಆಗುತ್ತದೆ. ಇಂತಹ ಕೃತ್ಯಗಳ ಬಗ್ಗೆ ಪದೇ–ಪದೇ ನೆನಪಿಸಿಕೊಳ್ಳಲು ಮಹಿಳೆಯರು ಬಯಸುವುದಿಲ್ಲ. ಹೀಗಾಗಿಯೇ ಅಂತಹವರು ಪ್ರತಿಕೂಲ ಸಾಕ್ಷಿಗಳಾಗುತ್ತಾರೆ' ಎಂಬುದು ಅಕ್ಕಮಹಾದೇವಿ ವಿ.ವಿ.ಯ ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ ಅವರ ವಿಶ್ಲೇಷಣೆ.

ಏರಿಕೆ ಹಾದಿಯಲ್ಲಿ ಪ್ರಕರಣಗಳು



ದಾಖಲಾಗಿದ್ದು 1,322 ಶಿಕ್ಷೆಯಾಗಿದ್ದು 10ರಲ್ಲಿ



ಝಿಯು ಹೋಮ್ಸ್ ಹೆಸರಿನಲ್ಲಿ ಮನೆ ಮಾಲೀಕರಿಗೆ ವಂಚನೆ

ಹೈದರಾಬಾದ್‌ನಲ್ಲಿ ದಂಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಾಡಿಗೆಗೆ ಮನೆ ಹಾಗೂ ಫ್ಲ್ಯಾಟ್‌ಗಳನ್ನು ಪಡೆದು ನಂತರ ಅದೇ ಮನೆಗಳನ್ನು ಇತರರಿಗೆ ಭೋಗ್ಯಕ್ಕೆ ನೀಡುವ ಮೂಲಕ ಹಲವರಿಗೆ ವಂಚಿಸಿದ್ದ ದಂಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಝಿಯು ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಕಂಪನಿ ನಡೆಸುತ್ತಿದ್ದ ಅಹಮದ್ ಅಲಿ ಬೇಗ್ ಹಾಗೂ ಅವರ ಪತ್ನಿ ಮುಯಿದಾ ಸಮ್ದಾನಿ ಬಾನು ಅವರನ್ನು ಬಂಧಿಸಲಾಗಿದೆ. ಇವರಿಬ್ಬರೂ ಹೈದರಾಬಾದ್‌ನಲ್ಲಿ ತಲೆಮರೆಸಿಕೊಂಡಿದ್ದರು. ಇನ್ನೂ ಕೆಲವು ಆರೋಪಿಗಳ ಪತ್ತೆಗೆ ಶೋಧ ನಡೆದಿದೆ.

ಝಿಯು ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಕಂಪನಿ ತೆರೆದು ಎಚ್.ಬಿ.ಆರ್ ಲೇಔಟ್‌ನಲ್ಲಿ ಆರೋಪಿಗಳು ಕಚೇರಿ ನಡೆಸುತ್ತಿದ್ದರು. ಖಾಲಿ ಇರುವ ಮನೆ ಹಾಗೂ ಫ್ಲ್ಯಾಟ್‌ಗಳ ಮಾಲೀಕರನ್ನು ಮಧ್ಯವರ್ತಿಗಳ ಮೂಲಕ ಸಂಪರ್ಕಿಸಿ, ತಾವು ಬಾಡಿಗೆದಾರರನ್ನು ಹುಡುಕಿಕೊಡುವ ಮೂಲಕ ನಿರ್ವಹಣೆ ಮಾಡುವುದಾಗಿ ನಂಬಿಸುತ್ತಿದ್ದರು.

ಅಹಮದ್ ಅಲಿ ಬೇಗ್, ಮುಯಿದಾ

ಬಾಡಿಗೆಗೆ ಎಂದು ಕರಾರು ಮಾಡಿಕೊಂಡು ಬಳಿಕ ಅವುಗಳನ್ನು ಬೇರೆಯವರಿಗೆ ₹15 ಲಕ್ಷದಿಂದ ₹20 ಲಕ್ಷದವರೆಗೂ ಭೋಗ್ಯಕ್ಕೆ ಹಾಗೂ ₹15 ಸಾವಿರದಿಂದ ₹20 ಸಾವಿರಕ್ಕೆ ಬಾಡಿಗೆ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ತಿಂಗಳ ಬಳಿಕ ಮಾಲೀಕರಿಗೆ ಬಾಡಿಗೆ ನೀಡುತ್ತಿರಲಿಲ್ಲ. ಮಾಲೀಕರು ಮನೆಗೆ ಭೇಟಿ ನೀಡಿ ಪರಿಶೀಲಿಸಿದಾಗ, ಬೇರೆ ಯಾರೋ ಇರುತ್ತಿದ್ದರು. ತಾವು ಭೋಗ್ಯಕ್ಕೆ ಪಡೆದಿರುವುದಾಗಿ ಮನೆಯಲ್ಲಿದ್ದವರು ತಿಳಿಸುತ್ತಿದ್ದರು. ಮನೆ ಮಾಲೀಕರು ಹಾಗೂ ಬಾಡಿಗೆದಾರರನ್ನು ವಂಚಿಸುತ್ತಿದ್ದ ಝಿಯು ಹೋಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸ್ಥಾಪಕ ಅಹಮದ್ ಅಲಿ ಬೇಗ್, ನೂರ್ ಅಹಮದ್ ಅಲಿ ಬೇಗ್, ಅಕ್ರಂ ಪಾಷ, ಅಬ್ದುಲ್ ರಹೀಂ ಹಾಗೂ ಸೈಯ್ಯದ್ ವಿರುದ್ಧ ಬಾಣಸವಾಡಿ ಠಾಣೆಯಲ್ಲಿ ಏಪ್ರಿಲ್‌ನಲ್ಲಿ ಎಫ್ಐಆರ್ ದಾಖಲಾಗಿತ್ತು.

ಹೆಣ್ಣೂರು, ಬಾಣಸವಾಡಿ ಸೇರಿ ಹಲವು ಠಾಣೆಗಳಲ್ಲಿ ಮನೆ ಹಾಗೂ ಫ್ಲ್ಯಾಟ್ ಮಾಲೀಕರು ಆರೋಪಿಗಳ ವಿರುದ್ಧ ದೂರು ದಾಖಲಿಸಿದ್ದರು. ಪ್ರಕರಣ ಬಯಲಾಗುತ್ತಿದ್ದಂತೆ ಆರೋಪಿಗಳು ನಾಪತ್ತೆಯಾಗಿದ್ದರು.

ವಂಚನೆಗೊಳಗಾದ ಮನೆಗಳ ಮಾಲೀಕರು, ಭೋಗ್ಯಕ್ಕೆ ವಾಸವಿದ್ದವರು ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜೂನ್‌ನಲ್ಲಿ ಕ್ವೀನ್ಸ್ ಸರ್ಕಲ್ ಬಳಿ ಪ್ರತಿಭಟನೆ ನಡೆಸಿದ್ದರು. ಬಳಿಕ ಎಲ್ಲಾ ಪ್ರಕರಣಗಳ ತನಿಖೆಯನ್ನು ಸಿಸಿಬಿಗೆ ವರ್ಗಾಯಿಸಲಾಗಿತ್ತು.

ಹೈದರಾಬಾದ್‌ನಲ್ಲಿ ತಲೆಮರೆಸಿಕೊಂಡಿದ್ದ ಅಹಮದ್ ಅಲಿ ಬೇಗ್ ಹಾಗೂ ಆತನ ಪತ್ನಿ ಮುಯಿದಾ ಸಮ್ದಾನಿ ಬಾನು ಅವರನ್ನು ಬಂಧಿಸಿ, ಬೆಂಗಳೂರಿಗೆ ಕರೆತರಲಾಗಿದೆ. ಅವರ ವಿಚಾರಣೆ ನಡೆಸಲಾಗುತ್ತಿದೆ. ತಲೆಮರೆಸಿಕೊಂಡಿರುವ ಇನ್ನೂ ಕೆಲವು ಆರೋಪಿಗಳಿಗಾಗಿ ಶೋಧ ಕಾರ್ಯ ಮುಂದುವರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿದ್ದ ಇಬ್ಬರು ಜಾಮೀನು ಪಡೆದು ಹೊರ ಬಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಲ್ಮೆಟ್ ಧರಿಸದ ಪೊಲೀಸರು...

ನಗರದ ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನದ ಬಳಿ ಶನಿವಾರ ರಾತ್ರಿ ಬ್ಯಾಟರಾಯನಪುರ ಸಂಚಾರ ಠಾಣೆ ಪೊಲೀಸರು ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನದಲ್ಲಿ ಹೋಗುತಿದ್ದ ದೃಶ್ಯ

ಪ್ರಜಾವಾಣಿ ಚಿತ್ರ: ರಂಜು ಪಿ

ಚಾಲಕ ಆತ್ಮಹತ್ಯೆ: ಮಗನ ಶವದ ಮುಂದೆಯೇ ಪ್ರಾಣಬಿಟ್ಟ ತಾಯಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಖಿನ್ನತೆಯಿಂದ ಬಳಲುತ್ತಿದ್ದ ಮಗ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಮಗನ ಶವದ ಮುಂದೆ ಕಣ್ಣೀರಿಡುತ್ತಿದ್ದ ತಾಯಿ ಕೂಡ ಹೃದಯಾಘಾತದಿಂದ ಸಾವಿಗೀಡಾಗಿರುವ ಘಟನೆ ನಗರದ ಕಾವೇರಿಪುರದಲ್ಲಿ ಭಾನುವಾರ ನಡೆದಿದೆ.

ಅರುಣ್ ಕುಮಾರ್ (37) ಮೃತ ಕ್ಯಾಬ್ ಚಾಲಕ. ಮಗನ ಸಾವಿನಿಂದ ಆಘಾತಕ್ಕೆ ಒಳಗಾಗಿ ತಾಯಿ ಸರಸ್ವತಿ ಬಾಯಿ (78) ಸಹ ಮೃತಪಟ್ಟಿದ್ದಾರೆ. ಆತ್ಮಹತ್ಯೆಗೂ ಮುನ್ನ ಅರುಣ್ ಮರಣ ಪತ್ರ ಬರೆದಿದ್ದಾರೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರುಣ್‌ಗೆ ಇನ್ನೂ ವಿವಾಹ ಆಗಿರಲಿಲ್ಲ. ಬೆಳಿಗ್ಗೆ ತಮ್ಮ ಮನೆಯ ಕೋಣೆಯಲ್ಲಿ ನೇಣು ಹಾಕಿಕೊಂಡಿದ್ದಾರೆ. ವರ್ಷದ ಹಿಂದೆ ಬಿದ್ದು ಬೆನ್ನಿನ ಮೂಳೆ ಮುರಿದುಕೊಂಡಿದ್ದ ಸರಸ್ವತಿ ಅವರು ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದರು.


ಅರುಣ್

ಸರಸ್ವತಿ ಬಾಯಿ

ಅರುಣ್ ಅವರೇ ತಾಯಿ ಆರೈಕೆ ಮಾಡುತ್ತಿದ್ದರು. ಅವರ ಇಬ್ಬರು ಸಹೋದರರು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ.

ತಾಯಿಯ ಸಂಪೂರ್ಣ ಜವಾಬ್ದಾರಿ ಅರುಣ್ ಮೇಲೆಯೇ ಇತ್ತು. ಕ್ಯಾಬ್ ಓಡಿಸಿಕೊಂಡು ಜೀವನ ನಡೆಸುತ್ತಿದ್ದ ಅವರು, ತಾಯಿಯ ಆಸ್ಪತ್ರೆ ಚಿಕಿತ್ಸಾ ವೆಚ್ಚಕ್ಕಾಗಿ ಸ್ವಲ್ಪ ಸಾಲ ಮಾಡಿದ್ದರು. ಅದೇ ವಿಚಾರವಾಗಿ ಖಿನ್ನತೆಗೆ ಒಳಗಾಗಿದ್ದರು. ಇದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯರಿಬ್ಬರ ಕೊಲೆ: ಮಲತಂದೆ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಈಶಾನ್ಯ ವಿಭಾಗದ ಅಮೃತಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ದಾಸರಹಳ್ಳಿಯಲ್ಲಿ ಶನಿವಾರ ಇಬ್ಬರು ಬಾಲಕಿಯರನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ ಪ್ರಕರಣದಲ್ಲಿ ಮಲತಂದೆ ಮೋಹನ್ ಎಂಬಾತನನ್ನು ಅಮೃತಹಳ್ಳಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಕೊಲೆಗೀಡಾದ 14 ಹಾಗೂ 16 ವರ್ಷದ ಬಾಲಕಿಯರು ಕ್ರಮವಾಗಿ 8 ಮತ್ತು 9ನೇ ತರಗತಿಯಲ್ಲಿ ಓದುತ್ತಿದ್ದರು. ಹೆಣ್ಣು ಮಕ್ಕಳನ್ನು ಮಲತಂದೆಯೇ ಕೊಲೆ ಮಾಡಿ ಪರಾರಿಯಾಗಿರುವ ಬಗ್ಗೆ ಪೊಲೀಸರಿಗೆ ಶಂಕೆ ವ್ಯಕ್ತವಾಗಿತ್ತು. ಘಟನೆ ನಡೆದ ವೇಳೆ ತಾಯಿ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ತೆರಳಿದ್ದರು. ಘಟನೆ ಬಳಿಕ ಆರೋಪಿ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಆತನ ಬಂಧನಕ್ಕೆ ಮೂರು ತಂಡವನ್ನು ರಚಿಸಲಾಗಿತ್ತು.

ನಗರದ ರೈಲ್ವೆ ನಿಲ್ದಾಣ ಬಳಿ ಬಚ್ಚಿಟ್ಟುಕೊಂಡಿದ್ದ ಮೋಹನ್‌ನನ್ನು ಪೊಲೀಸರು ಬಂಧಿಸಿ, ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದಾರೆ.

'ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳಿಗೆ ಆರೋಪಿ ಉತ್ತರಿಸುತ್ತಿಲ್ಲ. ಘಟನೆ ಬಳಿಕ ಆಘಾತಕ್ಕೆ ಒಳಗಾಗಿರುವ ಸಾಧ್ಯತೆ ಇದೆ. ಹೆಣ್ಣು ಮಕ್ಕಳಿಗೆ ಹುಡುಗರ ಜತೆ ಸೇರದಂತೆ ಬುದ್ದಿ ಹೇಳುತ್ತಿದ್ದ. ಅವರ ನಡವಳಿಕೆ ಬಗ್ಗೆ ಅನುಮಾನಪಡುತ್ತಿದ್ದ ಎಂಬ ಮಾಹಿತಿ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಪ್ರದೇಶ ಮೂಲದ ಕುಟುಂಬವು ದಾಸರಹಳ್ಳಿಯ ಕಾವೇರಿ ಬಡಾವಣೆಯ ಬಾಡಿಗೆ ಮನೆಯೊಂದರ ಎರಡನೇ ಮಹಡಿಯಲ್ಲಿ ನೆಲೆಸಿತ್ತು. ಕೊಲೆಯಾದ ಹೆಣ್ಣು ಮಕ್ಕಳ ತಾಯಿ ಅನಿತಾ ಅವರು ಮೊದಲ ಪತಿಯಿಂದ ವಿಚ್ಛೇದನ ಪಡೆದುಕೊಂಡು, ಡೆಹ್ರಾಡೂನ್‌ನ ಮೋಹನ್ ಎಂಬಾತನ ಜತೆ ಒಂಬತ್ತು ವರ್ಷದ ಹಿಂದೆ ಎರಡನೇ ಮದುವೆ ಆಗಿದ್ದರು. ಮೋಹನ್ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದರು.

ವಿವಾಹಿತೆಯ ಆತ್ಮಹತ್ಯೆ ಪ್ರಕರಣ; ಶವವಿಟ್ಟು ಪ್ರತಿಭಟನೆ

ಪತಿ ಮನೆ ಪಕ್ಕದಲ್ಲೇ ಅಂತ್ಯಕ್ರಿಯೆ!

ಪ್ರಜಾವಾಣಿ ವಾರ್ತೆ

ಕೋಲಾರ: ಹೊರವಲಯದಲ್ಲಿರುವ ಸಹಕಾರ ನಗರದಲ್ಲಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದ ನವ ವಿವಾಹಿತೆ ಮಾನಸಾ (24) ಅವರ ಪೋಷಕರು, ಭಾನುವಾರ ಅಳಿಯ ಉಲ್ಲಾಸ್‌ಗೌಡ ಮನೆ ಮುಂದೆ ಪುತ್ರಿಯ ಶವವಿಟ್ಟು ಪ್ರತಿಭಟನೆ ನಡೆಸಿದರು. ಬಳಿಕ ಅಳಿಯನ ಮನೆ ಪಕ್ಕದಲ್ಲೇ ಅಂತ್ಯಕ್ರಿಯೆ ನಡೆಸಿದರು.

ಅಳಿಯ ಹಾಗೂ ಅವರ ಪೋಷಕರು ನೀಡಿದ ವರದಕ್ಷಿಣೆ ಕಿರುಕುಳದಿಂದಲೇ ಪುತ್ರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ದೂರಿದರು.

ಮಾನಸಾ ಪತಿ ಉಲ್ಲಾಸ್‌ಗೌಡ ಅವರ ತೂರಾಂಡಹಳ್ಳಿ ನಿವಾಸದ ಗೇಟ್ ಮುಂದೆಯೇ ಅಂತ್ಯಕ್ರಿಯೆ ನಡೆಸಲು ಮುಂದಾದರು. ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳು ಹೋರಾಟಗಾರರೂ ಇದ್ದರು. ಆಗ ಪೊಲೀಸರು ಹಾಗೂ ಮಾನಸಾ ಕಡೆಯವರ ನಡುವೆ ವಾಗ್ವಾದ ನಡೆಯಿತು. ಈ ಸಂದರ್ಭದಲ್ಲಿ ಉಲ್ಲಾಸ್‌ಗೌಡ ಹಾಗೂ ಅವರ ಕುಟುಂಬದವರು ಇರಲಿಲ್ಲ. ನ್ಯಾಯ ಕೊಡಿಸುವ ಭರವಸೆಯನ್ನು ಪೊಲೀಸರು ನೀಡಿದ ಬಳಿಕ ಪತಿ ಮನೆ ಪಕ್ಕದಲ್ಲಿ ಅಂತ್ಯಸಂಸ್ಕಾರ ನಡೆಸಿದರು.

ಒಂದು ವರ್ಷದ ಹಿಂದೆ ಮಾನಸಾ ಹಾಗೂ ಉಲ್ಲಾಸ್‌ಗೌಡ ವಿವಾಹವಾಗಿದ್ದರು. ಅವರು ಬೆಂಗಳೂರಿನ ಗಿರಿನಗರದಲ್ಲಿ ವಾಸವಿದ್ದರು.

ಕೋಲಾರ ತಾಲ್ಲೂಕಿನ ತೂರಾಂಡಹಳ್ಳಿಯಲ್ಲಿ ಭಾನುವಾರ ಪೊಲೀಸರ ಸಮ್ಮುಖದಲ್ಲಿ ಪತಿ ಉಲ್ಲಾಸ್‌ಗೌಡ ಮನೆ ಪಕ್ಕದಲ್ಲೇ ಮಾನಸಾ ಅವರ ಅಂತ್ಯಕ್ರಿಯೆ ನಡೆಸಲಾಯಿತು

50 ಶಾಸಕರ ಸಂಪರ್ಕ: ಮಂಡ್ಯದ ಶಾಸಕ ರವಿಕುಮಾರ್ ಗಂಭೀರ ಆರೋಪ

ಸರ್ಕಾರ ಕೆಡವಲು ಕಾಂಗ್ರೆಸ್ ಶಾಸಕರಿಗೆ ₹100 ಕೋಟಿ ಆಫರ್

ಪ್ರಜಾವಾಣಿ ವಾರ್ತೆ

ರವಿಕುಮಾರ್

ಮಂಡ್ಯ: 'ಬಿಜೆಪಿಯ ಬ್ರೋಕರ್‌ಗಳು ಪ್ರತಿನಿತ್ಯ ಕಾಂಗ್ರೆಸ್ ಶಾಸಕರನ್ನು ಸಂಪರ್ಕಿಸುತ್ತಿದ್ದಾರೆ. ₹50 ಕೋಟಿಯಿಂದ ₹100 ಕೋಟಿವರೆಗೆ ಆಫರ್ ಮಾಡುತ್ತಿದ್ದಾರೆ. ಮೊನ್ನೆಯೂ ಕೆಲ ಕಾಂಗ್ರೆಸ್ ಶಾಸಕರಿಗೆ ಕರೆ ಮಾಡಿ, ₹100 ಕೋಟಿ ರೆಡಿ ಇದೆ. ಎಲ್ಲಿಗೆ ಬರ್ತೀರಾ ಎಂದು ಕೇಳಿದ್ದಾರೆ' ಎಂದು ಮಂಡ್ಯ ಕಾಂಗ್ರೆಸ್ ಶಾಸಕ ಪಿ.ರವಿಕುಮಾರ್ (ರವಿ ಗಣಿಗ) ಭಾನುವರ ಇಲ್ಲಿ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಸರ್ಕಾರ ಕೆಡವಲು ಸಂತೋಷ್, ಶೋಭಾ ಕರಂದ್ಲಾಜೆ, ಎಚ್‌.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ ಸೇರಿ ಗ್ಯಾಂಗ್ ಮಾಡಿಕೊಂಡಿದ್ದಾರೆ. ಸರ್ಕಾರ ಅಸ್ಥಿರ-ಗೊಳಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪ ಮಾಡಿದರು.

'ಕಾಂಗ್ರೆಸ್‌ನ 50 ಶಾಸಕರನ್ನು ಸಂಪರ್ಕಿಸಿದ್ದಾರೆ. ನನ್ನನ್ನೂ ಫೋನ್ ಮೂಲಕ ಸಂಪರ್ಕಿಸಿ ಆಫರ್ ಮಾಡಿದ್ದಾರೆ. ನನ್ನ ಬಳಿ ಕಾಲ್ ರೆಕಾರ್ಡ್ ಇದೆ. ಇನ್ನೂ ಇದರ ಬಗ್ಗೆ ಸಾಕ್ಷ್ಯಗಳನ್ನು ಕಲೆ ಹಾಕುತ್ತಿದ್ದೇವೆ. ರೆಡ್ ಹ್ಯಾಂಡ್ ಆಗಿ ಐಟಿ, ಇ.ಡಿ ಅವರಿಗೆ ಹಿಡಿದು ಕೊಡುತ್ತೇವೆ' ಎಂದರು.

ರವಿಕುಮಾರ್ ವಿರುದ್ಧ ಬಿಜೆಪಿ ದೂರು

ಪಿ. ರಾಜೀವ್

ಹುಬ್ಬಳ್ಳಿ: 'ರಾಜ್ಯ ಸರ್ಕಾರ ಬೀಳಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಇತರ ಮುಖಂಡರು ಕಾಂಗ್ರೆಸ್ ಶಾಸಕರಿಗೆ ₹50 ಕೋಟಿಯಿಂದ ₹100 ಕೋಟಿ ಆಮಿಷವೊಡ್ಡುತ್ತಿದ್ದಾರೆ ಎಂದು ಸುಳ್ಳು ಆರೋಪ ಮಾಡಿರುವ ಮಂಡ್ಯ ಶಾಸಕ ರವಿಕುಮಾರ್ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರು ಇಲ್ಲಿನ ಉಪನಗರ ಠಾಣೆಗೆ ಭಾನುವಾರ ದೂರು ನೀಡಿದರು.

ಇದಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರವಿಕುಮಾರ್ ಅವರ ಆರೋಪ ಸತ್ಯಕ್ಕೆ ದೂರ. ಭ್ರಷ್ಟಾಚಾರ ತಡೆ ಕಾಯ್ದೆ ಪ್ರಕಾರ ಲಂಚ ಕೊಡುವುದು, ಲಂಚ ಪಡೆಯುವುದು, ಲಂಚದ ಮಾಹಿತಿ ಮುಚ್ಚಿಡುವುದು ಅಪರಾಧ. ಯಾರು, ಯಾವಾಗ, ಎಲ್ಲಿ ಆಮಿಷವೊಡ್ಡಿದ್ದಾರೆ? ಮುಂಗಡವಾಗಿ ಎಷ್ಟು ಹಣ ಕೊಟ್ಟಿದ್ದಾರೆ ಎಂಬುದನ್ನು ಅವರು ಬಹಿರಂಗಪಡಿಸಬೇಕು' ಎಂದರು.

'ಸರ್ಕಾರ ಬೀಳಿಸುವ ಯಾವುದೇ ಪ್ರಯತ್ನವನ್ನು ಬಿಜೆಪಿ ಮಾಡುತ್ತಿಲ್ಲ. ರವಿಕುಮಾರ್ ಅವರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ನಮ್ಮ ಪಕ್ಷದ ನಾಯಕರ ಹೆಸರು ದುರ್ಬಳಕೆ ಮಾಡಿಕೊಂಡಿದ್ದಾರೆ. ಅವರು ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ತಮ್ಮ ನಾಲಿಗೆ ಹರಿಬಿಡಬಾರದು' ಎಂದರು.

ರಸ್ತೆ ಕೇಳಿದ್ದಕ್ಕೆ ಸಚಿವರಿಂದ ನಿಂದನೆ

ಪ್ರಜಾವಾಣಿ ವಾರ್ತೆ

ಕನಕಗಿರಿ/ಗಂಗಾವತಿ (ಕೊಪ್ಪಳ ಜಿಲ್ಲೆ): ಕನಕಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೀರಾಳ ಕಲ್ಗುಡಿ ಗ್ರಾಮದಲ್ಲಿ ರಸ್ತೆ ಸೌಲಭ್ಯ ಕೇಳಿದ್ದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ತಂಗಡಗಿ ಹಾಗೂ ಗ್ರಾಮದ ಹಲವರ ನಡುವೆ ಭಾನುವಾರ ಜಟಾಪಟಿ ನಡೆದಿದೆ. ಸಚಿವರು ಬಹಿರಂಗವಾಗಿಯೇ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ.

ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿದ್ದು, ಕಲ್ಗುಡಿ ಗ್ರಾಮ ಪಂಚಾಯಿತಿ ಸದಸ್ಯ ಯಲ್ಲಪ್ಪ ಕುಣಿಕೇರಿ ಹಾಗೂ ಮತ್ತೊಬ್ಬ ಸದಸ್ಯೆಯ ಪತಿ ಪಾಮಣ್ಣ ಚಲವಾದಿ ರಸ್ತೆ ಸೌಲಭ್ಯ ಕಲ್ಪಿಸಿ ಎಂದು ಕೇಳಿಕೊಂಡಾಗ ಸಚಿವರು ಮೊದಲು ಸಮಾಧಾನದಿಂದ ಉತ್ತರಿಸಿದ್ದಾರೆ. ಪ್ರಶ್ನೆ ಕೇಳಿದವರು ಮತ್ತೆ ಏರು ಧ್ವನಿಯಲ್ಲಿ ಪ್ರಶ್ನಿಸಿದ್ದು ತಂಗಡಗಿ ಅವರನ್ನು ಕೆರಳುವಂತೆ ಮಾಡಿದೆ. ವಾಗ್ವಾದ ಜೋರಾದಾಗ ಸ್ಥಳೀಯರು ಎರಡೂ ಕಡೆಯವರನ್ನು ಸಮಾಧಾನ ಪಡಿಸಿದರು.

ಬಳಿಕ ಯಲ್ಲಪ್ಪ, ಪಾಮಣ್ಣ ಅವರನ್ನು ಗಂಗಾವತಿ ಗ್ರಾಮೀಣ ಠಾಣೆಗೆ ಕರೆದುಕೊಂಡು ಬಂದಿದ್ದರಿಂದ ಬಿಜೆಪಿ ಕಾರ್ಯಕರ್ತರು ಕೆರಳಿದರು. ಸೌಲಭ್ಯ ಕೇಳಿದ್ದಕ್ಕೆ ಠಾಣೆಗೆ ಕರೆದುಕೊಂಡು ಬರುತ್ತೀರಾ ಎಂದು ಪೊಲೀಸರ ಜೊತೆ ವಾಗ್ವಾದ ನಡೆಸಿದರು.

ಸಂಜೆ ಠಾಣೆಗೆ ಬಂದ ಕನಕಗಿರಿ ಕ್ಷೇತ್ರದ ಮಾಜಿ ಶಾಸಕ, ಬಿಜೆಪಿಯ ಬಸವರಾಜ ದಢೇಸೂಗೂರು 'ರಸ್ತೆ ಸೌಲಭ್ಯ ಕೇಳಿದ ಗ್ರಾಮ ಪಂಚಾಯಿತಿ ಸದಸ್ಯ ದಲಿತ ಸಮುದಾಯದ ವ್ಯಕ್ತಿ ಯಾಗಿದ್ದು ಸಚಿವರು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ದರ್ಪದಿಂದ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರನ್ನು ಸೌಲಭ್ಯ ಕೇಳುವುದು ಕೂಡ ತಪ್ಪೇ' ಎಂದು ಪ್ರಶ್ನಿಸಿದರು. ಕಾರ್ಯಕರ್ತರ ಒತ್ತಾಯದ ಬಳಿಕ ಅವರಿಬ್ಬರನ್ನೂ ಠಾಣೆಯಿಂದ ಬಿಟ್ಟು ಕಳುಹಿಸಲಾಯಿತು.

ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ಬಂದಿದ್ದೇನೆ. ಆದರೆ ಆ ಯುವಕ ಮಾತನಾಡಿದ ರೀತಿ ಸರಿಯಿರಲಿಲ್ಲ. ಜನಪ್ರತಿನಿಧಿಗೆ ಬೇಕಾಬಿಟ್ಟಿ ಬೈದಿದ್ದು ಸರಿಯೇ?

ಶಿವರಾಜ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ

'ಆರ್ಯ ಈಡಿಗರ ಉಪಪಂಗಡಗಳು ಒಂದಾಗಲಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಈಡಿಗ ಜನಾಂಗ ಸ್ವಾವಲಂಬನೆಯ ಜೀವನ ಸಾಗಿಸುತ್ತಿದ್ದರೂ ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಈಡಿಗ ಮತ್ತು ಎಲ್ಲ 25 ಒಳಪಂಗಡಗಳು ಒಂದಾದರೆ ಮುಖ್ಯವಾಹಿನಿಗೆ ಬರಲು ಸಾಧ್ಯ' ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ ಅಭಿಪ್ರಾಯಪಟ್ಟರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಡಿಯಲ್ಲಿ ಕೆಲಗೇರಿ ಹೋಬಳಿ ಆರ್ಯ ಈಡಿಗರ ಸಂಘದ ನೇತೃತ್ವದಲ್ಲಿ ಮರಿ-ಯಪ್ಪನಪಾಳ್ಯದ ಜ್ಞಾನಭಾರತಿ 2ನೇ ಹಂತದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 170ನೇ ಜಯಂತ್ಯುತ್ಸವ, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಸ್ಟೆಲ್, ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಲು ಒಪ್ಪಿಗೆ ಸೇರಿದಂತೆ ಹತ್ತು ಬೇಡಿಕೆ ಈಡೇರಿಸಲು ಸಮ್ಮತಿಸಿದ್ದಾರೆ' ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಪಿ. ಪ್ರಕಾಶ್ ಮಾತನಾಡಿ. 'ಸಮುದಾಯಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ 10 ಸಾವಿರ ಚದರ ಅಡಿ ಜಮೀನು ಮಂಜೂರಾಗಿದೆ. ಅಲ್ಲಿ ಸಮುದಾಯ ಭವನ ನಿರ್ಮಿಸಲು ಮತ್ತು ಸಂಘದ ವಿವಿಧ ಯೋಜನೆಗಳಿಗೆ ₹30 ಕೋಟಿ ಅನುದಾನ ನೀಡಲು, ಆರ್ಯ ಈಡಿಗರ ಅಭಿವೃದ್ಧಿ ನಿಗಮವನ್ನು ಪ್ರಾರಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ' ಎಂದು ಮಾಹಿತಿ ನೀಡಿದರು.

ಸಾಧಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

'ಕರ್ನಾಟಕಕ್ಕೆ ಬೇಕು ಕನ್ನಡಿಗರ ಪಕ್ಷ'

'ನಮ್ಮ ನಾಡು, ನಮ್ಮ ಆಳ್ವಿಕೆ' ಚಿಂತನಾ ಸಭೆಯಲ್ಲಿ ಒಕ್ಕೊರಲ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಮತ್ತು ಕನ್ನಡಿಗರ ಉಳಿವಿಗಾಗಿ ಪ್ರಾದೇಶಿಕ ಪಕ್ಷವೊಂದರ ಅವಶ್ಯಕತೆ ಇದೆ. ಅಂತಹ ಪಕ್ಷವನ್ನು ಸ್ಥಾಪಿಸಿ, ಮುನ್ನಡೆಸಬೇಕು' ಎಂಬ ನಿರ್ಣಯವನ್ನು ಕನ್ನಡಪರ ಹೋರಾಟಗಾರರು ಅಂಗೀಕರಿಸಿದರು.

ನಗರದ ಬಸವ ಭವನದಲ್ಲಿ ಭಾನುವಾರ ಆಯೋಜಿಸಿದ್ದ 'ನಮ್ಮ ನಾಡು, ನಮ್ಮ ಆಳ್ವಿಕೆ' ಚಿಂತನಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಚಿತ್ರ ಸಾಹಿತಿ ಕವಿರಾಜ್, ಕನ್ನಡ ಹಕ್ಕುಗಳ ಹೋರಾಟಗಾರ ಅರುಣ್ ಜಾವಗಲ್, ಚಿತ್ರ ನಿರ್ದೇಶಕ ಗಿರಿರಾಜ್ ಸೇರಿ ಹಲವು ಕನ್ನಡಪರ ಹೋರಾಟಗಾರರು ಈ ಸಭೆಯನ್ನು ಆಯೋಜಿಸಿದ್ದರು.

ಸಭೆ ಆಯೋಜಿಸಿದ ಉದ್ದೇಶವನ್ನು ವಿವರಿಸಿದ ಕವಿರಾಜ್, 'ಮೇಕೆದಾಟು ಯೋಜನೆಗೆ ಅನುಮತಿ ಪಡೆಯಲು ನಾವು ದೆಹಲಿಯ ಹೈಕಮಾಂಡ್‌ಗಳ ಮುಂದೆ ಬಾಗಿ ನಿಲ್ಲಬೇಕಾಗಿದೆ. ನಮ್ಮ ಶೈಕ್ಷಣಿಕ ಸಂಸ್ಥೆಗಳಲ್ಲಿ ನಮ್ಮ ಮಕ್ಕಳ ಸೀಟುಗಳನ್ನು ಉತ್ತರ ಭಾರತೀಯರು ನೀಟ್‌ನಂತಹ ಪರೀಕ್ಷೆ ಮೂಲಕ ಕಸಿದು ಕೊಳ್ಳುತ್ತಿದ್ದಾರೆ. ಪ್ರಬಲ ಪ್ರಾದೇಶಿಕ ಪಕ್ಷವಿರುವ ತಮಿಳುನಾಡಿಗೆ ಇಂತಹ ಸಮಸ್ಯೆ ಇಲ್ಲ. ಹೀಗಾಗಿ ಕರ್ನಾಟಕಕ್ಕೆ ಅಂತಹ ಪ್ರಾದೇಶಿಕ ಪಕ್ಷದ ಅನಿವಾರ್ಯತೆ ಇದೆ' ಎಂದರು.

ಸಾಹಿತಿ ಕುಂ. ವೀರಭದ್ರಪ್ಪ ಮಾತನಾಡಿ, 'ನಗರದಲ್ಲಿ ಇರುವವರು, ಪದವೀಧರರು ಮಾತ್ರ ಈ ವಿಚಾರದಲ್ಲಿ ಚರ್ಚೆ ಮಾಡಿದರೆ ಸಾಲದು. ಕನ್ನಡವನ್ನು ನಿಜವಾಗಿಯೂ ಉಳಿಸುವವರು ಹಳ್ಳಿಯ ಜನರು. ಅವರನ್ನೂ ಒಳಗೊಂಡು, ನಾವೆಲ್ಲರೂ ಕನ್ನಡದ ಸ್ವಯಂಸೇವಕರಾಗಿ ದುಡಿಯಬೇಕು. ಹಾಗಾದಾಗ ಮಾತ್ರ ಕನ್ನಡದ ಪಕ್ಷ ಕಟ್ಟುವ ಈ ಪ್ರಯತ್ನ ಸಫಲವಾಗುತ್ತದೆ' ಎಂದರು.

ಪತ್ರಕರ್ತ ಬಿ.ಎಂ.ಹನೀಫ್, 'ಕ್ಷೇತ್ರ ಮರುವಿಂಗಡಣೆ ನಮ್ಮೆದುರು ಇರುವ ದೊಡ್ಡ ಅಪಾಯ. ಉತ್ತರದ ಐದಾರು ರಾಜ್ಯಗಳ ಸಂಸದರ ಸಂಖ್ಯೆ 350 ದಾಟಲಿದೆ. ದಕ್ಷಿಣದ ರಾಜ್ಯಗಳ ಸಂಸದರ ಸಂಖ್ಯೆ ಬೆರಳೆಣಿಕೆಯಷ್ಟು ಏರಿಕೆಯಾಗಲಿದೆ. ಆಗ ನಮ್ಮ ಮಾತು ಕೇಳುವವರೇ ಇಲ್ಲದಂತಾಗುತ್ತದೆ. ಆ ರೀತಿ ಆಗದಂತೆ ನೋಡಿಕೊಳ್ಳುವ ಸವಾಲು ನಮ್ಮೆದುರು ಇದೆ' ಎಂದರು.

ಐಟಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಕನ್ನಡಿಗರು, ವಿವಿಧ ಸಂಘಟನೆಗಳ ಮುಖ್ಯಸ್ಥರು–ಸದಸ್ಯರು ಸಭೆಯಲ್ಲಿ ಭಾಗಿಯಾಗಿದ್ದರು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಈ ರೀತಿಯ ಸಭೆಗಳನ್ನು ನಡೆಸಿ, ಮುಂದಿನ ನಡೆ ನಿರ್ಧರಿಸಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಮೋದಿಯಿಂದ ಸಂವಿಧಾನಕ್ಕೆ ಕಂಟಕ: ಹಂಸಲೇಖ


ಹಂಸಲೇಖ

'ಕೇರಳದ ಮಂದಿ ರಾಜಕೀಯ ಸೂಕ್ಷ್ಮಗಳನ್ನು ಥಟ್ಟನೆ ಗ್ರಹಿಸುತ್ತಾರೆ. ಕನ್ನಡಿಗರಿಗೆ ಅಂತಹ ಶಕ್ತಿ ಇಲ್ಲ. ನಾವು ಅದನ್ನು ರೂಢಿಸಿಕೊಳ್ಳಬೇಕು' ಎಂದು ಹಂಸಲೇಖ ಹೇಳಿದರು.

'10 ವರ್ಷಗಳ ಹಿಂದೆ ಪ್ರಧಾನಿ ಮೋದಿ ಮೊದಲ ಬಾರಿಗೆ ಸಂಸತ್ತು ಪ್ರವೇಶಿಸುವಾಗ ಸಂಸತ್ ಭವನಕ್ಕೆ ನಮಸ್ಕರಿಸಿದ್ದರು. ಆಗ ಆ ವ್ಯಕ್ತಿಗೆ ಎಷ್ಟು ವಿನಯ ಇದೆ ಎಂದು ಆಶ್ಚರ್ಯಪಟ್ಟಿದ್ದೆ. ಆದರೆ ನನ್ನ ಸೌಂಡ್ ಎಂಜಿನಿಯರ್ ಕೇರಳದವ. ಆತ ಇದು ಬರಿಯ ನಾಟಕ ಎಂದಿದ್ದ. ಸಂಸತ್ ಭವನಕ್ಕೆ ನಮಸ್ಕರಿಸಿದ್ದ ಮೋದಿ, ಸಂಸತ್ ಭವನವನ್ನೇ ಬದಲಿಸಿಬಿಟ್ಟರು. ಇದು ನಾಟಕ ಎಂಬುದನ್ನು ಕೇರಳದವರು ಮೊದಲೇ ಗ್ರಹಿಸಿದ್ದರು. ಅದು ನಿಜವಾಯಿತು. ಈ ಬಾರಿ ಸಂಸತ್ ಪ್ರವೇಶಿಸುವಾಗ ಸಂವಿಧಾನಕ್ಕೆ ನಮಸ್ಕರಿಸಿದ್ದಾರೆ. ಖಂಡಿತಾ ಸಂವಿಧಾನ ಬದಲಿಸುತ್ತಾರೆ. ಕೇರಳದವರಿಗೆ ಇರುವಂತಹ ಜಾಗೃತಿ ನಮ್ಮಲ್ಲೂ ಇರಬೇಕು' ಎಂದರು.

'ಕನ್ನಡದ ಪ್ರಾದೇಶಿಕ ಪಕ್ಷ ಕಟ್ಟುವುದು ಸುಲಭದ ಕೆಲಸವಲ್ಲ. ದೇಶದ ಪ್ರತಿ ಬ್ರಾಹ್ಮಣನ ಮನೆಯಲ್ಲೂ ಭಗವದ್ಗೀತೆ ಜತೆಗೆ ಆರ್‌ಎಸ್‌ಎಸ್‌ನ ಚಿಂತನ ಗಂಗಾ ಇರುತ್ತದೆ. ಭಾರತದ ವ್ಯವಸ್ಥೆಯ ಮೇಲೆ ಹೇಗೆ ದಾಳಿ ನಡೆಸಬೇಕು, ತಮಗೆ ಬೇಕಾದಂತೆ ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಅದು ಅವರಿಗೆ ಹೇಳಿಕೊಡುತ್ತದೆ. ಕನ್ನಡದ ಪಕ್ಷ ಕಟ್ಟುವವರಿಗೂ ಅಂತಹ ಒಂದು ಮಾರ್ಗಸೂಚಿಯ ಅವಶ್ಯಕತೆ ಇದೆ. ಅದು ಚಿಂತನ ಗಂಗಾದಂತಿರದೆ, ನಾಡನ್ನು ಕಟ್ಟುವಂತಿರಬೇಕು. ಪ್ರತಿಯೊಬ್ಬ ಕನ್ನಡಿಗನೂ ಸಂವಿಧಾನದ ಜತೆಗೆ, ಕನ್ನಡದ ಠರಾವನ್ನು ಇರಿಸಿಕೊಳ್ಳಬೇಕು' ಎಂದು ಕರೆ ನೀಡಿದರು.

ಪ್ರವರ ಥಿಯೇಟರ್ ವಾರ್ಷಿಕೋತ್ಸವದಲ್ಲಿ ರಂಗಕರ್ಮಿ ಮಾಲತೇಶ್ ಬಡಿಗೇರ್

'ಸರ್ಕಾರದ ಪ್ರಶಸ್ತಿ: ಪಾರದರ್ಶಕತೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಗಳು ನೀಡುವ ಪ್ರಶಸ್ತಿಗಳು ಇತ್ತೀಚೆಗೆ ಪಾರದರ್ಶಕತೆ ಕಳೆದುಕೊಳ್ಳುತ್ತಿವೆ. ಜಾತಿ ಮೊದಲಾದ ಮಾನದಂಡಗಳ ಆಧಾರದಲ್ಲಿ ಆಯ್ಕೆ ಮಾಡುತ್ತಿರುವುದೇ ಇದಕ್ಕೆ ಕಾರಣ' ಎಂದು ರಂಗಕರ್ಮಿ ಮಾಲತೇಶ್ ಬಡಿಗೇರ್ ತಿಳಿಸಿದರು.

ಪ್ರವರ ಥಿಯೇಟರ್ ನಗರದಲ್ಲಿ ಶನಿವಾರ ಹಮ್ಮಿಕೊಂಡ 11ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ನಟ, ರಂಗನಿರ್ದೇಶಕ ಪ್ರದೀಪ್ ಚಂದ್ರ ಕುತ್ಪಾಡಿ ಅವರಿಗೆ 'ಪ್ರವರ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

'ಸರ್ಕಾರಗಳು ಗುರುತಿಸದ ನೈಜ ಸಾಧಕರನ್ನು ಸಂಘ–ಸಂಸ್ಥೆಗಳು ಗುರುತಿಸಿ, ಗೌರವಿಸುತ್ತಿರುವುದು ಶ್ಲಾಘನೀಯ' ಎಂದು ಹೇಳಿದರು.

ಪ್ರದೀಪ್ ಚಂದ್ರ ಕುತ್ಪಾಡಿ, 'ಎಡ–ಬಲ ಪಂಥಗಳ ನಡುವೆ ನಾವು ನಾಟಕ ಪಂಥವನ್ನು ಕಂಡುಕೊಂಡಿದ್ದೇವೆ. ರಾಜಕೀಯ ಮಾಡಲು ಹೊರಗಡೆ ಬೇಕಾದಷ್ಟು ಅವಕಾಶಗಳಿವೆ. ಕಲೆಗೆ ಸಂಬಂಧಿಸಿದಂತೆ ಯಾವುದೇ ಪಂಥಕ್ಕೆ ಒಳಗಾಗದೆ, ಪ್ರದರ್ಶನ ನೀಡಿದರೆ ಎಲ್ಲರೂ ನಮ್ಮನ್ನು ಒಪ್ಪಿಕೊಳ್ಳುತ್ತಾರೆ' ಎಂದು ತಿಳಿಸಿದರು.

'ನಾಟಕ ಕಲಾವಿದರು ತಿಂಗಳಾನುಗಟ್ಟಲೆ ರಂಗಾಭ್ಯಾಸ ಮಾಡುತ್ತಾರೆ. ಪ್ರದರ್ಶನದ ದಿನ ಪ್ರೇಕ್ಷರಿಲ್ಲದಿದ್ದರೆ ನಿರಾಶೆಯಾಗುತ್ತದೆ. ಕಲಾ ಪೋಷಕರು ತಂಡಕ್ಕೆ ಬೆನ್ನು ತಟ್ಟಿದಾಗ ಅದು ಗಟ್ಟಿಯಾಗಿ ನಿಲ್ಲುತ್ತದೆ' ಎಂದು ಹೇಳಿದರು.

ಪ್ರವರ ಥಿಯೇಟರ್ ಸಂಸ್ಥಾಪನಾ ನಿರ್ದೇಶಕ ಹನು ರಾಮಸಂಜೀವ ಅವರು ತಮ್ಮ ತಂಡ ಬೆಳೆದು ಬಂದ ಬಗೆ ಹಾಗೂ ನೀಡಿದ ಪ್ರದರ್ಶನಗಳ ಬಗ್ಗೆ ವಿವರಿಸಿದರು.

ಬಳಿಕ ಪ್ರವರ ತಂಡದಿಂದ 'ಅಣು ರೇಣು ತೃಣ ಕಾಷ್ಠ' ನಾಟಕ ಪ್ರದರ್ಶನ ಕಂಡಿತು.

ಸಮಾರಂಭದಲ್ಲಿ ಪ್ರದೀಪ್ ಚಂದ್ರ ಕುತ್ಪಾಡಿ ಅವರಿಗೆ 'ಪ್ರವರ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಪ್ರವರ ಥಿಯೇಟರ್ ಕಾರ್ಯಕಾರಿ ಸದಸ್ಯ ಸಚಿನ್ ಎಚ್. ಶೆಟ್ಟಿ, ಸಂಸ್ಥಾಪನಾ ನಿರ್ದೇಶಕ ಹನು ರಾಮಸಂಜೀವ, ಕರ್ನಾಟಕ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ಮತ್ತು ಮಾಲತೇಶ ಬಡಿಗೇರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಕಲೆಗೆ ಯಾವುದೇ ಪಂಥವಿಲ್ಲ: ಅಭಿಮತ
- ನಟ, ರಂಗನಿರ್ದೇಶಕ ಪ್ರದೀಪ್ ಚಂದ್ರ ಕುತ್ಪಾಡಿ ಅವರಿಗೆ 'ಪ್ರವರ ಪ್ರಶಸ್ತಿ'
- 'ಅಣು ರೇಣು ತೃಣ ಕಾಷ್ಠ' ನಾಟಕ ಪ್ರದರ್ಶನ

ಶಿಕ್ಷಣ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಭೂಗೋಳಶಾಸ್ತ್ರ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ–12 ಭಾರತದ ಮಣ್ಣುಗಳು

2) ಭಾರತದಲ್ಲಿ ಎಷ್ಟು ಪ್ರದೇಶದಲ್ಲಿ ಮೆಕ್ಕಲು ಮಣ್ಣು ಕಂಡು ಬರುತ್ತದೆ.
ಉತ್ತರ:– ಮೆಕ್ಕಲು ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು.

3) ಭಾರತದಲ್ಲಿ ಎಲ್ಲೆಲ್ಲಿ ಮೆಕ್ಕಲು ಮಣ್ಣನ್ನು ಹೆಚ್ಚಾಗಿ ನೋಡಬಹುದು?
ಉತ್ತರ:– ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ, ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ

4) ಮೆಕ್ಕಲು ಮಣ್ಣನ್ನು ಹೊಂದಿರುವ ಪ್ರದೇಶದಲ್ಲಿ ಯಾವೆಲ್ಲಾ ಬೆಳೆಗಳನ್ನು ನೋಡಬಹುದು?
ಉತ್ತರ:– ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

5) ಭಾರತದಲ್ಲಿರುವ ಮೆಕ್ಕಲು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ
ಉತ್ತರ:– ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

6) ಯಾವ ಮಣ್ಣನ್ನು ರೆಗೂರ್ ಮಣ್ಣು ಎಂದು ಕರೆಯುವರು?
ಉತ್ತರ:– ಕಪ್ಪು

7) ನಮ್ಮ ದೇಶದಲ್ಲಿ ಕಪ್ಪು ಮಣ್ಣು ಎಷ್ಟು ಪ್ರದೇಶದಲ್ಲಿ ಹರಡಿದೆ?
ಉತ್ತರ:– ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶ

8) ಕಪ್ಪು ಮಣ್ಣು ಉತ್ಪತ್ತಿ ಹೇಗಾಗಿದೆ?
ಉತ್ತರ:– ಕಪ್ಪು ಮಣ್ಣು ಅಗ್ನಿ ಶಿಲೆಗಳ ಶಿಥಲಿಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದರೂ ತೇವಾಂಶ ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ.

9) ಕಪ್ಪುಮಣ್ಣಿನಲ್ಲಿ ಹೆಚ್ಚಾಗಿ ಬೆಳೆಯುವ ಬೆಳೆ ಯಾವುವು?
ಉತ್ತರ:– ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ನಿಂಬೆ, ದ್ರಾಕ್ಷಿ ಇತ್ಯಾದಿ

10) ಕಪ್ಪು ಮಣ್ಣು ಹೆಚ್ಚಾಗಿ ಎಲ್ಲೆಲ್ಲಿ ಕಾಣಸಿಗುತ್ತದೆ?
ಉತ್ತರ:– ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರ ಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಪ್ಪು ಮಣ್ಣು ಕಾಣಬರುತ್ತದೆ.

10) ಕಪ್ಪು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ
ಉತ್ತರ:– ಕಪ್ಪು ಮಣ್ಣನ್ನು 'ರೇಗೂರ್ ಮಣ್ಣು' ಎಂತಲೂ ಕರೆಯುತ್ತಾರೆ. ಈ ಮಣ್ಣು ಹತ್ತಿ ಬೆಳೆಗೆ ಬಹುಸೂಕ್ತವಾಗಿರುವುದರಿಂದ 'ಕಪ್ಪುಹತ್ತಿ ಬೆಳೆಯುವ ಮಣ್ಣು' ಎಂತಲೂ ಕರೆಯವರು. ಇದು ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುತ್ತದೆ. ಕಪ್ಪು ಮಣ್ಣಿನ ಪ್ರದೇಶವನ್ನು ಡೆಕ್ಕನ್ ಟ್ರಾಪ್ ಎಂದು ಸಹಾ ಕರೆಯುತ್ತಾರೆ. ಈ ಮಣ್ಣು ಅಗ್ನಿ ಶಿಲೆಗಳ ಶಿಥಲೀಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದರು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಇದು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಮಣ್ಣು ಕಬ್ಬಿಣ, ಸುಣ್ಣ ಹಾಗೂ ಮೆಗ್ನೇಶಿಯಂ ಕಾರ್ಬೋನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿದೆ. ಇದು ಒಣ ಬೇಸಾಯಕ್ಕೆ ಸೂಕ್ತವಾಗಿದ್ದು ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನ ಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ನಿಂಬೆ, ದ್ರಾಕ್ಷಿ ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ

11) ಪರ್ಯಾಯ ಪ್ರಸ್ಥಭೂಮಿಯಲ್ಲಿ ಯಾವ ಮಣ್ಣು ಹೆಚ್ಚು ವಿಸ್ತರವಾಗಿ ಹರಡಿದೆ?
ಉತ್ತರ:– ಕೆಂಪು ಮಣ್ಣು

12) ಕೆಂಪು ಮಣ್ಣು ಎಷ್ಟು ಚದರ್ ಕಿ ಮೀ ನಲ್ಲಿ ಹರಡಿದೆ?
ಉತ್ತರ:– 5.18 ಲಕ್ಷ ಚದರ್ ಕಿ.ಮೀ

13) ಕೆಂಪು ಮಣ್ಣು ಹರಡಿರುವ ಪ್ರದೇಶವನ್ನು ಗುರುತಿಸಿ
ಉತ್ತರ:– ಕೆಂಪುಮಣ್ಣು ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಮಧ್ಯಪ್ರದೇಶದ ಝಾನ್ಸಿಯವರೆಗೆ ಹಬ್ಬಿದೆ . ಅದೇ ರೀತಿ ಪಶ್ಚಿಮದಲ್ಲಿ ಗುಜರಾತಿನ ಕಚ್‌ನಿಂದ ಪೂರ್ವದಲ್ಲಿ ಜಾರ್ಖಂಡ್‌ನ ರಾಜಮಹಲ್‌ವರೆಗೆ ಹಬ್ಬಿದೆ.

14) ಕೆಂಪು ಮಣ್ಣಿನಲ್ಲಿ ಬೆಳೆಯಲಾಗುವ ಬೆಳೆಗಳೆಂದರೆ ಯಾವುವು?
ಉತ್ತರ:– ರಾಗಿ, ತಂಬಾಕು, ಹಾಗೂ ಎಣ್ಣೆಕಾಳುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ

15) ಕೆಂಪುಮಣ್ಣಿನ ಬಗ್ಗೆ ವಿವರವಾಗಿ ಬರೆಯಿರಿ
ಉತ್ತರ:– ಕೆಂಪು ಮಣ್ಣು ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿರುವ ಮಣ್ಣಾಗಿದೆ. ಕೆಂಪು ಮಣ್ಣು 5.18 ಚದರ್ ಕಿ.ಮೀ.ನಲ್ಲಿ ಹರಡಿದೆ ಇದು ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಮಧ್ಯಪ್ರದೇಶದ ಝಾನ್ಸಿಯವರೆಗೆ ಹಬ್ಬಿದೆ. ಅದೇ ರೀತಿ ಪಶ್ಚಿಮದಲ್ಲಿ ಗುಜರಾತಿನ ಕಛ್‌ನಿಂದ ಪೂರ್ವದಲ್ಲಿ ಜಾರ್ಖಂಡ್‌ನ ರಾಜಮಹಲ್‌ವರೆಗೆ ಹಬ್ಬಿದೆ. ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ರಾಗಿ, ಹೊಗೆಸೊಪ್ಪು ಎಣ್ಣೆಕಾಳು ಬೆಳೆಯುತ್ತಾರೆ ಹಾಗೂ ನೀರಾವರಿ ಸೌಲಭ್ಯ ಇರುವಲ್ಲಿ ಭತ್ತ, ಕಬ್ಬು, ಹತ್ತಿ ಮುಂತಾದವುಗಳನ್ನು ಬೆಳೆಯುವರು.

16) ಜಂಬಿಟ್ಟಿಗೆ (ಲ್ಯಾಟರೇಟ್) ಮಣ್ಣು ವಿಶೇಷತೆ ಏನು?
ಉತ್ತರ:– ಜಂಬಿಟ್ಟಿಗೆ ಮಣ್ಣು ಸಾಮಾನ್ಯವಾಗಿ 200 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿರ್ಮಿತಗೊಂಡಿದೆ. ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರಿನಲ್ಲಿ ಉಳಿದಿರುವುದು ಕಾಣುತ್ತೇವೆ.

17) ಭಾರತದಲ್ಲಿ ಎಷ್ಟು ಚದರ್ ಕಿ.ಮೀ ಪ್ರದೇಶದಲ್ಲಿ ಜಂಬಿಟ್ಟಿಗೆ ಮಣ್ಣು ಹರಡಿದೆ?
ಉತ್ತರ:– ಭಾರತದಲ್ಲಿ ಸುಮಾರು 2.48 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡು ಬರುವುದು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

INTEGRALS

Basics

34. Evaluate $\int \cos^2 x\,dx$

Soln :– Consider $\int \cos^2 x\,dx$

$$= \int \frac{1}{2}(1+\cos 2x)\,dx$$
$$= \frac{1}{2}\int dx + \frac{1}{2}\int \cos 2x\,dx$$
$$= \frac{1}{2}\left[x + \frac{\sin 2x}{2}\right] + c$$

35. Evaluate $\int \sin^3 x\,dx$

Soln :– Consider $\int \sin^3 x\,dx$

we know that $\sin 3x = 3\sin x - 4\sin^3 x$

$$\therefore \sin^3 x = \frac{1}{4}(3\sin x - \sin 3x)$$
$$\Rightarrow \int \sin^3 x\,dx = \int \frac{1}{4}(3\sin x - \sin 3x)\,dx$$
$$= \frac{1}{4}\int (3\sin x - \sin 3x)\,dx$$
$$= \frac{1}{4}\left(-3\cos x + \frac{\cos 3x}{3}\right) + c$$

36. Evaluate $\int \cos^3 x\,dx$

Soln :– Consider $\int \cos^3 x\,dx$

we know that $\cos 3x = 4\cos^3 x - 3\cos x$

$$\therefore \cos^3 x = \frac{1}{4}(\cos 3x + 3\cos x)$$
$$\therefore \int \cos^3 x\,dx = \int \frac{1}{4}(\cos 3x + 3\cos x)\,dx$$
$$= \frac{1}{4}\int \cos 3x\,dx + \frac{1}{4}\int 3\cos x\,dx$$
$$= \frac{1}{4}\left(\frac{\sin 3x}{3} + 3\sin x\right) + c$$

37. Integrate $\int \sqrt[4]{x^5}\,dx$ w.r.t 'x'

Soln :– Given $\int \sqrt[4]{x^5}\,dx$

$$= \frac{x^{9/4}}{\frac{9}{4}} = \frac{4x^{9/4}}{9}$$

38. Integrate $\int (x-1)(x-2).dx$ **w.r.t 'x'**

Soln:- **Given** $\int (x-1)(x-2).dx$

$$= \int (x^2 - x - 2x + 2).dx$$
$$= \int (x^2 - 3x + 2).dx$$
$$= \frac{x^3}{3} - \frac{3x^2}{2} + 2x + c$$

39. Integrate $\int \left(x^2 - \frac{1}{x^3}\right)^2 dx$ **w.r.t 'x'**

Soln: - **Given** $\int \left(x^2 - \frac{1}{x^3}\right)^2 dx$

$$= \int \left(x^4 + \frac{1}{x^6} - \frac{2}{x}\right) dx$$
$$= \frac{x^5}{5} - \frac{1}{5x^5} - 2\log_e x + c$$

40. Integrate $\int \left(\sqrt{1-\sin 2x}\right)dx$ **w.r.t 'x'**

Soln: - **Given** $\int \left(\sqrt{1-\sin 2x}\right)dx$

$$= \int \left(\sqrt{\cos^2 x + \sin^2 x - 2\sin x\cos x}\right)dx$$
$$= \int \left(\sqrt{(\cos x - \sin x)^2}\right)dx$$
$$= \int (\cos x - \sin x)\,dx$$
$$= \sin x + \cos x + c$$

41. Integrate $\int \frac{1}{\sqrt{1-x}}\,dx$ **w.r.t 'x'**

Soln: - Given $\int \frac{1}{\sqrt{1-x}}\,dx$

$$= \int (1-x)^{-1/2}\,dx$$
$$= \int (-x+1)^{-1/2}\,dx$$
$$= \frac{(-x+1)^{1/2}}{-\frac{1}{2}} + c$$
$$= -2(1-x)^{1/2} + c$$

42. Integrate $\int \sin^2 3x\,dx$ **w.r.t 'x'**

Soln: - Given $\int \sin^2 3x\,dx$

$$= \int \left(\frac{1-\cos 6x}{2}\right)dx$$
$$= \frac{1}{2}\int (1-\cos 6x)\,dx$$
$$= \frac{1}{2}\left(x - \frac{\sin 6x}{6}\right) + c$$

43. Integrate $\int \frac{1}{e^{-2x}}\,dx$ **w.r.t 'x'**

Soln:- Given $\int \frac{1}{e^{-2x}}\,dx$

$$\int e^{-2x}\,dx = -\frac{e^{-2x}}{2} + c$$

44. Integrate $\int \frac{1}{e^x} + \frac{1}{e^{2x}} - \frac{1}{e^{2x}}\,dx$ **w.r.t 'x'**

Soln: - Given $\int \frac{1}{e^x} + \frac{1}{e^{2x}} - \frac{1}{e^{2x}}\,dx$

$$= \int e^{-x} + e^{-2x} - e^{-3x}\,dx$$
$$= -e^{-x} - \frac{e^{-2x}}{2} + \frac{e^{-3x}}{3}c$$

45. Evaluate $\int \frac{10x^9 + 10^x \log_e 10}{10^x + x^{10}}.dx$

Soln: - **Given** $\int \frac{10x^9 + 10^x \log_e 10}{10^x + x^{10}}.dx$

(Contd……)

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್

ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್ ಯೋಜನೆಯು ಎಸ್‌ಬಿಐ ಫೌಂಡೇಷನ್‌ನ ಉಪಕ್ರಮ. ಕಡಿಮೆ ಆದಾಯ ಇರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲಿದೆ.

- **ಅರ್ಹತೆ:** 6 ರಿಂದ 12ನೇ ತರಗತಿವರೆಗಿನ ಶಾಲಾ ವಿದ್ಯಾರ್ಥಿಗಳು, ಎನ್‌ಐಆರ್‌ಎಫ್ ವಿಶ್ವವಿದ್ಯಾಲಯಗಳು/ಕಾಲೇಜುಗಳ ಪದವಿಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಐಐಟಿಗಳ ಪದವಿಪೂರ್ವ ವಿದ್ಯಾರ್ಥಿಗಳು ಮತ್ತು ಐಐಎಂಗಳ ಎಂಬಿಎ/ಪಿಜಿಡಿಎಂ ಕೋರ್ಸ್‌ಗಳಿಗೆ ಸೇರಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಗಳಿಸಿರಬೇಕು.

ಕುಟುಂಬದ ಒಟ್ಟು ವಾರ್ಷಿಕ ಆದಾಯ₹ 6 ಲಕ್ಷದವರೆಗೆ ಇರಬೇಕು (6-12ನೇ ತರಗತಿಯ ವಿದ್ಯಾರ್ಥಿಗಳಾದರೆ ₹ 3 ಲಕ್ಷದವರೆಗೆ).

- **ಆರ್ಥಿಕ ಸಹಾಯ:** 6 ರಿಂದ 12ನೇ ತರಗತಿಯವರೆಗೆ: ₹ 15,000,
- **ಯುಜಿ ವಿದ್ಯಾರ್ಥಿಗಳು:** ₹ 50,000
- **ಪಿಜಿ ವಿದ್ಯಾರ್ಥಿಗಳು:** ₹ 70,000
- **ಐಐಟಿಗಳ ಯುಜಿ ವಿದ್ಯಾರ್ಥಿಗಳು:** ₹ 2,00,000
- **ಐಐಎಂಗಳ ಎಂಬಿಎ ವಿದ್ಯಾರ್ಥಿಗಳು:** ₹ 7,50,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 01-10-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ. Short Url: www.b4s.in/praja/SBIFS7



ರಿಲಾಯನ್ಸ್ ಫೌಂಡೇಷನ್

ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಕನಸನ್ನು ಈಡೇರಿಸಿಕೊಳ್ಳಲು ರಿಲಾಯನ್ಸ್ ಫೌಂಡೇಶನ್ ನೀಡುವ ಅಂಡರ್‌ಗ್ರಾಜುಯೇಟ್ ಸ್ಕಾಲರ್‌ಷಿಪ್ ಒಂದು ಅವಕಾಶ.

- **ಅರ್ಹತೆ:** ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಪದವಿ ಕೋರ್ಸ್‌ನ ಮೊದಲ ವರ್ಷಕ್ಕೆ ದಾಖಲಾಗಿರಬೇಕು. 12ನೇ ತರಗತಿಯಲ್ಲಿ ಶೇ 60ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ₹ 15,00,000ವರೆಗೆ ಇರಬೇಕು. ಕುಟುಂಬದ ಆದಾಯ ₹ 2,50,000ಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಭಾರತದಲ್ಲಿ ವಾಸವಿರುವಂತಹ ನಾಗರಿಕರಿಗೆ ಲಭ್ಯವಿರುತ್ತದೆ. ಸಾಮರ್ಥ್ಯ ಪರೀಕ್ಷೆಯು ಕಡ್ಡಾಯವಾಗಿದೆ.

- **ಆರ್ಥಿಕ ಸಹಾಯ:** ಪದವಿಯ ಅವಧಿಯಲ್ಲಿ ₹ 2,00,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 06-10-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url:www.b4s.in/praja/RFS11

ಆಲ್‌ಸ್ಟಮ್ ಇಂಡಿಯಾ

ಆಲ್‌ಸ್ಟಮ್ ಇಂಡಿಯಾವು ಉನ್ನತ ಶಿಕ್ಷಣ ಪಡೆಯಲು ಹಂಬಲಿಸುತ್ತಿರುವ ವಿದ್ಯಾರ್ಥಿಗಳಿಗಾಗಿ ರೂಪಿಸಿದ ಸ್ಕಾಲರ್‌ಷಿಪ್.

ಅರ್ಹತೆ: ಸ್ಟೆಮ್ ಕೋರ್ಸ್‌ಗಳಲ್ಲಿ ಯಾವುದೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಹಿಂದಿನ ಶೈಕ್ಷಣಿಕ ವರ್ಷ / ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 6,00,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು.

- **ಆರ್ಥಿಕ ಸಹಾಯ:** ₹ 75,000ದ ವರೆಗೆ (ಒಂದು-ಬಾರಿ)
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-09-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/AISDG7

ಲೆಗ್ರಾಂಡ್ ಎಂಪವರಿಂಗ್ ಸ್ಕಾಲರ್‌ಷಿಪ್

ಭಾರತದಾದ್ಯಂತ ಬಿ.ಟೆಕ್, ಬಿ.ಇ, ಬಿ.ಆರ್ಕ್ ಅಥವಾ ಇತರ ಹಣಕಾಸು ಅಥವಾ ವಿಜ್ಞಾನದಲ್ಲಿ (ಉದಾಹರಣೆಗೆ ಬಿ.ಎಸ್‌ಸಿ, ಬಿ.ಕಾಂ., ಬಿಬಿಎ ಇತ್ಯಾದಿ) ಪದವಿಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ಬೆಂಬಲಿಸಲು ಈ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಅರ್ಹತೆ: ಪದವಿ ಕೋರ್ಸ್‌ಗೆ ಪ್ರವೇಶ ಪಡೆದಿರಬೇಕು. ಅರ್ಜಿದಾರರು 2023–24ನೇ ಸಾಲಿನಲ್ಲಿ 12ನೇ ತರಗತಿ ಉತ್ತೀರ್ಣರಾಗಿರಬೇಕು.ಕನಿಷ್ಠ ಶೇ 70 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಪ್ರತಿಭಾನ್ವಿತ ಹುಡುಗಿಯರು, ಅಂಗವಿಕಲ ಹುಡುಗಿಯರು, ಎಲ್‌ಜಿಬಿಟಿಕ್ಯೂ + ವಿದ್ಯಾರ್ಥಿಗಳು, ಕೋವಿಡ್ ಪೀಡಿತ ವಿದ್ಯಾರ್ಥಿಗಳು ಮತ್ತು ಒಬ್ಬರೇ ಪೋಷಕರಿರುವ ಅಥವಾ ಅನಾಥ ವಿದ್ಯಾರ್ಥಿಗಳಿಗೆ ಆದ್ಯತೆ.

ವಿಶೇಷ ವರ್ಗದ* ವಿದ್ಯಾರ್ಥಿಗಳು 10 ಮತ್ತು 12 ನೇ ತರಗತಿ ಪರೀಕ್ಷೆಗಳಲ್ಲಿ ಶೇ 60 ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 5,00,000ಕ್ಕಿಂತ ಕಡಿಮೆಯಿರಬೇಕು.

- **ಆರ್ಥಿಕ ನೆರವು:** ಶೇ 60ರಷ್ಟು ಕೋರ್ಸ್ ಶುಲ್ಕ ಪಾವತಿ. ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್ ಪೂರ್ಣಗೊಳ್ಳುವವರೆಗೆ ವರ್ಷಕ್ಕೆ ಶೇ 80ರಷ್ಟು ಶುಲ್ಕ ನೀಡಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆ ದಿನ:** 05-09-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/LFLS9

ಕೋರ್ಸ್ ಆಯ್ಕೆ ಗೊಂದಲ ನಿವಾರಿಸಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ನಾನು ದ್ವಿತೀಯ ಪಿಯು ಮುಗಿಸಿದ್ದು, ಬಿಟೆಕ್ ಕೋರ್ಸ್ ವಿಭಾಗವನ್ನು ಆಯ್ಕೆ ಮಾಡುವುದರಲ್ಲಿ ಗೊಂದಲವಿದೆ. ಮಾರ್ಗದರ್ಶನ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಎಂಜಿನಿಯರಿಂಗ್ ಕೋರ್ಸಿನಲ್ಲಿ 55ಕ್ಕೂ ಹೆಚ್ಚು ವಿಭಾಗಗಳಿವೆ. ಯಾವುದೇ ವಿಭಾಗವಾದರೂ ಕೋರ್ಸ್ ಫಲಿತಾಂಶ ಉತ್ಕೃಷ್ಟವಾಗಿದ್ದರೆ ಬೇಡಿಕೆ ಇದೆ. ಕಂಪ್ಯೂಟರ್ ಸೈನ್ಸ್, ಐಟಿ, ರೊಬಾಟಿಕ್ಸ್, ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಸೈಬರ್ ಸೆಕ್ಯೂರಿಟಿ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್, ಎಲೆಕ್ಟ್ರಿಕಲ್, ಬಯೋಟೆಕ್ನಾಲಜಿ, ಮೆಕ್ಯಾನಿಕಲ್ ಇತ್ಯಾದಿ ಕೋರ್ಸ್‌ಗಳಿಗೆ ಬೇಡಿಕೆ ಇದೆ. ಎಂಜಿನಿಯರಿಂಗ್ ಕೋರ್ಸ್ ಮಾಡಲು ತಾರ್ಕಿಕ ಪ್ರತಿಪಾದನಾ ಕೌಶಲ, ಸಮಸ್ಯೆಗಳಿಗೆ ಪರಿಹಾರ, ಯೋಜನೆಯ ನಿರ್ವಹಣೆ ಮತ್ತು ವಿಶ್ಲೇಷಣಾ ಕೌಶಲಗಳ ಜೊತೆಗೆ ಆಯಾ ವಿಭಾಗಗಳ ವಿಷಯಗಳಲ್ಲಿ ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆ ಇರಬೇಕು. ಹಾಗೂ, ವೃತ್ತಿಯೋಜನೆಯಂತೆ ಎಲ್ಲಿಯವರೆಗೆ ಓದಬೇಕೆನ್ನುವ ಗುರಿಯಿರಬೇಕು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/channel/UCH-uglg9bBlyH5QQbn_Jjlw

ಸುಭಾಷಿತ

ಕೆಲವೊಮ್ಮೆ ಜನ ಸತ್ಯವನ್ನು ಕೇಳಿಸಿಕೊಳ್ಳಲು ಇಚ್ಛಿಸುವುದಿಲ್ಲ. ಏಕೆಂದರೆ, ತಮ್ಮ ಭ್ರಮೆಗಳನ್ನು ನಾಶ ಮಾಡಿಕೊಳ್ಳುವುದು ಅವರಿಗೆ ಬೇಕಾಗಿರುವುದಿಲ್ಲ.

-ಫ್ರೆಡರಿಕ್ ನೀತ್ಸೆ

ಲ್ಯಾಟರಲ್ ಎಂಟ್ರಿ ರದ್ದು ಕೇಂದ್ರದ ತೀರ್ಮಾನ ಸ್ವಾಗತಾರ್ಹ

ಲ್ಯಾಟರಲ್ ಎಂಟ್ರಿ ಮೂಲಕ 45 ಮಂದಿ ತಜ್ಞರನ್ನು ವಿವಿಧ ಇಲಾಖೆಗಳಿಗೆ ನೇರವಾಗಿ ನೇಮಕ ಮಾಡಿಕೊಳ್ಳುವ ಉದ್ದೇಶದಿಂದ ನೀಡಿದ್ದ ಜಾಹೀರಾತನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ. ಮಧ್ಯಮ ಶ್ರೇಣಿಯ ಅಧಿಕಾರಿಗಳನ್ನಾಗಿ ತಜ್ಞರನ್ನು ಲ್ಯಾಟರಲ್ ಎಂಟ್ರಿ ಮೂಲಕ ನೇಮಕ ಮಾಡಿಕೊಳ್ಳಲು ಮುಂದಾಗಿದ್ದ ಕೇಂದ್ರ ಸರ್ಕಾರವು ಈಗ ಹೆಜ್ಜೆ ಹಿಂದಕ್ಕೆ ಇರಿಸಿದೆ. ಆದರೆ, ಕೇಂದ್ರವು ಹೀಗೆ ಮಾಡಿದ್ದಕ್ಕೆ ಕಾರಣ, ಪ್ರಧಾನಿ ಸಚಿವಾಲಯದ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ಅವರು ಹೇಳಿರುವಂತೆ 'ಸಾಮಾಜಿಕ ನ್ಯಾಯದ ವಿಚಾರವಾಗಿ ಸಂವಿಧಾನ ಹೇಳಿರುವುದನ್ನು' ಎತ್ತಿಹಿಡಿಯುವ ಉದ್ದೇಶದಿಂದ ಅಲ್ಲ; ಬದಲಿಗೆ, ಸಂದರ್ಭವು ಸೃಷ್ಟಿಸಿದ ಒತ್ತಡದ ಪರಿಣಾಮವಾಗಿ ಸರ್ಕಾರ ಈ ರೀತಿ ಇಟ್ಟ ಹೆಜ್ಜೆ ಹಿಂದಕ್ಕೆ ಸರಿಸಿದೆ. 'ಲ್ಯಾಟರಲ್ ಎಂಟ್ರಿ ಪ್ರಕ್ರಿಯೆಯು ಸಮಾನತೆಯ ತತ್ವಕ್ಕೆ ಅನುಗುಣವಾಗಿ ಇರಬೇಕು ಎಂದು ಪ್ರಧಾನಿ ನಂಬಿದ್ದಾರೆ. ಹೀಗಾಗಿ, ಜಾಹೀರಾತು ನೀಡಿದ ಮೂರು ದಿನಗಳ ನಂತರ ಅಧಿಸೂಚನೆಯನ್ನು ರದ್ದುಪಡಿಸಲಾಯಿತು' ಎಂದು ಸಚಿವರು ಹೇಳಿದ್ದಾರೆ. ಲ್ಯಾಟರಲ್ ಎಂಟ್ರಿ ತೀರ್ಮಾನವನ್ನು ಮೀಸಲಾತಿಯ ಪ್ರಯೋಜನವನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿದೆ ಎಂದು ಕಾಂಗ್ರೆಸ್ ಹಾಗೂ ಇತರ ಕೆಲವು ವಿರೋಧ ಪಕ್ಷಗಳು ಟೀಕಿಸಿದ್ದವು. ಅಲ್ಲದೆ, ಎನ್‌ಡಿಎ ಮೈತ್ರಿಕೂಟದ ಕೆಲವು ಪಕ್ಷಗಳು ಕೂಡ ಈ ನಡೆಯ ಬಗ್ಗೆ ಅತೃಪ್ತಿ ದಾಖಲಿಸಿದ್ದವು. ಜಾಹೀರಾತು ನೀಡಿದ್ದನ್ನು ಸಮರ್ಥಿಸಿಕೊಂಡಿದ್ದ ಕೇಂದ್ರ ಸರ್ಕಾರವು ಟೀಕೆಗಳ ಪರಿಣಾಮವಾಗಿ ತೊಂದರೆ ಎದುರಾಗಬಹುದು ಎಂಬುದನ್ನು ಅರಿತ ನಂತರದಲ್ಲಿ ಜಾಹೀರಾತನ್ನು ರದ್ದುಪಡಿಸಿತು. ಬಿಜೆಪಿಯು ಮೀಸಲಾತಿ ನೀತಿಯನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿದೆ ಎಂದು ವಿರೋಧ ಪಕ್ಷಗಳು ಮಾಡಿದ್ದ ಆರೋಪದ ಪರಿಣಾಮವಾಗಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಒಂದಿಷ್ಟು ಹಿನ್ನಡೆ ಅನುಭವಿಸಬೇಕಾಯಿತು ಎಂದು ವಿಶ್ಲೇಷಿಸಲಾಗಿದೆ. ಲ್ಯಾಟರಲ್ ಎಂಟ್ರಿ ವಿಚಾರದಲ್ಲಿ ಈ ಪರಿಯ ವಿರೋಧ ವ್ಯಕ್ತವಾಗಬಹುದು ಎಂಬ ನಿರೀಕ್ಷೆ ಬಿಜೆಪಿಗೆ ಇದ್ದಿರಲಿಕ್ಕಿಲ್ಲ.

ಈ ರೀತಿಯ ನೇಮಕಾತಿಗಳು ನಡೆಯುವಾಗ ತಮಗೆ ಹತ್ತಿರದವರನ್ನೇ ನೇಮಿಸುವ, ಪಾರದರ್ಶಕತೆ ಇಲ್ಲವಾಗುವ ಸಾಧ್ಯತೆಗಳು ಇರುತ್ತವೆ

ಲ್ಯಾಟರಲ್ ಎಂಟ್ರಿ ವಿಚಾರವಾಗಿ ಸರ್ಕಾರ ಕೈಗೊಂಡಿದ್ದ ತೀರ್ಮಾನವು ಮೀಸಲಾತಿಯ ನಿಯಮಗಳನ್ನು ಉಲ್ಲಂಘಿಸಿತ್ತು, ಈ ವಿಚಾರವಾಗಿ ವ್ಯಕ್ತವಾಗಿದ್ದ ಕಳವಳಗಳಿಗೆ ಸಮರ್ಥನೆ ಇತ್ತು. ಈ ಹಿಂದೆ ಮನಮೋಹನ್ ಸಿಂಗ್ ಅವರನ್ನೂ ನಂದನ್ ನಿಲೇಕಣಿ ಅವರನ್ನೂ ಮಹತ್ವದ ಹುದ್ದೆಗಳಿಗೆ ನೇಮಕ ಮಾಡಿದಂತೆ ಇದು ಬಹಳ ಅಪರೂಪದ ನೇಮಕಾತಿ ಆಗಿರಲಿಲ್ಲ, ಹಲವರನ್ನು ಅಧಿಕಾರಶಾಹಿಗೆ ನೇಮಕ ಮಾಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಮೀಸಲಾತಿ ನೀತಿಯನ್ನು ಉಲ್ಲಂಘಿಸಬಾರದಿತ್ತು, ನಿರ್ದಿಷ್ಟ ಹುದ್ದೆಗಳಿಗೆ, ನಿರ್ದಿಷ್ಟ ಅವಧಿಗೆ ತಜ್ಞರನ್ನು, ನಾಯಕತ್ವದ ಗುಣಗಳು ಇರುವವರನ್ನು ನೇಮಕ ಮಾಡುವುದು ತಮ್ಮ ಉದ್ದೇಶ ಎಂದು ಕೇಂದ್ರವು ಹೇಳಿತ್ತು. 'ಇದರಿಂದಾಗಿ ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಹೊಸತನ ಬರುತ್ತದೆ, ಹೊಸ ಆಲೋಚನೆಗಳಿಗೆ ಅಲ್ಲಿ ಅವಕಾಶ ಸಿಗುತ್ತದೆ' ಎಂದು ಹೇಳಲಾಗಿತ್ತು. ಆದರೆ ಈ ರೀತಿಯ ನೇಮಕಾತಿಗಳು ನಡೆಯುವಾಗ ತಮಗೆ ಹತ್ತಿರದವರನ್ನೇ ನೇಮಿಸುವ, ಪಾರದರ್ಶಕತೆ ಇಲ್ಲವಾಗುವ ಸಾಧ್ಯತೆಗಳು ಇರುತ್ತವೆ. ಲ್ಯಾಟರಲ್ ಎಂಟ್ರಿ ಪ್ರಸ್ತಾವಕ್ಕೆ ವಿರೋಧ ದಾಖಲಿಸಲು ಇದು ಕೂಡ ಒಂದು ಸಮರ್ಥನೀಯ ಕಾರಣ ಆಗಬಲ್ಲದು.

ಖಾಸಗಿ ವಲಯದಿಂದ ನೇಮಕ ಮಾಡಿದ ವ್ಯಕ್ತಿಗಳಿಗೆ ಅವರದ್ದೇ ಆದ ಆಸಕ್ತಿಗಳು ಇರುತ್ತವೆ. ಆ ಆಸಕ್ತಿಗಳು ಅವರ ನಡೆ, ನುಡಿಯ ಮೇಲೆ ಪ್ರಭಾವ ಬೀರುತ್ತಿರುತ್ತವೆ. ಹೀಗೆ ನೇಮಕ ಆದವರು ಜಂಟಿ ಕಾರ್ಯದರ್ಶಿ ಮಟ್ಟದಲ್ಲಿ ನೀತಿ ನಿರೂಪಣೆಯ ಕೆಲಸ ಮಾಡಬಹುದಿತ್ತು. ಈ ನೇಮಕಾತಿಗಳಲ್ಲಿ ರಾಜಕೀಯವು ಪ್ರಭಾವ ಬೀರುವ ಅಪಾಯವೂ ಇತ್ತು. ಸರ್ಕಾರದ ಹಲವು ಹಂತಗಳಲ್ಲಿ ಆಗುವ ತೀರ್ಮಾನಗಳ ಮೇಲೆ ರಾಜಕೀಯ ಪ್ರಭಾವ ಕೆಲಸ ಮಾಡುವುದು ಹೊಸದೇನೂ ಅಲ್ಲ. ಬಿಜೆಪಿಯ ಸೈದ್ಧಾಂತಿಕ ಮಾತೃ ಸಂಘಟನೆಯಾದ ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗಿಯಾಗಲು ಇದ್ದ ನಿರ್ಬಂಧವನ್ನು ತೆಗೆದುಹಾಕಿದ ಕೆಲವೇ ದಿನಗಳಲ್ಲಿ ಈ ಜಾಹೀರಾತು ಪ್ರಕಟವಾಗಿತ್ತು. ಆಡಳಿತ ವ್ಯವಸ್ಥೆಯಲ್ಲಿ ಇರುವ ಎಲ್ಲ ಸಮಸ್ಯೆಗಳನ್ನು ನಿವಾರಿಸಲು, ಕಾಯಿಲೆಗಳನ್ನು ನಿವಾರಿಸಲು ಲ್ಯಾಟರಲ್ ಎಂಟ್ರಿ ವ್ಯವಸ್ಥೆಯು ಮದ್ದು ಎಂದು ಹೇಳಲು ಆಗದು. ಪ್ರತಿಭೆಗೆ ಅವಕಾಶ ಒದಗಿಸುವುದು ಹಾಗೂ ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವುದು ಒಂದಕ್ಕೊಂದು ಸಂಬಂಧ ಇಲ್ಲದ ಸಂಗತಿಗಳು ಎಂದು ಪರಿಗಣಿಸಲು ಅವಕಾಶ ಇಲ್ಲ. ಕೇಂದ್ರ ಲೋಕಸೇವಾ ಆಯೋಗವು ತನ್ನ ನೇಮಕಾತಿ ನಿಯಮಗಳನ್ನು ಪಾಲಿಸುತ್ತಲೇ, ತಜ್ಞರನ್ನು ನೇಮಕ ಮಾಡಿದ ಅನುಭವ ಹೊಂದಿದೆ. ಸರ್ಕಾರ ಈಗ ಹಿಂದಕ್ಕೆ ಹೆಜ್ಜೆ ಇರಿಸಿರುವುದು ಅದು ದುರ್ಬಲವಾಗಿದೆ ಎಂಬುದನ್ನೂ ತೋರಿಸುತ್ತಿದೆ. ಈಗ ಸರ್ಕಾರವು ಎನ್‌ಡಿಎ ಮೈತ್ರಿಕೂಟದಲ್ಲಿನ ಇತರ ರಾಜಕೀಯ ಪಕ್ಷಗಳ ಮಾತಿಗೆ ಕಿವಿಗೊಡಬೇಕಿದೆ ಹಾಗೂ ವಿರೋಧ ಪಕ್ಷಗಳ ಧ್ವನಿಗೂ ಬೆಲೆ ಕೊಡಬೇಕಿದೆ. ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯು ಪ್ರಜಾತಾಂತ್ರಿಕವಾಗಿ ಇರುವಂತೆ ನೋಡಿಕೊಳ್ಳುವ ದೃಷ್ಟಿಯಿಂದ ಇದು ಒಳ್ಳೆಯದೇ.

ಗುಣಮಟ್ಟದ ಶಿಕ್ಷಣ ಒದಗಿಸುವುದು ಸಮಾನ ಅವಕಾಶದ ಗುರಿ ಸಾಧನೆಯಲ್ಲಿ ನಿರ್ಣಾಯಕ

ಬಾಲಕಿಯರ ಶಿಕ್ಷಣ: ಸಾಧನೆ, ಸವಾಲು

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಸ್ವಾತಂತ್ರ್ಯಾನಂತರ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಭಾರತ ಗಮನಾರ್ಹ ಸಾಧನೆಯನ್ನು ತೋರಿದೆ. ಇದೇ ವೇಳೆ, ಬಾಲಕಿಯರ ಶಿಕ್ಷಣ ಅದರಲ್ಲೂ ವಿಶೇಷವಾಗಿ ಅವಕಾಶವಂಚಿತ ಸಮುದಾಯಗಳ ಮಕ್ಕಳನ್ನು ಮುಖ್ಯವಾಹಿನಿಯಲ್ಲಿ ಉಳಿಸಿಕೊಂಡು ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಹಲವು ಸವಾಲುಗಳು ನಮಗೆ ಎದುರಾಗಿವೆ. ಸಂವಿಧಾನದ ಆಶಯದಂತೆ ಧರ್ಮ, ಜನಾಂಗ, ಜಾತಿ, ಲಿಂಗದಂತಹವನ್ನು ಲೆಕ್ಕಿಸದೆ, ಪ್ರತಿ ಮಗುವೂ ಗುಣಮಟ್ಟದ ಶಿಕ್ಷಣ ಪಡೆಯುವುದನ್ನು ಖಾತರಿಪಡಿಸುವುದು ಈ ಹೊತ್ತಿನ ನಮ್ಮ ಆದ್ಯತೆಯಾಗಿದೆ.

ಹಲವು ಸಂಶೋಧನೆಗಳು ಹೇಳುವಂತೆ, ಶಿಕ್ಷಣವು ಹೆಣ್ಣುಮಕ್ಕಳನ್ನು ಹೆಚ್ಚು ಸಬಲೀಕರಿಸುವುದಲ್ಲದೆ ಲಿಂಗಸಮಾನತೆ ಮತ್ತು ಸಾಮಾಜಿಕ- ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಸಮಾಜವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಯುನೆಸ್ಕೊ ಅಧ್ಯಯನದ ಪ್ರಕಾರ, ಪ್ರತಿ ಬಾಲಕಿ ಒಂದೊಂದು ವರ್ಷವೂ ಪಡೆಯುವ ಶಾಲಾ ಶಿಕ್ಷಣವು ಯೌವನದಲ್ಲಿ ಅವಳ ಆದಾಯವನ್ನು ಶೇಕಡ 10ರಿಂದ 20ರಷ್ಟು ಹೆಚ್ಚಿಸುತ್ತದೆ.

ಯುಡೈಸ್ (U-DISE) ದತ್ತಾಂಶದ ಪ್ರಕಾರ, ದೇಶದಲ್ಲಿ ಒಂದು ದಶಕದ ಅವಧಿಯ (2012- 22) ಬಾಲಕಿಯರ ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸಿದರೆ, ಶಾಲಾ ಶಿಕ್ಷಣದ ವಿವಿಧ ಹಂತಗಳಾದ ಪ್ರಾಥಮಿಕ, ಮಾಧ್ಯಮಿಕ ಮತ್ತು 11- 12ನೇ ತರಗತಿ ಒಳಗೊಂಡಂತೆ ಪ್ರೌಢ ಶಿಕ್ಷಣದಲ್ಲಿ ಹಲವಾರು ಗಮನಾರ್ಹ ಸಾಧನೆಗಳ ಜೊತೆಗೆ ಕಾಳಜಿ ವಹಿಸಬೇಕಾದ ಸಂಗತಿಗಳೂ ನಮಗೆ ಮನವರಿಕೆಯಾಗುತ್ತವೆ.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಬಾಲಕಿಯರ ದಾಖಲಾತಿ ವಾರ್ಷಿಕವಾಗಿ ಸರಾಸರಿ ಶೇ 1.14ರಷ್ಟು ಹೆಚ್ಚಳದೊಂದಿಗೆ ಗಣನೀಯ ಪ್ರಮಾಣದ ಬೆಳವಣಿಗೆಯನ್ನು ಕಂಡಿದೆ. ಮಾಧ್ಯಮಿಕ ಹಂತದಲ್ಲಿ ದಾಖಲಾತಿ ತುಲನಾತ್ಮಕವಾಗಿ ಸ್ಥಿರವಾಗಿದ್ದು, ವಾರ್ಷಿಕ ಬೆಳವಣಿಗೆ ದರ ಸರಾಸರಿ ಶೇ 0.03ರಷ್ಟು ಇದೆ. ಪ್ರೌಢ ಶಿಕ್ಷಣದ ಹಂತದಲ್ಲಿ ದಾಖಲಾತಿಯು ಕುಸಿದಿದ್ದು, ವಾರ್ಷಿಕವಾಗಿ ಶೇ 0.56ರಷ್ಟು ಇಳಿಕೆಯಾಗಿದೆ. ಈ ಬೆಳವಣಿಗೆಯು ಪ್ರೌಢ ಶಿಕ್ಷಣದ ಹಂತದಲ್ಲಿ ಬಾಲಕಿಯರನ್ನು ಶಾಲೆಗೆ ಕರೆತರುವಲ್ಲಿ ಇರುವ ಸವಾಲುಗಳನ್ನು ಸೂಚಿಸುತ್ತದೆ.

ಇನ್ನು 11 ಮತ್ತು 12ನೇ ತರಗತಿಯ ಹಂತದ ಬೆಳವಣಿಗೆ ಅತ್ಯಂತ ಕಳವಳಕಾರಿಯಾಗಿದೆ. ಇಲ್ಲಿ ವಾರ್ಷಿಕವಾಗಿ ದಾಖಲಾತಿಯಲ್ಲಿ ಸರಾಸರಿ ಶೇ 3.4ರಷ್ಟು ಗಣನೀಯ ಪ್ರಮಾಣದ ಕುಸಿತ ಕಂಡುಬಂದಿದೆ. ಇದು, ಈ ಹಂತದಲ್ಲಿ ಬಾಲಕಿಯರ ದಾಖಲಾತಿಯಲ್ಲಿ ಕಂಡುಬರುವ ಸಮಸ್ಯೆಯ ತೀವ್ರತೆಯನ್ನು ಎತ್ತಿ ತೋರಿಸುತ್ತದೆ. ಒಟ್ಟಾರೆಯಾಗಿ, 1ರಿಂದ 12ನೇ ತರಗತಿಯವರೆಗಿನ ಎಲ್ಲಾ ಹಂತಗಳಲ್ಲಿ ಬಾಲಕಿಯರ ಒಟ್ಟು ದಾಖಲಾತಿಯಲ್ಲಿ, ಹಿಂದಿನ ಒಂದು ದಶಕದಲ್ಲಿ ವಾರ್ಷಿಕವಾಗಿ ಶೇ 0.14ರಷ್ಟು ಸರಾಸರಿ ಹೆಚ್ಚಳ ಕಂಡುಬಂದಿದ್ದರೂ ವಿವಿಧ ಹಂತಗಳ ಪ್ರಗತಿಯಲ್ಲಿ ಬಹಳಷ್ಟು ಸಮಸ್ಯೆಗಳಿರುವುದನ್ನು ಅಂಕಿಅಂಶಗಳು ನಿಖರವಾಗಿ ಸೂಚಿಸುತ್ತವೆ.

ಇಂತಹ ಅಂಕಿಅಂಶಗಳ ಆಧಾರದಲ್ಲಿ ಬಾಲಕಿಯರ ಶಿಕ್ಷಣದ ಗತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ದಾಖಲಾತಿಯು ಪ್ರೋತ್ಸಾಹದಾಯಕವಾಗಿದೆ. ಆದರೆ, ಮಾಧ್ಯಮಿಕ ಹಂತದಲ್ಲಿ ನಾವು ಅತ್ಯಲ್ಪ ಬೆಳವಣಿಗೆಯನ್ನು ಮಾತ್ರ ಕಂಡಿದ್ದೇವೆ. ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತಕ್ಕೆ ಬಾಲಕಿಯರು ಸುಗಮವಾಗಿ ದಾಟುವುದನ್ನು ಖಚಿತಪಡಿಸಿಕೊಂಡು, ಮಾಧ್ಯಮಿಕ ಶಿಕ್ಷಣವನ್ನು ಮುಂದುವರಿಸಲು ಅಡ್ಡಿಯಾಗುವಂತಹ ಎಲ್ಲಾ ಅಡೆತಡೆಗಳನ್ನು ಗುರುತಿಸಿ, ಪರಿಹರಿಸುವತ್ತ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ. ಶಿಕ್ಷಣ ಹಕ್ಕು ಕಾಯ್ದೆಯ ಆಶಯ ಇದು ತುರ್ತಾಗಿ ಆಗಬೇಕಾಗಿರುವ ಕೆಲಸವೂ ಹೌದು.

11 ಮತ್ತು 12ನೇ ತರಗತಿ ಒಳಗೊಂಡಂತೆ ಪ್ರೌಢ ಶಿಕ್ಷಣದ ಹಂತದಲ್ಲಿ ದಾಖಲಾತಿಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿರುವುದು ಚಿಂತೆಗೆ ಈಡುಮಾಡುವಂತಹ ಸಂಗತಿ. ಬಾಲಕಿಯರು ಉನ್ನತ ಪ್ರಾಥಮಿಕ ಶಿಕ್ಷಣದ ನಂತರ ಪ್ರೌಢ ಮತ್ತು ಉನ್ನತ ಪ್ರೌಢ ಶಿಕ್ಷಣವನ್ನು ಮುಂದುವರಿಸದಿದ್ದರೆ, ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಹಂತದಲ್ಲಿ ನಾವು ಸಾಧಿಸಿದ ಪ್ರಗತಿ ಕೆಲವೇ ಸಮಯದಲ್ಲಿ ಶೂನ್ಯವಾಗುತ್ತದೆ. ಕಾರಣ, ಮಕ್ಕಳು ಪ್ರಾಥಮಿಕ ಹಂತದಲ್ಲಿ ಕಲಿತದ್ದನ್ನು ಕ್ರಮೇಣ ಮರೆಯುವ ಸಾಧ್ಯತೆ ಇರುತ್ತದೆ. ಜೊತೆಗೆ, ಹೆಣ್ಣುಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರಿಸದಿದ್ದರೆ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಸಣ್ಣ ವಯಸ್ಸಿನಲ್ಲಿ ಮನೆಕೆಲಸ ಮತ್ತು ಮಕ್ಕಳ ಸಾಗಣೆಯಂಥ ಸಾಮಾಜಿಕ ಅನಿಷ್ಟಗಳಿಗೆ ತುತ್ತಾಗುವ ಸಾಧ್ಯತೆಗಳು ದಟ್ಟವಾಗಿರುತ್ತವೆ.

ಸಾಧಿಸಿರುವ ಪ್ರಗತಿಯ ಹೊರತಾಗಿಯೂ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಲಿಂಗ ಅಸಮಾನತೆ ಮುಂದುವರಿದಿದೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಪ್ರಕಾರ, ದೇಶದಲ್ಲಿ ಏಳು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣ ಶೇ 65.46ರಷ್ಟಿದ್ದರೆ, ಗಂಡುಮಕ್ಕಳಲ್ಲಿ ಈ ಪ್ರಮಾಣ ಶೇ 80.88ರಷ್ಟಿದೆ. ಈ ಅಂತರವನ್ನು ಸರಿಪಡಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಎಲ್ಲರಿಗೂ ಕನಿಷ್ಠ ಶಾಲಾ ಶಿಕ್ಷಣವನ್ನು ಖಾತರಿಪಡಿಸುವಲ್ಲಿ ಬಾಲಕಿಯರ ಶಿಕ್ಷಣವನ್ನು ಉತ್ತೇಜಿಸುವುದು ನಿರ್ಣಾಯಕವಾಗುತ್ತದೆ.

ಬಾಲಕಿಯರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇರುವ ಸವಾಲು ಮತ್ತು ತೀವ್ರತೆಯನ್ನು ಅರ್ಥಮಾಡಿಕೊಳ್ಳಲು, ಹೆಣ್ಣುಮಕ್ಕಳ ಜನಸಂಖ್ಯೆಯನ್ನು ಮುನ್ನೋಟದ ಮೂಲಕ ಅಂದಾಜಿಸುವುದು ಮತ್ತು ವಿಶ್ಲೇಷಿಸುವುದು ಅಗತ್ಯ. ಕೇಂದ್ರ ಸರ್ಕಾರದ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು 2021ರಿಂದ 2036ರವರೆಗಿನ ಹೆಣ್ಣುಮಕ್ಕಳ ಜನಸಂಖ್ಯೆಯನ್ನು ಇತ್ತೀಚೆಗೆ ಅಂದಾಜಿಸಿದೆ. ಅದರ ಪ್ರಕಾರ, ದೇಶದಲ್ಲಿ 6ರಿಂದ 18ರ ವಯೋಮಾನದ ಹೆಣ್ಣುಮಕ್ಕಳ ಜನಸಂಖ್ಯೆಯು 2021ಕ್ಕೆ ಹೋಲಿಸಿದರೆ 2036ರ ಹೊತ್ತಿಗೆ ಗಣನೀಯವಾಗಿ ಕಡಿಮೆಯಾಗಲಿದೆ.

ಬದಲಾಗುತ್ತಿರುವ ಇಂತಹ ಸನ್ನಿವೇಶದಲ್ಲಿ ಸೂಕ್ತ ಶೈಕ್ಷಣಿಕ ಬೆಂಬಲ ವ್ಯವಸ್ಥೆಯನ್ನು ಒದಗಿಸಲು ಹಾಗೂ ವಿವಿಧ ವಯೋಮಾನದ ಬಾಲಕಿಯರ ಅಗತ್ಯಗಳನ್ನು ಪೂರೈಸಲು ಬೇಕಾದ ಉಪಕ್ರಮಗಳ ಬಗ್ಗೆ ನೀತಿ ನಿರೂಪಕರು ಗಂಭೀರವಾಗಿ ಯೋಚಿಸಬೇಕಿದೆ. ಲಿಂಗಾನುಪಾತದಲ್ಲಿ ಆಗುತ್ತಿರುವ ಕುಸಿತವನ್ನು ತಡೆಯಲು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಬೇಕಾದ ಜರೂರನ್ನು ಸಹ ಇದು ಸೂಚಿಸುತ್ತದೆ.

ಪ್ರಾಥಮಿಕ ಹಂತದಲ್ಲಿ ದಾಖಲಾದ ಮಕ್ಕಳನ್ನು ಉಳಿಸಿಕೊಂಡು, ಮುಂದಿನ ಹಂತಗಳಾದ ಹಿರಿಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಪ್ರೌಢ ಹಂತಕ್ಕೆ ಅವರು ಕಡ್ಡಾಯವಾಗಿ ದಾಖಲಾಗುವುದನ್ನು ಖಾತರಿಪಡಿಸಬೇಕಿದೆ. ಬಾಲಕಿಯರು ತಮ್ಮ ಶಿಕ್ಷಣವನ್ನು ಮುಂದುವರಿಸಲು ಅನುವಾಗುವಂತೆ ಆರ್ಥಿಕ ಪ್ರೋತ್ಸಾಹ ಮತ್ತು ಉತ್ತೇಜಕಗಳನ್ನು ಸಕಾಲದಲ್ಲಿ ಒದಗಿಸುವುದು ಈ ಉದ್ದೇಶ ಸಾಧನೆಗೆ ಬಹಳ ಮುಖ್ಯವಾದುದು. ಎಲ್ಲಾ ಶಾಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮತ್ತು ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಕನಿಷ್ಠ ಮೂಲಸೌಕರ್ಯಗಳನ್ನು ಒದಗಿಸುವುದು ನಿರ್ಣಾಯಕವಾಗುತ್ತದೆ. ಇದನ್ನು ಸಾಕಾರಗೊಳಿಸಲು ಶಿಕ್ಷಣಕ್ಕೆ ಅನುದಾನ ಹಂಚಿಕೆಯನ್ನು ಹೆಚ್ಚಿಸಬೇಕಿದೆ.

ಒಟ್ಟಾರೆ, ಹಿಂದಿನ ಒಂದು ದಶಕದ ಬೆಳವಣಿಗೆಗಳು ಬಾಲಕಿಯರ ಶಿಕ್ಷಣದಲ್ಲಿ ನಾವು ಸಾಧಿಸಿದ ಪ್ರಗತಿ ಮತ್ತು ಅಷ್ಟೇ ಪ್ರಮಾಣದ ಸವಾಲುಗಳನ್ನು ಎತ್ತಿ ತೋರಿಸುತ್ತವೆ. ಸಾಮಾಜಿಕ- ಆರ್ಥಿಕ ಅಸಮಾನತೆಗಳನ್ನು ನಿಭಾಯಿಸಿ ಹೆಣ್ಣುಮಕ್ಕಳ ಶಿಕ್ಷಣಕ್ಕಿರುವ ಅಡೆತಡೆಗಳನ್ನು ನಿವಾರಿಸುವಾಗ, ಮುಖ್ಯವಾಹಿನಿಯ ಹೊರಗೆ ಉಳಿದ ಮಕ್ಕಳನ್ನು ವ್ಯವಸ್ಥೆಯ ಒಳಗೆ ತರುವುದರ ಜೊತೆಗೆ ವ್ಯವಸ್ಥೆಯ ಒಳಗಿರುವ ಮಕ್ಕಳನ್ನು ಶಾಲೆಗಳಲ್ಲೇ ಉಳಿಸಿಕೊಳ್ಳುವುದು ಮತ್ತು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸರಾಗವಾಗಿ ಮುಂದಡಿ ಇಡಲು ಅಗತ್ಯವಾದ ಉಪಕ್ರಮಗಳನ್ನು ಕೈಗೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಜೊತೆಗೆ, ಎಲ್ಲಾ ಬಾಲಕಿಯರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವುದು ಸಮಾನ ಅವಕಾಶದ ಗುರಿಯನ್ನು ಸಾಧಿಸುವ ದಿಸೆಯಲ್ಲಿ ನಿರ್ಣಾಯಕವಾಗಲಿದೆ.

ಚುರುಮುರಿ

ವಿದೇಶದಲ್ಲಿ ಶಾಂತಿಮಂತ್ರ

● ಸುಮಂಗಲಾ

ಬೆಕ್ಕಣ್ಣ ವಿಡಿಯೊ ನೋಡುತ್ತ 'ಭಲೆ, ಭಲೆ' ಎನ್ನುತ್ತ ಚಪ್ಪಾಳೆ ತಟ್ಟಿತು. 'ನೋಡು... ಮೋದಿಮಾಮ ಉಕ್ರೇನಿಗೆ ರೈಲು ಹತ್ತಿ ಹೋಗ್ಯಾನೆ'.

'ಭಾರತದಲ್ಲಿ ಐಷಾರಾಮಿ ರೈಲುಗಳನ್ನ ಬಿಟ್ಟರೆ ಉಳಿದ ರೈಲುಗಳ ಸ್ಥಿತಿಗತಿ ಕೇಳುವವರಿಲ್ಲ. ಪ್ರಧಾನಿ ಒಮ್ಮೆ ಕಾಲಿಟ್ಟಿದ್ದರಾದರೂ ಅವುಗಳ 'ಭಾಗ್ಯ'ದ ಬಾಗಿಲು ತೆರೆಯುತ್ತಿತ್ತೋ ಏನೊ. ಹೋಗಲಿ ಬಿಡು, ವಿದೇಶದಾಗಾದ್ರೂ ರೈಲು ಹತ್ಯಾರಲ್ಲ' ಎಂದು ಕಿಚಾಯಿಸಿದೆ.

'ನೀ ಏನರೆ ಕೊಂಕು ಹೇಳಬ್ಯಾಡ. ರೈಲಿನೊಳಗೆ ಉಕ್ರೇನಿಗೆ ಭೇಟಿ ಕೊಟ್ಟ ನಮ್ಮ ದೇಶದ ಫಸ್ಟ್ ಪಿಎಂ' ಎಂದು ಎದೆಯುಬ್ಬಿಸಿ ಹೇಳಿತು.

'ವಿಮಾನದಾಗೆ ಹೋದ್ರೆ ರಷ್ಯಾ ಕ್ಷಿಪಣಿಗಳು ಯಾವಾಗ ಕೆಳಗೆ ಉರುಳಿಸ್ತಾವೆ ಗೊತ್ತಿಲ್ಲ. ಅದಕ್ಕೇ ಉಕ್ರೇನಿಗೆ ಹೋಗೋರೆಲ್ಲ ಬುಲೆಟ್ ಪ್ರೂಫ್ ರೈಲಲ್ಲೇ ಹೋಗ್ತಾರಲೇ. ನಮ್ಮ ಪಿಎಂ ಅಷ್ಟೇ ಅಲ್ಲ, ಅಮೆರಿಕದ ಪ್ರೆಸಿಡೆಂಟ್ ಬೈಡನ್ ಕೂಡ ಅದೇ ರೈಲಿನಾಗೆ ಹೋಗ್ಯಾನೆ' ಎಂದೆ.

'ಆದರೆ ಮೋದಿಮಾಮ ಅಲ್ಲಿ ಶಾಂತಿಮಂತ್ರ ಜಪಿಸಿ, ಗಾಂಧಿಯನ್ನ ನೆನಪು ಮಾಡ್ಯಾನೆ. ಬೈಡನ್ ಎಲ್ಲಿ ಅದನ್ನೆಲ್ಲ ಮಾಡ್ಯಾನೆ? ಕಳೆದ ತಿಂಗಳು ರಷ್ಯಾಕ್ಕೆ ಹೋದಾಗ, ಅಲ್ಲೂ ಪುಟಿನ್ ಕಿವಿ ಹಿಂಡಿ, ಹಿಂಗೆಲ್ಲ ಜಗಳ ಆಡಬೇಡ್ರಪಾ ಅಂದಾನೆ. ಮೊನ್ನೆ ಝೆಲೆನ್‌ಸ್ಕಿಗೂ ಅದ್ನೇ ಹೇಳ್ಯಾನೆ. ಅವರಿಬ್ಬರೂ ಮೋದಿಮಾಮನ ಮಾತು ಕೇಳಿ, ಶಸ್ತ್ರಾಸ್ತ್ರ ಕೆಳಗಿಡತಾರೆ' ಬೆಕ್ಕಣ್ಣ ಯಾವುದೋ ಕನಸಿನಲ್ಲಿ ವಿಹರಿಸುತ್ತಿದ್ದಂತೆ ಹೇಳಿತು.

'ಅವೆಲ್ಲ ರಾಜಕೀಯದ ಶಿಷ್ಟಾಚಾರ. ಇವರು ಹೇಳತಾರೆ, ಅವರೂ ತಲೆಯಾಡಿಸುತ್ತಾರೆ. ಅಷ್ಟೇ... ಆಮೇಲೆ ಮನಸ್ಸಿಗೆ ಬಂದಂತೆ ಮಾಡತಾರೆ' ಎಂದೆ.

'ನಮ್ಮ ಗೋದಿ ಮೀಡಿಯಾ ಮಾತ್ರವಲ್ಲ, ಗ್ಲೋಬಲ್ ಮೀಡಿಯಾದವ್ರೂ ಇಂಡಿಯಾ ಪಿಎಂ ಉಕ್ರೇನ್ ವಿಸಿಟ್ ಹಿಸ್ಟಾರಿಕಲ್ ಅಂತ ಹಾಡಿ ಹೊಗಳ್ಯಾರೆ. ಇಂಗ್ಲಿಷ್ ಪೇಪರ್ ಓದು' ಎಂದು ನನ್ನ ಮೂತಿಗೆ ತಿವಿಯಿತು.

'ಇಂಡಿಯಾ ಪಿಎಂ ಅನ್ನಬ್ಯಾಡ... I.N.D.I.A. ಮೈತ್ರಿಕೂಟ ಅಂದುಕೋತಾರೆ!'

'ಹೌದು, ಭಾರತದ ಪಿಎಂ ಅಂತನೇ ಬರೀಬೇಕಂತ ಗ್ಲೋಬಲ್ ಪತ್ರಿಕೆಗಳಿಗೂ ಕರಾರು ಹಾಕಬೇಕು' ಬೆಕ್ಕಣ್ಣ ಗುರುಗುಟ್ಟಿತು.

'ಅಂದಹಾಗೆ ಪಿಎಂ ಮಣಿಪುರ ವಿಸಿಟ್ ಯಾವಾಗಂತೆ?' ಕೇಳಿದೆ.

ಬೆಕ್ಕಣ್ಣ ಉಸಿರೆತ್ತಲಿಲ್ಲ!

ದಿನದ ಟ್ವೀಟ್

ನವ-ಜಾತಿವಾದಿ ನಾಯಕರು!

ನವ-ಜಾತಿವಾದಿ ನಾಯಕರ ಬಗ್ಗೆ ಎಚ್ಚರ ವಹಿಸಿ! ಪ್ರತಿ ಸಂಭಾಷಣೆಯಲ್ಲೂ ಅವರು ಜಾತಿಯನ್ನು ಎಳೆದು ತರುತ್ತಾರೆ. ಎಲ್ಲೆಡೆಯೂ ಅವರು ಜಾತಿಯನ್ನು ಹುಡುಕುತ್ತಾರೆ... ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಸಹ. ನಾಳೆ ಅವರು ಕ್ರಿಕೆಟ್ ತಂಡದಲ್ಲೂ ಜಾತಿ ಮೀಸಲಾತಿಗೆ ಬೇಡಿಕೆ ಇಡುತ್ತಾರೆ!

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಉದ್ಯಮಿಗಳಿಗೆ ತಪ್ಪು ಸಂದೇಶ ಹೋಗಬಾರದು ಎಂಬ ಕಾರಣಕ್ಕೆ ಜಿಂದಾಲ್‌ಗೆ ಭೂಮಿ ಮಾರಾಟ ಮಾಡುತ್ತಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಮತ್ತು ಎಂ.ಬಿ.ಪಾಟೀಲ ಹೇಳುತ್ತಿದ್ದಾರೆ. ಇಬ್ಬರೂ ವಿವೇಕ ಇಲ್ಲದವರು, ಆಡಳಿತ ಪ್ರಜ್ಞೆ ಇಲ್ಲದವರು, ಹಸಿವು ಗೊತ್ತಿಲ್ಲದವರು. ಈ ದೇಶದಲ್ಲಿ ಶೇ 63ರಷ್ಟು ಜನರಿಗೆ ಉದ್ಯೋಗ ಕೊಡುತ್ತಿರುವುದು ಕೃಷಿ ಕ್ಷೇತ್ರ.

ಬಡಗಲಪುರ ನಾಗೇಂದ್ರ, ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

25 ವರ್ಷಗಳ ಹಿಂದೆ

ಗುರುವಾರ, 26-8-1999

● **ಕಾರ್ಗಿಲ್ ವಿವಾದ ಬಳಕೆಗೆ ಇಷ್ಟವಿಲ್ಲ: ಪ್ರಧಾನಿ ಸ್ಪಷ್ಟನೆ**

ನೀಮಕ್, ಆ. 25 (ಪಿಟಿಐ)– ಕಾರ್ಗಿಲ್ ವಿಜಯವನ್ನು ಚುನಾವಣಾ ವಿಷಯವನ್ನಾಗಿ ಮಾಡುವುದು ತಮಗೆ ಇಷ್ಟವಿಲ್ಲ ಎಂದು ಪ್ರಧಾನಿ ವಾಜಪೇಯಿ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಮಧ್ಯಪ್ರದೇಶದಲ್ಲಿ ಬಿಜೆಪಿ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಕಾರ್ಗಿಲ್‌ನಲ್ಲಿನ ಜಯ ಬಿಜೆಪಿ ಜಯ ಅಲ್ಲ. ಅದೊಂದು ವೀರ ಸೈನಿಕರ ವಿಜಯೋತ್ಸವ' ಎಂದು ಬಣ್ಣಿಸಿದರು.

'ಪಾಕಿಸ್ತಾನದ ಜತೆಗೆ 1971ರಲ್ಲಿ ನಡೆದ ಯುದ್ಧದಲ್ಲಿ ಕಾಶ್ಮೀರದ ಕುರಿತು ದೇಶದ ನಿಲುವು ಒಪ್ಪಲು ಒತ್ತಾಯಿಸದೇ ವಿಸ್ತಾರವಾದ ಭೂಪ್ರದೇಶವನ್ನು ಕಳೆದುಕೊಂಡಿರುವುದನ್ನು ದೇಶಬಾಂಧವರು ಮರೆಯಬಾರದು' ಎಂದು ಪ್ರಧಾನಿ ನೆನಪಿಸಿದರು.

● **ಕಾಂಗ್ರೆಸ್‌ನಿಂದ ಸ್ಥಿರ ಸರ್ಕಾರ– ಸೋನಿಯಾ**

ಅಲ್ವಾರ್, ಆ. 25 (ಯುಎನ್ಐ)– 'ದೇಶಕ್ಕೆ ಸ್ಥಿರ ಸರ್ಕಾರ ನೀಡಲು ತಮ್ಮ ಪಕ್ಷ ಬದ್ಧವಾಗಿದೆ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇಂದು ಇಲ್ಲಿ ಪುನರುಚ್ಚರಿಸಿದರು.

ರಾಜಸ್ಥಾನದಲ್ಲಿ ಮೊದಲ ಬಾರಿಗೆ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರವು ಒಂದು 'ವೈಫಲ್ಯ' ಎಂದು ಸೋನಿಯಾ ಟೀಕಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 26-8-1974

● **ಉದ್ದ ಎಳೆ ಹತ್ತಿ: ಇನ್ನು ಮೂರು ವರ್ಷದಲ್ಲಿ ಪರಾವಲಂಬನೆ ಅಂತ್ಯ**

ಬೆಂಗಳೂರು, ಆ. 25– ಇನ್ನು ಮೂರು ವರ್ಷಗಳಲ್ಲಿ ಭಾರತ ಉದ್ದದೆಳೆಯ ಹತ್ತಿಗಾಗಿ ಪರರಾಷ್ಟ್ರಗಳನ್ನು ಅವಲಂಬಿಸುವುದು ತಪ್ಪಿ, ಸುಮಾರು ಒಂದು ನೂರು ಕೋಟಿ ರೂ.ಗಳಷ್ಟು ವಿದೇಶಿ ವಿನಿಮಯ ಉಳಿತಾಯ ಆಗುವ ಸಂಭವವಿದೆ.

ರೈತರಿಗೆ ಮಾತ್ರವಲ್ಲದೆ ದೇಶಕ್ಕೇ ವರದಾನವಾಗಿ ಪರಿಣಮಿಸಿರುವ ಕರ್ನಾಟಕದ ಹೆಮ್ಮೆಯ ಕೊಡುಗೆ ವರಲಕ್ಷ್ಮಿ ಹತ್ತಿಯ ಬೆಳೆ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ರೈತರನ್ನು ಆಕರ್ಷಿಸಿರುವುದರಿಂದ, ಉದ್ದದೆಳೆಯ ಹತ್ತಿಯಲ್ಲಿ ಸ್ವಾವಲಂಬನೆ ಸಾಧನೆಯ ಕಾಲ ದೂರವಿಲ್ಲ ಎಂದು ಸರ್ಕಾರಿ ಕೃಷಿ ಕ್ಷೇತ್ರಗಳ ಕಾರ್ಪೊರೇಷನ್ ಅಧ್ಯಕ್ಷ ಎಂ.ಆರ್. ಕೃಷ್ಣ ಅವರು ಇಂದು ವರದಿಗಾರರಿಗೆ ತಿಳಿಸಿದರು.

● **ಕಾಶ್ಮೀರಕ್ಕೆ ಮತ್ತೆ ವಿಶೇಷ ಸ್ಥಾನಮಾನ ಸರ್ಕಾರ ರಚನೆಗೆ ಷೇಖ್ ಷರತ್ತು**

ಶ್ರೀನಗರ, ಆ. 25– ಕಾಶ್ಮೀರಕ್ಕೆ 1953ಕ್ಕೆ ಮುನ್ನ ಇದ್ದ ವಿಶೇಷ ಸ್ಥಾನಮಾನವನ್ನು ಮತ್ತೆ ನೀಡಲು ದೆಹಲಿ ಸರ್ಕಾರ ಅಂಗೀಕರಿಸಿದರೆ, ತಾವು ಆ ರಾಜ್ಯದಲ್ಲಿ ಹಂಗಾಮಿ ಸರ್ಕಾರವೊಂದನ್ನು ರಚಿಸಲು ಸಿದ್ಧ ಎಂದು ಷೇಖ್ ಅಬ್ದುಲ್ಲಾ ಸೂಚಿಸಿದ್ದಾರೆ.

ಈ ಹೊಸ ರಾಜ್ಯದಲ್ಲಿ ಬೇರೊಂದು ಶಾಸನ ಸಭೆಯನ್ನು ಅಸ್ತಿತ್ವಕ್ಕೆ ತರಲು ನ್ಯಾಯಸಮ್ಮತವಾದ, ಮುಕ್ತ ಚುನಾವಣೆ ನಡೆಸುವುದೇ ತಮ್ಮ ಹೊಸ ಸರ್ಕಾರದ ಪ್ರಪ್ರಥಮ ಕರ್ತವ್ಯವಾಗಿರುತ್ತದೆಂದೂ ಅವರು ತಿಳಿಸಿದ್ದಾರೆ.

ಸಂಗತ

ಕಲಬೆರಕೆ ಆಹಾರ: ನಷ್ಟ ಅಪಾರ

ಆಹಾರ ಉತ್ಪನ್ನಗಳ ಕಲಬೆರಕೆಯ ವಿರುದ್ಧ ಜನಜಾಗೃತಿ ಮೂಡುವುದರ ಜೊತೆಗೆ ಸಂಘಟಿತ ಹೋರಾಟ ನಡೆಯಬೇಕಿದೆ

● ಮಲ್ಲಿಕಾರ್ಜುನ ಹೆಗ್ಗಳಗಿ

ರಾಸಾಯನಿಕಮುಕ್ತ, ಗುಣಮಟ್ಟದ ಸಾವಯವ ಬೆಲ್ಲ ಖರೀದಿಸುವ ಉದ್ದೇಶದಿಂದ ರಷ್ಯಾದ ವ್ಯಾಪಾರಿ ಸಂಸ್ಥೆಯ ಪ್ರತಿನಿಧಿಯೊಬ್ಬರು ಕೆಲವು ದಿನಗಳ ಹಿಂದೆ ಬಾಗಲಕೋಟೆಗೆ ಬಂದಿದ್ದರು. ಈ ಭಾಗದಲ್ಲಿ ಸಾವಯವ ಬೆಲ್ಲ ಉತ್ಪಾದಿಸುವ ಘಟಕಗಳ ಮಾಹಿತಿಯನ್ನು ಅವರು ಸಂಗ್ರಹಿಸಿದ್ದರು. ನನ್ನಿಂದಲೂ ಕೆಲವು ವಿಳಾಸಗಳನ್ನು ಪಡೆದುಕೊಂಡಿದ್ದರು. ಬೆಲ್ಲ ಉತ್ಪಾದನಾ ಘಟಕಗಳ ಮಾಲೀಕರು ಬೆಲ್ಲಕ್ಕೆ ಹೆಚ್ಚು ಬೆಲೆ ನಿಗದಿ ಮಾಡಿ, ಉತ್ತಮ ಸಾವಯವ ಬೆಲ್ಲ ಉತ್ಪಾದಿಸಿ ಪೂರೈಸುವ ಭರವಸೆಯನ್ನು ಅವರಿಗೆ ನೀಡಿದ್ದರು. ಬೆಲ್ಲಕ್ಕೆ ಒಳ್ಳೆಯ ಮಾರುಕಟ್ಟೆ ದೊರೆಯಿತು, ರೈತರ ಕಬ್ಬಿಗೆ ಹೆಚ್ಚು ಬೆಲೆ ದೊರಕುತ್ತದೆ ಎಂದು ಎಲ್ಲರೂ ಉತ್ಸಾಹದಲ್ಲಿದ್ದೆವು.

ಒಂದು ಮುಂಜಾನೆ ನಮ್ಮ ಮನೆಗೆ ಬಂದ ರಷ್ಯಾದ ಆ ಪ್ರತಿನಿಧಿ, ತಾನು ಮರಳಿ ರಷ್ಯಾಕ್ಕೆ ಹೋಗುತ್ತಿರುವುದಾಗಿಯೂ ಬೆಲ್ಲ ಖರೀದಿಯನ್ನು ನಿಲ್ಲಿಸಿರುವುದಾಗಿಯೂ ಹೇಳಿದರು. ವಿಚಾರಿಸಿದಾಗ, ಪ್ರಥಮ ಬಾರಿಗೆ ಕಳಿಸಿದ ಬೆಲ್ಲ ಗುಣಮಟ್ಟದ್ದಾಗಿದ್ದು, ಸ್ವೀಕೃತವಾಯಿತು. ಮುಂದಿನ ಎರಡು ಹಂತಗಳಲ್ಲಿ ಕಳಿಸಿದ ಬೆಲ್ಲದಲ್ಲಿ ಬಹಳ ರಾಸಾಯನಿಕಗಳನ್ನು ಬಳಸಿದ್ದುದು ದೃಢಪಟ್ಟಿದ್ದರಿಂದ ಅದು ತಿರಸ್ಕೃತಗೊಂಡಿತು. ಹೀಗಾಗಿ, ಈ ಭಾಗದ ಬೆಲ್ಲ ಖರೀದಿ ನಿಲ್ಲಿಸಲು ತಮ್ಮ ಸಂಸ್ಥೆ ನಿರ್ಧರಿಸಿದೆ ಎಂದು ಅವರು ಕಳವಳದಿಂದ ಹೇಳಿದರು. ಕೃಷಿ ಮತ್ತು ಆರ್ಥಿಕ ಅಭಿವೃದ್ಧಿಯ ಒಂದು ಉತ್ತಮ ಅವಕಾಶವನ್ನು ಕಳೆದುಕೊಂಡದ್ದಕ್ಕೆ ಮನಸ್ಸು ಹಳಹಳಿಸಿತು.

ಆಹಾರ ಪದಾರ್ಥಗಳಲ್ಲಿ ರಾಸಾಯನಿಕಗಳು ಹಾಗೂ ಇತರ ಹಾನಿಕಾರಕ ವಸ್ತುಗಳನ್ನು ಸೇರಿಸುತ್ತಿರುವುದು ಬಹುದೊಡ್ಡ ಅಪಾಯಕಾರಿ ಬೆಳವಣಿಗೆಯಾಗಿದೆ. ಕಲಬೆರಕೆ ಆಹಾರ ಪದಾರ್ಥಗಳನ್ನು ಆಕರ್ಷಕವಾಗಿ ಪ್ಯಾಕ್ ಮಾಡಿ, ಬಾಟಲಿಗಳಲ್ಲಿ ಸಂಗ್ರಹಿಸಿ, ಸುಂದರವಾದ ಲೇಬಲ್ ಅಂಟಿಸಿ, 'ಗುಣಮಟ್ಟದ ಆಹಾರ' ಎಂದು ಬರೆದು ಮಾರಾಟ ಮಾಡುವ ಹೊಸ ಕೈಗಾರಿಕೆಗಳು ಅಸ್ತಿತ್ವಕ್ಕೆ ಬರತೊಡಗಿವೆ. ಇಂಥ ವಸ್ತುಗಳನ್ನು ಮಾರಾಟ ಮಾಡುವ ಮಳಿಗೆಗಳು ಗಲ್ಲಿ ಗಲ್ಲಿಗಳಲ್ಲಿ ಹುಟ್ಟಿಕೊಂಡಿವೆ. ಸಾವಯವ ಉತ್ಪನ್ನಗಳು, ಶುದ್ಧ ಖಾದ್ಯ ತೈಲಗಳನ್ನು 'ಸಾವಯವ ಕೃಷಿ ಪದ್ಧತಿಯಲ್ಲಿ ಉತ್ಪಾದಿಸಿದವು' ಎಂದು ಪ್ರಚಾರ ಮಾಡಲಾಗುತ್ತದೆ. ಹಣ ಮಾಡುವ ದಾಹದಿಂದ ಕೆಲವರು ಇಂತಹ ಆಹಾರ ಪದಾರ್ಥಗಳನ್ನು ಸಾವಯವದ ಹೆಸರಿನಲ್ಲಿ ಮಾರಾಟ ಮಾಡುತ್ತಿರುವುದು ನೋವಿನ ಸಂಗತಿಯಾಗಿದೆ.

ಇತ್ತೀಚೆಗೆ ನಾನು ಉತ್ತರಪ್ರದೇಶದ ಕಾನ್ಪುರದ ರಾಷ್ಟ್ರೀಯ ಸಕ್ಕರೆ ಸಂಶೋಧನಾ ಸಂಸ್ಥೆಗೆ ಹೋಗಿದ್ದೆ. ಅಲ್ಲಿ ಜೇನುತುಪ್ಪ ಸಂಶೋಧನೆಯ ವಿಭಾಗವೂ ಇದೆ. ಕೃತಕವಾಗಿ ಜೇನುತುಪ್ಪವನ್ನೇ ಶುದ್ಧ ಎಂದು ಬಿಂಬಿಸಿ ಮಾರಾಟ ಮಾಡುವ ಉದ್ದಿಮೆಗಳ ದೊಡ್ಡ ಪಟ್ಟಿ ಅಲ್ಲಿಯ ಕಡತಗಳಲ್ಲಿ ಇತ್ತು. ಈ ಉದ್ದಿಮೆಗಳು ಜೇನುತುಪ್ಪ ಉತ್ಪಾದನೆಗೆ ಉಪಯೋಗಿಸುವ ಭೂಮಿಯ ಕ್ಷೇತ್ರದ ವಿವರ, ಜೇನುಹುಳುಗಳ ತಳಿಯ ವಿವರ, ಈ ಹುಳುಗಳು ಆಹಾರಕ್ಕಾಗಿ ಸಂಪರ್ಕಿಸುವ ಹೂವುಗಳ ವಿವರ ಕೇಳಿ, ಜೇನುತುಪ್ಪ ಉತ್ಪಾದಕರಿಗೆ ಸಂಸ್ಥೆ ಹಲವು ಬಾರಿ ಪತ್ರಗಳನ್ನು ಬರೆದು ವಿಚಾರಿಸಿದೆ. ಯಾವ ಉದ್ದಿಮೆಯೂ ಈ ಪತ್ರಗಳಿಗೆ ಉತ್ತರ ಕೊಟ್ಟಿಲ್ಲ. ಇನ್ನೂ ಅಚ್ಚರಿಯ ಸಂಗತಿ ಎಂದರೆ, ಈ ಸಂಸ್ಥೆಗಳಲ್ಲಿ ದಿನಕ್ಕೆ ಸರಾಸರಿ 3 ಸಾವಿರದಿಂದ 4 ಸಾವಿರ ಟನ್ ಜೇನುತುಪ್ಪ ಉತ್ಪಾದಿಸುವ ಘಟಕಗಳಿವೆ. ಜೇನುತುಪ್ಪವನ್ನು ಸಕ್ಕರೆ ಪಾಕದೊಂದಿಗೆ ಕಲಬೆರಕೆ ಮಾಡಲಾಗುತ್ತದೆ. ಅದನ್ನು ಸುಲಭವಾಗಿ ಕಂಡುಹಿಡಿಯಲು ಸಾಧ್ಯವಾಗದಂತೆ ಸಕ್ಕರೆ ಪಾಕವನ್ನು ತಯಾರಿಸಲಾಗುತ್ತದೆ. ಅವುಗಳಿಗೆ ಹಾನಿಕಾರಕ ರಾಸಾಯನಿಕಗಳನ್ನು ಸೇರಿಸುತ್ತಾರೆ. ಇಂಥ ಜೇನುತುಪ್ಪ ಆರೋಗ್ಯಕ್ಕೆ ಬಹಳ ಹಾನಿಕರ. ಕೋವಿಡ್–19 ಸಂಕಷ್ಟದ ದಿನಗಳಲ್ಲಿ ನಕಲಿ ಜೇನುತುಪ್ಪದ ಉತ್ಪಾದನೆ ಹೆಚ್ಚಾಗಿತ್ತು. ಕೋವಿಡ್ ಸಂಕಟದ ಸಂದರ್ಭವನ್ನು ನಕಲಿ ಜೇನುತುಪ್ಪ ತಯಾರಿಸುವವರು ತಮ್ಮ ಲಾಭಕ್ಕೆ ಬಳಸಿಕೊಂಡದ್ದು ಒಂದು ಕ್ರೂರ ವ್ಯಂಗ್ಯ ಎನಿಸುತ್ತದೆ.

ಗುಣಮಟ್ಟದ ಆಹಾರ ಸೇವಿಸಬೇಕು, ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಎಲ್ಲರೂ ಬಯಸುತ್ತಾರೆ. ನೋವಿನ ಸಂಗತಿ ಎಂದರೆ, ಖಾದ್ಯ ತೈಲಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು, ವಿವಿಧ ಧಾನ್ಯಗಳು ಮತ್ತು ಧಾನ್ಯಗಳ ಹಿಟ್ಟು, ಚಹಾ, ಕಾಫಿ, ಮಿಠಾಯಿ, ಮದ್ಯ, ಪಾನೀಯಗಳಲ್ಲಿ ಕಲಬೆರಕೆ ಮಾಡಿ ಧಾರಾಳವಾಗಿ ಮಾರಾಟ ಮಾಡಲಾಗುತ್ತಿದೆ.

ಬೆಳಗಾವಿಯ ಕುಂದಾ ತುಂಬಾ ಪ್ರಸಿದ್ಧ. ಬೆಳಗಾವಿಯನ್ನು ಕುಂದಾನಗರ ಎಂದೇ ಕರೆಯುತ್ತಾರೆ. ಇಲ್ಲಿಗೆ ಬಂದವರೆಲ್ಲ ಕುಂದಾ ಖರೀದಿಸದೆ ಮರಳುವುದಿಲ್ಲ. ಕುಂದಾದಲ್ಲಿಯೂ ಕೆಲವೆಡೆ ಕಲಬೆರಕೆ ನಡೆಯುತ್ತಿದೆ ಎಂಬ ಕೂಗು ಕೇಳಿಬರುತ್ತಿದೆ. ಗೋಕಾಕ್ ನಗರದ ಕರದಂಟಿನ ಕಥೆಯೂ ಇದೇ ಆಗಿದೆ. ಹಣ್ಣು, ತರಕಾರಿ ಬೇಗನೇ ಮಾಗುವಂತೆ ಮಾಡಲು ಮತ್ತು ಅವುಗಳ ಮೈಬಣ್ಣ ಆಕರ್ಷಕವಾಗಿ ಕಾಣುವಂತೆ ಪರಿವರ್ತಿಸಲು ರಾಸಾಯನಿಕಗಳನ್ನು ಬಳಸಲಾಗುತ್ತದೆ.

ಕಲಬೆರಕೆ ನಿಯಂತ್ರಣ ಕಾನೂನು ಜಾರಿಗೆ ಬಂದು ನೂರು ವರ್ಷಗಳು ಕಳೆದಿವೆ. ಕಲಬೆರಕೆಯ ನಿಯಂತ್ರಣ ಕಾನೂನು ಮೊದಲು 1923ರಲ್ಲಿ ಬ್ರಿಟಿಷ್ ಆಡಳಿತದಲ್ಲಿ ಜಾರಿಯಾಯಿತು. 1954ರಲ್ಲಿ ಭಾರತ ಸರ್ಕಾರವು ಕಾನೂನು ರಚಿಸಿತು. ಕಟ್ಟುನಿಟ್ಟಿನ ಕ್ರಮಗಳಿಲ್ಲದ್ದರಿಂದ ಕಲಬೆರಕೆ ಅತಿಯಾಗಿ ನಡೆಯುತ್ತಿದೆ. ಇದು ಹೊಟ್ಟೆ, ಹೃದಯ, ಕಿಡ್ನಿ ರೋಗಗಳಿಗೆ ಕಾರಣವಾಗಿದೆ.

ಕಲಬೆರಕೆಯ ವಿರುದ್ಧ ಸಂಘಟಿತ ಹೋರಾಟಗಳು ನಡೆಯುತ್ತಿಲ್ಲ. ಪ್ರಶ್ನಿಸುವ ಮನೋಭಾವ ಕ್ಷೀಣವಾಗುತ್ತಿದೆ. ಜನರು ಎಚ್ಚೆತ್ತುಕೊಂಡು ನಕಲಿ ಆಹಾರ ವಸ್ತುಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಬೇಕು ಮತ್ತು ಸಂಘಟಿತರಾಗಿ ಹೋರಾಟ ನಡೆಸಬೇಕು.

ವಾಚಕರ ವಾಣಿ

ಕೆಸರೆರಚಾಟಕ್ಕೆ ಅಂತ್ಯವಿದೆಯೇ?

ಪ್ರಜೆಗಳಾದ ನಮಗೆ ಯಾರು ಹಿತವರು ಈ ಮೂವರೊಳಗೆ- ಬಿಜೆಪಿಯೋ ಕಾಂಗ್ರೆಸ್ ಪಕ್ಷವೋ ಅಥವಾ ಜೆಡಿಎಸ್ ಪಕ್ಷವೋ ಎಂದು ಯಾರಾದರೂ ಕೇಳಿದ್ದೇ ಆದರೆ, ಯಾರೂ ಅಲ್ಲ ಎನ್ನುವ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇತ್ತೀಚೆಗೆ ಪತ್ರಿಕೆಗಳಲ್ಲಿ, ಸುದ್ದಿವಾಹಿನಿಗಳಲ್ಲಿ ಪ್ರಕಟವಾಗುತ್ತಿರುವ ಹಗರಣಗಳನ್ನು ಗಮನಿಸಿದರೆ, ಯಾವ ಒಂದು ಪಕ್ಷವೂ ಸಮಾಜಕ್ಕೋಸ್ಕರ, ಜನಸಾಮಾನ್ಯರಿಗೋಸ್ಕರ ಕೆಲಸ ಮಾಡುತ್ತಿರುವಂತೆ ಕಾಣಿಸುತ್ತಿಲ್ಲ. ಇತ್ತ ಸಾಮಾನ್ಯ ಜನರಿಗೂ ನಾವು ಯಾರನ್ನು ಆರಿಸಿ ವಿಧಾನಸಭೆಗೆ ಕಳುಹಿಸಬೇಕೆಂದು ತಿಳಿಯದಂತಾಗುತ್ತಿದೆ.

ಈ ಮೂರೂ ಪಕ್ಷಗಳ ಪ್ರತಿನಿಧಿಗಳು ಸ್ಪರ್ಧೆಗೆ ಬಿದ್ದವರಂತೆ ಹಗರಣಗಳಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಮತ್ತು ಒಬ್ಬರನ್ನೊಬ್ಬರು ಹೀಯಾಳಿಸುವ ಭರದಲ್ಲಿ ಉಪಯೋಗಿಸುತ್ತಿರುವ ಭಾಷೆಯು ಅಸಹ್ಯದ ಹಂತ ಮುಟ್ಟಿದೆ. ಇವರ ಈ ಕೆಸರೆರಚಾಟಕ್ಕೆ ಅಂತ್ಯ ಎಂಬುದಿದೆಯೇ ಎನ್ನುವುದೇ ಯಕ್ಷಪ್ರಶ್ನೆಯಂತಾಗಿದೆ. ಜನಪ್ರತಿನಿಧಿಗಳು ತಮ್ಮ ಅವಧಿಯ ಐದೂ ವರ್ಷ ತಮ್ಮ ಪಕ್ಷ ಹಾಗೂ ಕುರ್ಚಿಯ ಬಗ್ಗೆಯೇ ಯೋಚಿಸುವುದಾದರೆ ಸಾಮಾನ್ಯ ಪ್ರಜೆಗಳ ಪಾಡೇನು?

ಶಿವರಾಮಕೃಷ್ಣ, ಮೈಸೂರು

ನಮ್ಮ ಆನೆಯು ಜೇನಿಗೆ ಹೆದರದು!

'ಆನೆ ಓಡಿಸಲು ಜೇನು ಸಾಕು' ಎಂಬ ನಾಗೇಶ ಹೆಗಡೆ ಅವರ ಸಲಹೆ (ವಾ.ವಾ., ಆ. 15) ಓದಿದೆ. ಆದರೆ ಆ ತಂತ್ರವನ್ನು ನಮ್ಮೂರಿನಲ್ಲಿ ಅಳವಡಿಸಿದರೆ, ನಮಗೆ ತೋಟದ ಬೆಳೆಯೂ ಇಲ್ಲ, ಜೇನುಪೆಟ್ಟಿಗೆಯೂ ಇಲ್ಲ ಎಂಬಂತೆ ಆಗುತ್ತದೆ. ಏಕೆಂದರೆ ನಮ್ಮೂರಿನ ಆನೆಯು ಜೇನಿಗೆ ಹೆದರುವುದಿಲ್ಲ. ನನ್ನ ತೋಟದಲ್ಲಿ 20ಕ್ಕಿಂತಲೂ ಅಧಿಕ ಜೇನುಪೆಟ್ಟಿಗೆಗಳಿವೆ. ಆನೆ ಬರುವ ದಾರಿಯಲ್ಲೂ ಪೆಟ್ಟಿಗೆ ಇಟ್ಟಿದ್ದೇವೆ. ಆನೆಯು ಆ ಪೆಟ್ಟಿಗೆಯನ್ನು ಬೀಳಿಸಿ ತೋಟಕ್ಕೆ ನುಗ್ಗುತ್ತದೆ. ತೋಟದ ಒಳಗೆ ಇರುವ ಪೆಟ್ಟಿಗೆಯನ್ನೂ ಬೀಳಿಸಿ ಹೋಗುತ್ತದೆ. ಇದರಿಂದ ನಾವು ಜೇನನ್ನು ಕಳೆದುಕೊಂಡಿದ್ದೇವೆಯೇ ವಿನಾ ಆನೆಗೆ ಏನೂ ಆಗಿಲ್ಲ.

ಅಷ್ಟಕ್ಕೂ ಆನೆ ಬರುವುದು ಹಗಲು ಹೊತ್ತಿನಲ್ಲಿ ಅಲ್ಲ. ಹಗಲಿನಲ್ಲಿ ಚಟುವಟಿಕೆಯಿಂದಿರುವ ಜೇನುಹುಳುಗಳು ರಾತ್ರಿ ವೇಳೆ ಪೆಟ್ಟಿಗೆಯಲ್ಲಿ ಸುಮ್ಮನೆ ಕೂತಿರುತ್ತವೆ. ಆನೆಯು ಪೆಟ್ಟಿಗೆಯನ್ನು ಬೀಳಿಸುವಾಗ ಅವು ಪೆಟ್ಟಿಗೆಯಲ್ಲಿ ಹಾಗೆಯೇ ಕೂತಿರುತ್ತವೆ. ರಾತ್ರಿ ಅವಕ್ಕೆ ಸಿಡಿದು ಏಳಲು ಆಗುವುದಿಲ್ಲ. ಆನೆ ದಾಳಿಗೆ ಒಳಗಾದ ಈ ಹುಳುಗಳು ಬೆಳಿಗ್ಗೆ ಪೆಟ್ಟಿಗೆ ಬಿಟ್ಟು ಓಡುತ್ತವೆ. ಇದು ನನ್ನ ಅನುಭವದ ಮಾತು. ಆನೆಗೆ ಸೋಲಾರ್ ತಂತಿಬೇಲಿ ಅಲ್ಲದೆ ಬೇರೆ ಉಪಾಯವನ್ನು ಸದ್ಯದ ಪರಿಸ್ಥಿತಿಯಲ್ಲಿ ನಾನು ಕಾಣೆ. ನಾನಂತೂ ಜೇನುಪೆಟ್ಟಿಗೆ ಇಟ್ಟಿದ್ದರೂ ಈ ವರ್ಷ 90 ತೆಂಗಿನ ಗಿಡಗಳನ್ನು ಆನೆಯಿಂದಾಗಿ ಕಳೆದುಕೊಂಡಿದ್ದೇನೆ.

ಸಹನಾ ಕಾಂತಬೈಲು, ಬಾಲಂಬಿ, ಮಡಿಕೇರಿ

ಜಮೀನು ನೀಡಿಕೆ: ಹೇಳಿಕೆ ಅಗತ್ಯ

ಜಿಂದಾಲ್ ಕಂಪನಿಗೆ ಜಮೀನು ನೀಡಿಕೆಯ ಬಗೆಗೆ ರಾಜಕೀಯ ನಾಯಕರು, ಪಕ್ಷಗಳು ವಿವಿಧ ಘಟ್ಟಗಳಲ್ಲಿ ಹೇಗೆ ನಡೆದುಕೊಂಡರು ಮತ್ತು ನಡೆದುಕೊಂಡಿವೆ ಎಂಬುದನ್ನು ಪತ್ರಿಕೆಯು ವಿವರವಾಗಿ ಬಿಚ್ಚಿಟ್ಟಿದ್ದು (ಪ್ರ.ವಾ., ಆ. 23) ಉತ್ತಮ ಕೆಲಸ. ಎಂ.ವೈ.ಘೋರ್ಪಡೆ ಈಗಿನ ರಾಜಕಾರಣಿಗಳಿಗಿಂತ ಭಿನ್ನ. ಅದೇ ಪ್ರದೇಶದವರಾದರೂ ತಮ್ಮ 1983ರ ಲೇಖನವೊಂದರಲ್ಲಿ 'ವಿಜಯನಗರ ಉಕ್ಕು ಕಾರ್ಖಾನೆ ಹೆಸರಿನಲ್ಲಿ ಯಾವುದೇ ವ್ಯಕ್ತಿ ಅಥವಾ ಪಕ್ಷ ಪ್ರಯೋಜನ ಪಡೆಯಲು ಹವಣಿಸಬಾರದು. ಅದು ತುಂಬ ಅಲ್ಪದೃಷ್ಟಿ, ಆತ್ಮಪರಾಭವದ ಕ್ರಮವಾಗುತ್ತದೆ. ಒಂದು ಉಕ್ಕು ಕಾರ್ಖಾನೆ ಎಂದರೆ ಗಂಭೀರ ಸಮಾಚಾರ. ಅದನ್ನು ರಾಜಕೀಯ ಆಟದ ಗೊಂಬೆಯನ್ನಾಗಿ ಮಾಡಬಾರದು' ಎಂದಿದ್ದರು.

ಈಗ ಪ್ರಸ್ತಾವದ ಬಗೆಗೆ ಕ್ಯಾಬಿನೆಟ್‌ನಲ್ಲಿ ಆಕ್ಷೇಪ ಅಥವಾ ವಿರೋಧ ವ್ಯಕ್ತಪಡಿಸಿದವರು ಹೊರಗೆ ನಿರ್ಣಯವನ್ನು ಸಮರ್ಥಿಸಿಕೊಂಡರೆ ಅವರ ಬಗೆಗೆ ಅನುಮಾನಗಳೇಳುವುದು ಸಹಜ. ಜಮೀನು ನೀಡುವುದು ಅತ್ಯಗತ್ಯ, ಅನಿವಾರ್ಯ ಆಗಿತ್ತೇ ಎಂಬ ಅಂಶ ಒಂದಾದರೆ, ಸೂಚಿತ ದರಗಳು ಹಳೆಯವಲ್ಲವೆ ಎಂಬುದೂ ಚರ್ಚಾಸ್ಪದ ವಿಷಯವಾಗಿದೆ. ವಿವಿಧ ಪಕ್ಷಗಳ ನಾಯಕರು ಈ ಕುರಿತು ಹೇಳಿಕೆ ನೀಡುತ್ತಿರುವುದರಿಂದ, ಏಕೆ ಈ ತೀರ್ಮಾನ ಕೈಗೊಳ್ಳಲಾಯಿತು, ಯಾರದಾದರೂ ಒತ್ತಡ ಇತ್ತೇ ಎಂಬ ಬಗ್ಗೆ ಮುಖ್ಯಮಂತ್ರಿಯವರು ಸಂಪುಟದ ನಾಯಕರಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ವಿವರಣೆ ನೀಡಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪುಸ್ತಕ ಪ್ರಕಾಶನ: ಎಲ್ಲ ಮಗ್ಗುಲೂ ಚರ್ಚೆಯಾಗಲಿ

ಕನ್ನಡ ಪುಸ್ತಕ ಪ್ರಕಾಶನದ ಬಗ್ಗೆ, ಪ್ರಕಾಶಕರಲ್ಲಿ ಒಬ್ಬರಾದ ವೀರಕಪುತ್ರ ಶ್ರೀನಿವಾಸ ಅವರು ಬರೆದಿರುವ ಲೇಖನಕ್ಕೆ (ಚರ್ಚೆ, ಆ. 21) ಪ್ರತಿಕ್ರಿಯೆ. ಪುಸ್ತಕ ಪ್ರಕಾಶನ ಒಂದು ಉದ್ಯಮ. ಅದಕ್ಕೆ ಬಂಡವಾಳ, ಶ್ರಮ, ಕೌಶಲ ಎಲ್ಲವೂ ಅಗತ್ಯ. ಲೇಖಕ ಬರೆದ ಪುಸ್ತಕವನ್ನು ಓದುಗನಿಗೆ ತಲುಪಿಸುವುದು ಪ್ರಕಾಶಕರ ಕೆಲಸ. ನಡುವೆ ಮುದ್ರಕ, ಮಾರಾಟಗಾರ, ವಿನ್ಯಾಸಗಾರ ಬರುತ್ತಾರೆ. ಪುಸ್ತಕದ ವ್ಯವಹಾರದಲ್ಲಿ ಲೇಖಕ, ಪ್ರಕಾಶಕ, ಮುದ್ರಕ ಮತ್ತು ಓದುಗ ನಾಲ್ಕು ಸ್ತಂಭಗಳು. ಪ್ರಕಾಶಕ ಏನು ಮಹಾ ಮಾಡಬಹುದು ಎಂದು ಶ್ರೀನಿವಾಸ ಅವರು ಹೇಳಿರುವ ಮಾತಿಗೆ ಅರ್ಥವೇ ಇಲ್ಲ.

ಸಿನಿಮಾ ಪ್ರಚಾರ ಕಾರ್ಯದಲ್ಲಿ ನಟ– ನಟಿಯರು ಭಾಗವಹಿಸುವಂತೆ ಲೇಖಕ ಮಾರಾಟದಲ್ಲಿ ತೊಡಗಿಕೊಳ್ಳಬೇಕು ಎಂದು ಹೇಳಿದ್ದಾರೆ. ತಾನು ಬರೆದ ಪುಸ್ತಕ ಸಾವಿರಾರು ಜನರ ಕೈಸೇರಿ ಜನರ ಮೆಚ್ಚುಗೆ ಗಳಿಸಬೇಕು ಮತ್ತು ಚರ್ಚೆಗೆ ಒಳಗಾಗಬೇಕು ಎಂದು ಯಾವ ಲೇಖಕನಿಗೆ ತಾನೇ ಇಚ್ಛೆ ಇರುವುದಿಲ್ಲ? ಅದಕ್ಕೊಂದು ವೇದಿಕೆಯನ್ನು ಪ್ರಕಾಶಕ, ಮಾರಾಟಗಾರ ನಿರ್ಮಿಸಿಕೊಟ್ಟರೆ ಲೇಖಕನೂ ಆ ಜವಾಬ್ದಾರಿ ನಿರ್ವಹಿಸಿಯಾನು. ಲೇಖಕ ರಸ್ಕಿನ್ ಬಾಂಡ್, ಮಸೂರಿಯ ಪುಸ್ತಕದ ಅಂಗಡಿಯಲ್ಲಿ ವಾರದಲ್ಲಿ ಒಂದು ದಿನ ಕುಳಿತು, ಗ್ರಾಹಕರು ಕೊಂಡ ಅವರ ಪುಸ್ತಕಗಳಿಗೆ ಆಟೊಗ್ರಾಫ್ ಹಾಕಿಕೊಡುತ್ತಿದ್ದರು.

ಕನ್ನಡದಲ್ಲಿ ಪುಸ್ತಕ ಪ್ರಕಾಶನ ಸಂಕೀರ್ಣವಾಗಿದೆ. ಪ್ರಮುಖ ಲೇಖಕರ ಪುಸ್ತಕಗಳು ಸಾವಿರದ ಸಂಖ್ಯೆಯಲ್ಲಿ ಖರ್ಚಾಗುತ್ತವೆ. ಕರಾಟೆ, ಜೂಡೊ, ಆಟ, ಓಟದಂತಹ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು ಇಪ್ಪತ್ತು ಆವೃತ್ತಿಗಳನ್ನು ಕಂಡಿರುವುದಿದೆ. ಎಷ್ಟೋ ಲೇಖಕರ ಪುಸ್ತಕಗಳಿಗೆ ಪ್ರಕಟಣೆಯ ಭಾಗ್ಯವೇ ಇರುವುದಿಲ್ಲ. ಅನೇಕ ಲೇಖಕರ ಪ್ರಕಟಿತ ಪುಸ್ತಕಗಳು ಕಪಾಟಿನಲ್ಲಿ ಇವೆ. ಸಂಶೋಧನಾ ಕೃತಿಯನ್ನು, ಪ್ರವಾಸ ಕಥನವನ್ನು ಕಾದಂಬರಿ ಎಂದು ಮುದ್ರಿಸಿದ ನಿದರ್ಶನ ಇದೆ. ರಕ್ಷಾಪುಟ ಬದಲಾಯಿಸಿ ಪ್ರಕಟಿಸಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ, ಪ್ರಕಾಶನದ ಎಲ್ಲ ಮಗ್ಗುಲುಗಳ ಬಗ್ಗೆಯೂ ಚರ್ಚೆ ಆಗಬೇಕು.

ಕೆ.ವೆಂಕಟರಾಜು, ಚಾಮರಾಜನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆಹಾರ ಪದಾರ್ಥಗಳಲ್ಲಿವೆ ಅಪಾಯಕಾರಿ ಮೈಕ್ರೊಪ್ಲಾಸ್ಟಿಕ್ ಕಣಗಳು

ಸಕ್ಕರೆ, ಉಪ್ಪಿನಲ್ಲೂ ಪ್ಲಾಸ್ಟಿಕ್

ಜಗತ್ತಿನಲ್ಲಿ ಉತ್ಪಾದನೆಯಾಗುವ ಪ್ಲಾಸ್ಟಿಕ್ ಪೈಕಿ ಅಲ್ಪ ಭಾಗ ಮಾತ್ರ ಮರುಬಳಕೆಯಾಗುತ್ತದೆ. ಉಳಿದ ಪ್ಲಾಸ್ಟಿಕ್ ಅನ್ನು ಸುಡಲಾಗುತ್ತದೆ ಇಲ್ಲವೇ ಅವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತದೆ. ಹೀಗೆ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವು ಮೈಕ್ರೊಪ್ಲಾಸ್ಟಿಕ್ ಕಣಗಳಾಗಿ ಪರಿವರ್ತನೆಯಾಗುತ್ತದೆ. ಅವು ಸರ್ವವ್ಯಾಪಿಯಾಗಿ, ಆಹಾರ ಪದಾರ್ಥಗಳನ್ನೂ ಸೇರುತ್ತಿವೆ. ಜನ ದಿನನಿತ್ಯ ಬಳಸುವ ಉಪ್ಪು ಮತ್ತು ಸಕ್ಕರೆಯಲ್ಲಿಯೂ ಆತಂಕಕಾರಿ ಮಟ್ಟದಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳು ಇವೆ ಎಂಬ ಬಗ್ಗೆ 'ಟಾಕ್ಸಿಕ್ಸ್ ಲಿಂಕ್' ವರದಿ ಬೆಳಕು ಚೆಲ್ಲಿದೆ

ಪ್ರಜಾವಾಣಿ ವಾರ್ತೆ

ವರ್ಷದಿಂದ ವರ್ಷಕ್ಕೆ ಜಗತ್ತಿನಲ್ಲಿ ಪ್ಲಾಸ್ಟಿಕ್ ಉತ್ಪಾದನೆ ಹೆಚ್ಚುತ್ತಲೇ ಇದೆ. 1950ರಲ್ಲಿ ಜಾಗತಿಕ ಮಟ್ಟದಲ್ಲಿ 20 ಲಕ್ಷ ಟನ್ ಪ್ಲಾಸ್ಟಿಕ್ ಉತ್ಪಾದನೆ ಮಾಡಲಾಗುತ್ತಿತ್ತು. 2021ರ ಹೊತ್ತಿಗೆ ಅದು 39 ಕೋಟಿ ಟನ್‌ಗಳಿಗೆ ಹೆಚ್ಚಳವಾಗಿದೆ. ಪ್ಲಾಸ್ಟಿಕ್ ಬಳಕೆ ಹೆಚ್ಚಿದಂತೆಲ್ಲ ಪ್ಲಾಸ್ಟಿಕ್ ತ್ಯಾಜ್ಯವೂ ಜಾಸ್ತಿಯಾಗುತ್ತಿದೆ. ಕಳವಳಕಾರಿ ಸಂಗತಿ ಎಂದರೆ, ಪ್ಲಾಸ್ಟಿಕ್ ಈಗ ಅತಿ ಸೂಕ್ಷ್ಮ ಕಣಗಳ ರೂಪದಲ್ಲಿ (ಮೈಕ್ರೊಪ್ಲಾಸ್ಟಿಕ್) ನಾವು ಸೇವಿಸುವ ಆಹಾರ ವಸ್ತುಗಳಲ್ಲಿ ಬೆರೆತುಹೋಗಿದೆ. ಭಾರತದಲ್ಲಿ ಬಳಸಲಾಗುವ ಉಪ್ಪು ಮತ್ತು ಸಕ್ಕರೆಗಳಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಪತ್ತೆಯಾಗಿವೆ ಎಂದು ನವದೆಹಲಿಯ 'ದ ಜಸ್ಟ್ ಎನ್ವಿರಾನ್‌ಮೆಂಟ್ ಚಾರಿಟಬಲ್ ಟ್ರಸ್ಟ್'ನ 'ಟಾಕ್ಸಿಕ್ಸ್ ಲಿಂಕ್' ಸಂಸ್ಥೆ ನಡೆಸಿರುವ ಇತ್ತೀಚಿನ ಅಧ್ಯಯನ ಹೇಳಿದೆ.

ಪ್ಲಾಸ್ಟಿಕ್ ತ್ಯಾಜ್ಯವು ಮಣ್ಣಿನಲ್ಲಿ ಕರಗದೇ ರಾಸಾಯನಿಕ, ಜೈವಿಕ ಅಂಶಗಳಿಂದ ಸಣ್ಣ ಸಣ್ಣ ಕಣಗಳಾಗಿ ಬದಲಾಗುತ್ತದೆ. ಇದುವೇ ಮೈಕ್ರೊಪ್ಲಾಸ್ಟಿಕ್ ಅಥವಾ ನ್ಯಾನೊ ಪ್ಲಾಸ್ಟಿಕ್. ಅತಿಸೂಕ್ಷ್ಮ ಪ್ಲಾಸ್ಟಿಕ್ ಕಣಗಳನ್ನು ಮೈಕ್ರೊಪ್ಲಾಸ್ಟಿಕ್ ಎನ್ನಲಾಗುತ್ತದೆ. ಈ ಕಣಗಳ ಗಾತ್ರ 5 ಮಿಲಿಮೀಟರ್‌ನಿಂದ ಒಂದು ಮೈಕ್ರಾನ್‌ನಷ್ಟು (μm) ಇರುತ್ತದೆ.

ಮೈಕ್ರೊಪ್ಲಾಸ್ಟಿಕ್ ಇಂದು ಸರ್ವವ್ಯಾಪಿಯಾಗಿದ್ದು, ನೀರು, ಮಣ್ಣು, ಗಾಳಿಯಷ್ಟೇ ಅಲ್ಲದೇ ಜೀವರಾಶಿಯಲ್ಲೂ ಅಸ್ತಿತ್ವ ಕಂಡುಕೊಂಡಿದೆ; ಆಹಾರದಲ್ಲೂ ಸೇರಿರುವ ಅದು, ಮೀನು, ಕುಡಿಯುವ ನೀರು, ಪಾನೀಯಗಳು ಮತ್ತು ಜೇನುತುಪ್ಪದಲ್ಲೂ ಇದೆ. ಜತೆಗೆ ಆಹಾರ ಸರಪಳಿಗೂ ಪ್ರವೇಶ ಪಡೆದಿದೆ ಎಂದು ವಿವಿಧ ಅಧ್ಯಯನಗಳಿಂದ ತಿಳಿದುಬಂದಿದೆ. ಪಾಲಿಎಥಿಲೀನ್(ಪಿಇ), ಪಾಲಿಪ್ರೊಪೈಲೀನ್ (ಪಿಪಿ), ಪಾಲಿಎಥಿಲೀನ್ ಟೆರೆಫ್ತಲೇಟ್ (ಪಿಇಟಿ), ಪಾಲಿವಿನೈಲ್ ಕ್ಲೋರೈಡ್ (ಪಿವಿಸಿ) ಮುಂತಾದ ಪಾಲಿಮರ್‌ಗಳ ಅಂಶಗಳು ಇರುವುದು ಪತ್ತೆಯಾದರೆ, ಅದರಲ್ಲಿ ಮೈಕ್ರೊಪ್ಲಾಸ್ಟಿಕ್ ಇದೆ ಎಂದು ಅರ್ಥ. ಅವು ಜೀವಿಗಳಲ್ಲಿ ಮತ್ತು ಜೀವ ಇಲ್ಲದ ವಸ್ತುಗಳಲ್ಲಿ ಸಂಯೋಜನೆಗೊಂಡು, ವಿವಿಧ ಪ್ರಮಾಣಗಳಲ್ಲಿ ಕಂಡುಬರುತ್ತದೆ.

ಉಪ್ಪಿನಲ್ಲಿ ಹೇಗೆ ಬಂತು ಪ್ಲಾಸ್ಟಿಕ್?: 2017ರಲ್ಲಿ ಎಂಟು ರಾಷ್ಟ್ರಗಳ 17 ಉಪ್ಪಿನ ಬ್ರ್ಯಾಂಡ್‌ಗಳನ್ನು ಅಧ್ಯಯನ ಮಾಡಿದಾಗ, ಎಲ್ಲ ಬ್ರ್ಯಾಂಡ್‌ಗಳಲ್ಲಿಯೂ ಮೈಕ್ರೊಪ್ಲಾಸ್ಟಿಕ್‌ನ ಅಂಶಗಳು ಪತ್ತೆಯಾಗಿದ್ದವು. ಒಂದು ಕೆಜಿ ಉಪ್ಪಿನಲ್ಲಿ 28 ಮೈಕ್ರೊಪ್ಲಾಸ್ಟಿಕ್ ಕಣಗಳು (ಪಿಇ ಮತ್ತು ಪಿಪಿ) ಪತ್ತೆಯಾಗಿದ್ದವು. 2018ರಲ್ಲಿ ಟರ್ಕಿಯ 15 ಉಪ್ಪಿನ ಬ್ರ್ಯಾಂಡ್‌ಗಳನ್ನು ಅಧ್ಯಯನ ಮಾಡಿದಾಗ, ಎಲ್ಲದರಲ್ಲಿಯೂ ಮೈಕ್ರೊಪ್ಲಾಸ್ಟಿಕ್ ಕಣಗಳು ಪತ್ತೆಯಾಗಿದ್ದವು. ಒಂದು ಕೆ.ಜಿಯಲ್ಲಿ 248 ಮೈಕ್ರೊಪ್ಲಾಸ್ಟಿಕ್ ಕಣಗಳಿದ್ದವು (ಪಿಇ ಮತ್ತು ಪಿಪಿ). ಪ್ರದೇಶದಿಂದ ಪ್ರದೇಶಕ್ಕೆ ಉಪ್ಪಿನಲ್ಲಿರುವ ಮೈಕ್ರೊಪ್ಲಾಸ್ಟಿಕ್ಸ್ ಪ್ರಮಾಣದಲ್ಲಿ ವ್ಯತ್ಯಾಸ ಇದೆಯಾದರೂ, ಅಧ್ಯಯನಕ್ಕೊಳಪಡಿಸಲಾದ ಎಲ್ಲ ದೇಶ, ಎಲ್ಲ ಬ್ರ್ಯಾಂಡ್‌ಗಳ ಉಪ್ಪಿನಲ್ಲೂ ವಿವಿಧ ಗಾತ್ರ, ವಿವಿಧ ಸಾಂದ್ರತೆಯಲ್ಲಿ ಅವುಗಳ ಅಸ್ತಿತ್ವ ಇರುವುದು ಖಚಿತವಾಗಿದೆ. ಭಾರತದಲ್ಲಿ, ಒಂದು ಕೆ.ಜಿ. ಸಮುದ್ರದ ಉಪ್ಪಿನಲ್ಲಿ 32–366 ಮೈಕ್ರೊಪ್ಲಾಸ್ಟಿಕ್ ಕಣಗಳು (ಪಿಪಿ, ಪಿಇ, ಪಿಇಟಿ, ಪಿವಿಸಿ, ನೈಲಾನ್) ಇರುವುದು ಪತ್ತೆಯಾಗಿದ್ದು, ಅವುಗಳ ಗಾತ್ರವು 100 ಮೈಕ್ರಾನ್‌ನಿಂದ – 5,000 ಮೈಕ್ರಾನ್‌ವರೆಗೆ ಇದೆ.

ಉಪ್ಪಿನಲ್ಲಿ ಮೈಕ್ರೊಪ್ಲಾಸ್ಟಿಕ್ ಸೇರಲು ನೀರಿನಲ್ಲಿರುವ ಪ್ಲಾಸ್ಟಿಕ್ ತ್ಯಾಜ್ಯವೇ ಮುಖ್ಯ ಕಾರಣ. ಬಟ್ಟೆ, ವೈಯಕ್ತಿಕ ಸ್ವಚ್ಛತೆ ಸಾಧನಗಳು ಮತ್ತು ಸೌಂದರ್ಯವರ್ಧಕ ಸಾಧನಗಳ ಮೂಲಕವೂ ಅದು ಉಪ್ಪಿನಲ್ಲಿ ಸೇರುತ್ತದೆ. ಉಪ್ಪು ಉತ್ಪಾದನೆಯ ಜಾಗ ಮತ್ತು ಅಲ್ಲಿನ ಪರಿಸರದ ಕೊಡುಗೆಯೂ ಇದರಲ್ಲಿದೆ.

ಸಕ್ಕರೆಯಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು: ಜಗತ್ತಿನಾದ್ಯಂತ ಸಕ್ಕರೆಯ ಉತ್ಪಾದನೆ ಮತ್ತು ಬಳಕೆ ಹೆಚ್ಚಾಗುತ್ತಿದ್ದು, ಏಷ್ಯಾದಲ್ಲಿ ಅತಿ ಹೆಚ್ಚು ಬಳಕೆ ಮಾಡಲಾಗುತ್ತಿದೆ. 2030ರ ಹೊತ್ತಿಗೆ ಜಗತ್ತಿನಲ್ಲಿ ಉತ್ಪಾದನೆಯಾಗುವ ಅರ್ಧದಷ್ಟು ಸಕ್ಕರೆಯು ಏಷ್ಯಾದಲ್ಲಿಯೇ ಬಳಕೆಯಾಗಲಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಪ್ಯಾಕ್ ಮಾಡಲಾದ ಮತ್ತು ಪ್ಯಾಕ್ ಮಾಡಿಲ್ಲದ ಸಕ್ಕರೆಯಲ್ಲಿ ಮೈಕ್ರೊಪ್ಲಾಸ್ಟಿಕ್ (ಅತಿ ಸಾಂದ್ರತೆಯ ಪಿಇ) ಇರುವುದು ಬಾಂಗ್ಲಾದೇಶ ಮತ್ತು ಜರ್ಮನಿಯಲ್ಲಿ ನಡೆಸಿದ ಅಧ್ಯಯನಗಳಿಂದ ಸಾಬೀತಾಗಿದೆ. ಕಬ್ಬು ಅರೆಯುವ ಪ್ರಕ್ರಿಯೆ, ಶುದ್ಧೀಕರಣ, ಸಕ್ಕರೆಯ ಪ್ಯಾಕೇಜಿಂಗ್ ಮುಂತಾದ ಹಂತಗಳಲ್ಲಿ ಸಕ್ಕರೆಯಲ್ಲಿ ಮೈಕ್ರೊಪ್ಲಾಸ್ಟಿಕ್ ಕಣಗಳು ಸೇರಿರುವ ಸಾಧ್ಯತೆ ಇದೆ ಎಂದು ಅಧ್ಯಯನಗಳು ತಿಳಿಸಿವೆ.

ಭಾರತದ ಸ್ಥಿತಿಗತಿ: ಉಪ್ಪು ಮತ್ತು ಸಕ್ಕರೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುವ ಭಾರತೀಯರ ದೇಹದೊಳಗೆ ಪ್ರತಿನಿತ್ಯವೂ ಮೈಕ್ರೊಪ್ಲಾಸ್ಟಿಕ್ ಕಣಗಳು ಸೇರುತ್ತಿವೆ. ಸಾವಯವ ಉಪ್ಪನ್ನು ಬಳಸುವವರಿಗಿಂತ ಪ್ಯಾಕ್ ಮಾಡಿದ ಮತ್ತು ಅಯೋಡಿನ್‌ಯುಕ್ತ ಉಪ್ಪನ್ನು ಸೇವಿಸುವವರ ದೇಹಕ್ಕೆ ಹೆಚ್ಚು ಮೈಕ್ರೊಪ್ಲಾಸ್ಟಿಕ್ ಕಣಗಳು ಸೇರುತ್ತಿವೆ.

ಉಪ್ಪಿನಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳ ಅಸ್ತಿತ್ವದ ಬಗ್ಗೆ ಭಾರತದಲ್ಲಿ ಕೆಲವೇ ಕೆಲವು ಅಧ್ಯಯನಗಳು ನಡೆದಿವೆ. ಸಮುದ್ರದ ಉಪ್ಪು, ರಾಕ್ ಸಾಲ್ಟ್, ಕೆರೆ ಉಪ್ಪು ಮತ್ತು ವಾಣಿಜ್ಯ ಉಪ್ಪನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಎಲ್ಲ ಉಪ್ಪುಗಳಲ್ಲೂ ಮೈಕ್ರೊಪ್ಲಾಸ್ಟಿಕ್‌ಗಳು ಇರುವುದು ಪತ್ತೆಯಾಗಿದೆ. ಎಲ್ಲ ಉಪ್ಪುಗಳಲ್ಲಿಯೂ ಪಿಇ ಮತ್ತು ಪಿಇಟಿ ಪ್ರಮುಖವಾಗಿದ್ದು, ವಿವಿಧ ಪ್ರಾಂತ್ಯಗಲ್ಲಿ ವಿವಿಧ ಸಾಂದ್ರತೆಯಲ್ಲಿ ಅವು ಉಪ್ಪಿನಲ್ಲಿ ಸಂಯೋಜನೆಗೊಂಡಿವೆ. ಸಕ್ಕರೆಯಲ್ಲಿನ ಮೈಕ್ರೊಪ್ಲಾಸ್ಟಿಕ್‌ಗಳ ಇರುವಿಕೆ ಪತ್ತೆ ಹಚ್ಚಲು ದೇಶದಲ್ಲಿ ಈವರೆಗೆ ಅಧ್ಯಯನ ನಡೆದಿರಲಿಲ್ಲ.

ತಡೆಗಟ್ಟುವ ಕಾರ್ಯ: ಮೈಕ್ರೊಪ್ಲಾಸ್ಟಿಕ್‌ಗಳು ಅತಿ ಸೂಕ್ಷ್ಮ ಕಣಗಳಾಗಿರುವುದರಿಂದ, ಅವುಗಳ ಪ್ರಮಾಣ ಅಧ್ಯಯನಗಳಲ್ಲಿ ಹೇಳಿರುವುದಕ್ಕಿಂತಲೂ ಹೆಚ್ಚಿರುವ ಸಾಧ್ಯತೆಯೂ ಇದೆ. ಉಪ್ಪು ಮತ್ತು ಸಕ್ಕರೆ ಸೇರಿದಂತೆ, ಆಹಾರ ಪದಾರ್ಥಗಳಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳ ಇರುವಿಕೆಯ ಬಗ್ಗೆ ಪರಿಶೀಲನೆ ನಡೆಸಲು ಮತ್ತು ಅದನ್ನು ನಿಯಂತ್ರಿಸಲು ಯಾವುದೇ ವ್ಯವಸ್ಥೆ ಇಲ್ಲ. ಆದಾಗ್ಯೂ, ಹಲವು ದೇಶಗಳು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗಿದ್ದು, ಮೈಕ್ರೊಪ್ಲಾಸ್ಟಿಕ್‌ಗಳಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಅಧ್ಯಯನದಲ್ಲಿ ತೊಡಗಿವೆ. ಅಮೆರಿಕದ ಆಹಾರ ಮತ್ತು ಔಷಧ ಆಡಳಿತವು (ಎಫ್‌ಡಿಎ) ಆಹಾರ ಪದಾರ್ಥಗಳಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳ ಇರುವಿಕೆಯ ಬಗ್ಗೆ ಸಮೀಕ್ಷೆ ಆರಂಭಿಸಿದ್ದು, ಅವುಗಳನ್ನು ತಡೆಗಟ್ಟಲು ವ್ಯವಸ್ಥೆಯೊಂದನ್ನು ರೂಪಿಸಲು ಹೊರಟಿದೆ.

ಆಹಾರದ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ಮೈಕ್ರೊಪ್ಲಾಸ್ಟಿಕ್‌ಗಳು ಸೇರದಂತೆ ಮಾಡಲು ಅಧ್ಯಯನದಲ್ಲಿ ಹಲವು ಕ್ರಮಗಳನ್ನು ಸೂಚಿಸಲಾಗಿದೆ. ಮೈಕ್ರೊಪ್ಲಾಸ್ಟಿಕ್ ಬಿಡುಗಡೆಗೆ ಆಸ್ಪದವಿಲ್ಲದಂತೆ ತ್ಯಾಜ್ಯ ನೀರು ಸಂಸ್ಕರಣೆ ಮಾಡುವುದು, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯಲ್ಲಿ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು, ಆಹಾರದ ಪ್ಯಾಕೇಜಿಂಗ್ ಮತ್ತು ಸಂಸ್ಕರಣೆಗೆ ಪರ್ಯಾಯ ವಿಧಾನ ಬಳಸುವುದು ಇವುಗಳಲ್ಲಿ ಮುಖ್ಯವಾದವು.

ಮನುಷ್ಯನ ದೇಹದಲ್ಲೂ ಸಂಗ್ರಹ

ಮನುಷ್ಯನ ದೇಹದ ವಿವಿಧ ಅಂಗಗಳಲ್ಲೂ ಮೈಕ್ರೊಪ್ಲಾಸ್ಟಿಕ್ ಕಣಗಳು ಸಂಗ್ರಹಗೊಂಡಿವೆ ಎಂದು ಹೇಳುತ್ತದೆ ಅಧ್ಯಯನ. ಮಾನವ ಸೇವಿಸುವ ಗಾಳಿ, ತಿನ್ನುವ ಆಹಾರ, ಕುಡಿಯುವ ಪಾನೀಯಗಳ ಮೂಲಕ ಅತಿ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ದೇಹವನ್ನು ಸೇರುತ್ತಿವೆ.

ದೇಹದಲ್ಲಿ ಎಲ್ಲೆಲ್ಲಿ, ಎಷ್ಟು ಮೈಕ್ರೊಪ್ಲಾಸ್ಟಿಕ್ ಕಣಗಳ ಸಂಗ್ರಹ?



ಆಧಾರ: ಟಾಕ್ಸಿಕ್ಸ್ ಲಿಂಕ್‌ನ 'ಮೈಕ್ರೊಪ್ಲಾಸ್ಟಿಕ್ಸ್ ಇನ್ ಸಾಲ್ಟ್ ಅಂಡ್ ಶುಗರ್' ವರದಿ

ಪ್ರಮುಖ ಶಿಫಾರಸುಗಳು

- ಮೈಕ್ರೊಪ್ಲಾಸ್ಟಿಕ್ ಮಾಲಿನ್ಯದ ಮೂಲ ಮತ್ತು ಮಾರ್ಗವನ್ನು ಪತ್ತೆ ಹಚ್ಚಲು ಸಂಶೋಧನೆಗೆ ಬೆಂಬಲ ನೀಡುವುದು
- ಮೈಕ್ರೊಪ್ಲಾಸ್ಟಿಕ್ ಕಣಗಳ ಪತ್ತೆಗೆ ಪ್ರಮಾಣಿತ ಪರೀಕ್ಷಾ ಶಿಷ್ಟಾಚಾರ ರೂಪಿಸುವುದು
- ಮೈಕ್ರೊಪ್ಲಾಸ್ಟಿಕ್ ಕಣಗಳು ಜನರ ಆರೋಗ್ಯದ ಮೇಲೆ ಬೀರುವ ಪರಿಣಾಮದ ಬಗ್ಗೆ ಮತ್ತು ಅವು ಹೆಚ್ಚಿರುವ ಆಹಾರ ಪದಾರ್ಥಗಳ ಬಳಕೆಯ ಮೇಲೆ ಕಡಿವಾಣ ಹೇರುವ ಬಗ್ಗೆ ಪರಿಶೀಲನೆ
- ಆಹಾರದ ಪದಾರ್ಥಗಳಲ್ಲಿನ ಮೈಕ್ರೊಪ್ಲಾಸ್ಟಿಕ್ ಕಣಗಳ ಪ್ರಮಾಣ ಅಪಾಯಕಾರಿ ಮಟ್ಟ ಮುಟ್ಟದಂತೆ ನಿಯಂತ್ರಿಸಲು ಮಾನದಂಡಗಳನ್ನು ರೂಪಿಸುವುದು ಮತ್ತು ಉಪ್ಪು ಮತ್ತು ಸಕ್ಕರೆ ಸೇರಿದಂತೆ ಎಲ್ಲ ಆಹಾರ ಪದಾರ್ಥಗಳ ಮೈಕ್ರೊಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಆಹಾರ ಸುರಕ್ಷತಾ ಸಂಸ್ಥೆಗಳಿಂದ ನಿರಂತರ ಮತ್ತು ಸಮಗ್ರ ಮೇಲ್ವಿಚಾರಣೆ ನಡೆಸುವುದು

ಭಾರತದಲ್ಲಿ ಉಪ್ಪು, ಸಕ್ಕರೆ ಸೇವನೆ

ಆರೋಗ್ಯದ ಮೇಲೆ ಪರಿಣಾಮ

ಮೈಕ್ರೊಪ್ಲಾಸ್ಟಿಕ್ ಕಣಗಳಿಂದ ಮನುಷ್ಯನ ಆರೋಗ್ಯದ ಮೇಲಾಗುವ ಪರಿಣಾಮಗಳ ಬಗ್ಗೆ ಸದ್ಯಕ್ಕೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಆದರೆ, ಮೈಕ್ರೊಪ್ಲಾಸ್ಟಿಕ್ ಕಣಗಳು ಮಾನವನ ಆರೋಗ್ಯಕ್ಕೆ ಅಪಾಯಕಾರಿಯಾಗಬಲ್ಲದು ಎಂಬುದನ್ನು ಹಲವು ಅಧ್ಯಯನಗಳು ಹೇಳಿವೆ. ವಿವಿಧ ಸಂಯೋಜಕಗಳನ್ನು ಹೊಂದಿರುವ ಪ್ಲಾಸ್ಟಿಕ್‌ನ ಅತಿಸೂಕ್ಷ್ಮ ಕಣಗಳು ಸಂಕೀರ್ಣ ರಾಸಾಯನಿಕ ಮಿಶ್ರಣಗಳಾಗಿರುತ್ತವೆ. ಈ ರಾಸಾಯನಿಕಗಳು ಸುಲಭವಾಗಿ ರಕ್ತ, ನರಗಳು ಸೇರಿದಂತೆ ದೇಹದ ವಿವಿಧ ಭಾಗಗಳಲ್ಲಿ ಶೇಖರಣೆಗೊಳ್ಳಬಹುದು. ಈ ಮಿಶ್ರಣಗಳು ಅಪಾಯಕಾರಿ ರಾಸಾಯನಿಕಗಳನ್ನು ಬಿಡುಗಡೆ ಮಾಡಬಲ್ಲವು. ಇದು ವಿವಿಧ ರೀತಿಯ ಅನಾರೋಗ್ಯಕ್ಕೆ ಕಾರಣವಾಗಬಹುದು ಎಂದು ವರದಿ ಹೇಳಿದೆ.

ಮೈಕ್ರೊಪ್ಲಾಸ್ಟಿಕ್ ಕಣಗಳು ಮತ್ತು ಅದರ ರಾಸಾಯನಿಕಗಳು ವಿವಿಧ ಹಾರ್ಮೋನ್‌ಗಳಿಗೆ ಸಂಬಂಧಿಸಿದ ಕೋಶಗಳ ಮೇಲೆ ಪ್ರಭಾವ ಬೀರಬಹುದು ಮತ್ತು ಇದು ಹಾರ್ಮೋನ್‌ಗಳನ್ನು ಸ್ರವಿಸುವ ಗ್ರಂಥಿಯನ್ನು (ನಿರ್ನಾಳ ಗ್ರಂಥಿ) ಹಾಳುಗೆಡವಬಲ್ಲುದು ಎಂದು 2020ರಲ್ಲಿ ನಡೆದ ಅಧ್ಯಯನವೊಂದರ ವರದಿ ಹೇಳಿತ್ತು. 2019ರಲ್ಲಿ ನಡೆದಿದ್ದ ಅಧ್ಯಯನ ಕೂಡ, ಪ್ಲಾಸ್ಟಿಕ್‌ನ ಸೂಕ್ಷ್ಮ ಕಣಗಳು ಹಾರ್ಮೋನುಗಳ ಉತ್ಪಾದನೆ ಮತ್ತು ನಿಯಂತ್ರಣದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಮತ್ತು ಇದರಿಂದ ವಿವಿಧ ಆರೋಗ್ಯದ ಸಮಸ್ಯೆಗಳು ಉಂಟಾಗಬಹುದು ಎಂದು ಹೇಳಿತ್ತು.

ಧನಂಜಯ

'ಜಿಂಗೋ' ಆದ ಧನಂಜಯ

ನಟ ಡಾಲಿ ಧನಂಜಯ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಘೋಷಣೆಯಾಗಿದ್ದು, 'ಜಿಂಗೋ' ಎಂದು ಹೆಸರಿಡಲಾಗಿದೆ. ಈ ಹಿಂದೆ 'ಡೇರ್ ಡೆವಿಲ್ ಮುಸ್ತಾಫಾ' ಚಿತ್ರವನ್ನು ನಿರ್ದೇಶಿಸಿದ್ದ ಶಶಾಂಕ್ ಸೋಗಲ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ರಾಜಕಾರಣಿಯಾಗಿ ಧನಂಜಯ ಕಾಣಿಸಿಕೊಂಡಿದ್ದು, ಫಸ್ಟ್‌ಲುಕ್ ಕೂಡ ಬಿಡುಗಡೆಗೊಂಡಿದೆ. ಚಿತ್ರಕ್ಕೆ ಹಾರಿಸ್ ಅಹಮದ್ ಕಥೆ ಚಿತ್ರಕಥೆ ಬರೆದಿದ್ದು, ಬಿ ನರೇಂದ್ರ ರೆಡ್ಡಿ ಹಾಗೂ ಡಾಲಿ ಧನಂಜಯ ಬಂಡವಾಳ ಹೂಡುತ್ತಿದ್ದಾರೆ.

'ಜಿಂಗೋ ಎಂದರೆ ವ್ಯಕ್ತಿಯೋರ್ವನ ನಿಕ್ ನೇಮ್. ಆತ ರಾಜಕಾರಣಿಯಾ ಅಥವಾ ಹೋರಾಟಗಾರನಾ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು' ಎಂದಿದೆ ಚಿತ್ರತಂಡ. ನವನೀತ್ ಶ್ಯಾಮ್ ಸಂಗೀತ, ಶರತ್ ವಸಿಷ್ಠ ಸಂಕಲನ, ರಾಹುಲ್ ರಾಯ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಶಶಾಂಕ್ ಸೋಗಲ್ ನಿರ್ದೇಶನದ ಚೊಚ್ಚಲ 'ಡೇರ್ ಡೆವಿಲ್ ಮುಸ್ತಾಫಾ' ಸಿನಿಮಾವನ್ನು ಡಾಲಿ ಧನಂಜಯ ಅವರು ತಮ್ಮ ಡಾಲಿ ಪಿಕ್ಚರ್ಸ್ ವತಿಯಿಂದ ಪ್ರೆಸೆಂಟ್ ಮಾಡಿದ್ದರು.

ಸೆಟ್ಟೇರಿದ 'ಪದ್ಮಗಂಧಿ'

ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವ 'ಪದ್ಮಗಂಧಿ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಕ.ಸುಚೇಂದ್ರ ಪ್ರಸಾದ ನಿರ್ದೇಶನದ ಚಿತ್ರಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯೆ ಎಸ್.ಆರ್ ಲೀಲಾ ಬಂಡವಾಳ ಹೂಡಿದ್ದಾರೆ. ನಟಿ ಶ್ರುತಿ, ನಟ ಶರಣ್ ಸೇರಿದಂತೆ ಹಲವು ಗಣ್ಯರು ಚಿತ್ರದ ಮುಹೂರ್ತ ಸಮಾರಂಭದಲ್ಲಿ ಹಾಜರಿದ್ದು ತಂಡಕ್ಕೆ ಶುಭ ಕೋರಿದರು.



ಚಿತ್ರದ ಪೋಸ್ಟರ್

'ಪದ್ಮಪುಷ್ಪದ ವೈಶಿಷ್ಟ್ಯತೆ ಹಾಗೂ ಅಖಂಡತೆಯನ್ನು ತಿಳಿಸುವ ಚಿತ್ರ. 'ಶುಭಂ ಕರೋತಿ ಮೈತ್ರೇಯಿ ಬಾಲಕಿಯರ ಗುರುಕುಲ'ವನ್ನು ಹಿನ್ನೆಲೆಯಾಗಿರಿಸಿಕೊಂಡು ಚಿತ್ರ ಸಾಗುತ್ತದೆ. ಪುರಾಣ, ಸಸ್ಯ ವಿಜ್ಞಾನ, ದರ್ಶನಶಾಸ್ತ್ರ, ವೇದ ವೇದಾಂತ, ಆಯುರ್ವೇದ, ಯೋಗ ಹಾಗೂ ಸಮಕಾಲೀನದಲ್ಲಿ ಬರುವ 'ಪದ್ಮಪುಷ್ಪ'ದ ಕುರಿತಾದ ವಿಚಾರ ಚಿತ್ರದಲ್ಲಿರಲಿದೆ' ಎಂದಿದ್ದಾರೆ ನಿರ್ದೇಶಕರು.

ಮನು ಯಾಪ್ಲಾರ್ ಹಾಗೂ ನಾಗರಾಜ ಅದವಾನಿ ಛಾಯಾಚಿತ್ರಗ್ರಹಣವಿದೆ. ಮುಖ್ಯಭೂಮಿಕೆಯಲ್ಲಿ ಬಾಲಕಿ ಮಹಾಪದ್ಮ, ಪರಿಪೂರ್ಣ ಚಂದ್ರಶೇಖರ್, ಸಿತಾರ ಮುಂತಾದವರಿದ್ದಾರೆ. ಸೆಪ್ಟೆಂಬರ್ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಮಕ್ಕಳಿಗೆ ಏನು ಕಲಿಸಬೇಕು?

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

8

ಒಬ್ಬ ಹುಡುಗ ಮಧ್ಯಾಹ್ನ ಊಟಕ್ಕೆ ಬಂದ. ಕಾಲು ಬುಳಬುಳ ಅಂತದೆ ಎಂದ. ಏನಿದು ಬುಳಬುಳ? ಇಂತಹ ಶಬ್ದವೊಂದು ಕನ್ನಡ ಡಿಕ್ಷನರಿಯಲ್ಲೇ ಇಲ್ಲ. ತಲೆನೋವು ಅಂದರೆ ಗುಳಿಗೆ ಕೊಡಬಹುದು. ಕೆಮ್ಮು ಜ್ವರ ಅಂದರೆ ಔಷಧಿ ಕೊಡಬಹುದು. ಈ ಬುಳಬುಳಕ್ಕೆ ಏನು ಮದ್ದು ಕೊಡುವುದು? ಆದರೆ ತಾಯಿಗೆ ಗೊತ್ತು. ಬುಳಬುಳ ಅಂದರೆ ಏನು ಅಂತ. ಬುಳಬುಳ ಅಂದರ ರಾತ್ರಿ ಊಟಕ್ಕೆ ಹೊರಗೆ ಹೋಗೋಣ ಅಂತ ಅಷ್ಟೆ. ಮಕ್ಕಳ ಈ ಅಭ್ಯಾಸ ತಪ್ಪಿಸಬೇಕು. ದುಡಿಯಲು ಹಚ್ಚಬೇಕು.

ಬೆಂಗಳೂರಲ್ಲಿ ಒಬ್ಬಳು ಮಹಿಳೆ ಇದ್ದಾಳೆ. ಅವಳಿಗೆ 70 ವರ್ಷ. 30X40 ಸೈಟಲ್ಲಿ ಮನೆ ಕಟ್ಟಕೊಂಡಿದ್ದಾಳೆ. ನೂರಾರು ಬಗೆಯ ಹಣ್ಣು, ಕಾಯಿಪಲ್ಲೆ ಮನೆ ಒಳಗೇ ಬೆಳೀತಾಳೆ. ಕಾಯಿಪಲ್ಲೆ, ಹಣ್ಣು ತರೋಕೆ ವಟ್ಟಾ ಬಜಾರಕ್ಕೆ ಹೋಗಿಯೇ ಇಲ್ಲ ಆಕೆ. ಸಂಕಲ್ಪ ಇತ್ತು ಅಂದರೆ ನಮ್ಮ ಮನೇನು ಹೊಲ ಆಗುತ್ತೈತಿ. ನೀವು ದುಡಿಯಾಕೆ ಶುರುಮಾಡಿದ್ರ ಮೊದಲು ನಿಮ್ಮ ಕೈಯಾಗಿನ ಮೊಬೈಲ್ ಕೆಳಕ್ಕೆ ಬೀಳುತ್ತೈತಿ. ಮೈ ಬಾಗುತ್ತೈತಿ. ಆರೋಗ್ಯ ಬರುತ್ತೈತಿ. ದುಡಕೋತ ಇದ್ದರ ಆರೋಗ್ಯ ಇರ್ತದ.

ಗುರುಗಳತ್ತ ಒಬ್ಬರು ಬಂದರು. 'ನಿಮ್ಮ ಆಶೀರ್ವಾದದಿಂದ ಮಗಳಿಗೆ ಚಲೋ ಮನಿ ಸಿಕ್ಕಿದೆ' ಎಂದರು. ಚಲೋ ಮನಿ ಎಂದರೆ ಏನು? ಕಡ್ಡಿ ತೆಗೆದು ಆ ಕಡೆ ಈ ಕಡೆ ಇಡೋಂಗಿಲ್ಲ. ಅಂತಾ ಮನಿ. ಒಂದು ವರ್ಷ ಆಗೋದರೊಳಗೆ ಮಗಳು ತವರು ಮನಿಗೆ ಬಂದಳು. ಆಗ ಅವಳು ನೂರು ಕೆ.ಜಿ. ತೂಕ ಆಗಿದ್ದಳು. 'ಅಲ್ಲಬೆ ಹೀಂಗ್ಯಾಕೆ ಆದಿ' ಎಂದು ಕೇಳಿದಳು ತಾಯಿ. 'ನೀನು ಅಂಥಾ ಮನೀಗೆ ಕೊಟ್ಟಿ. ಕಡ್ಡಿ ಕೆಲಸ ಇಲ್ಲ. ಅದಕ್ಕ ಗುಡ್ಡ ಆಗೇನಿ' ಅಂದಳು ಮಗಳು. ಮಕ್ಕಳಿಗೆ ದುಡಿಯೋದು ಕಲಿಸಬೇಕೇ ಹೊರತು ಸುಮ್ಮನೆ ಕುಳಿತುಕೊಳ್ಳೋದು ಕಲಿಸಬಾರದು. ಶರಣರು ಕಲಿಸಿದ್ದು ಅದನ್ನು. ದುಡಿಯೋದರಿಂದ ಆರೋಗ್ಯ ಐತಿ, ಸಮೃದ್ಧಿ ಐತಿ, ಚಿಂತಿ ದೂರವಾಗುತ್ತೈತಿ.

ಉಪಕಾರ ಸ್ಮರಣೆಗಾಗಿಯೂ ಕೆಲಸ ಮಾಡಬೇಕು. ಮನುಷ್ಯ ಅಂದರ ಯಾರೋ ಎಲ್ಲೋ ಒಗೆದ ಕಲ್ಲು ಅಲ್ಲ. ಮಾಂಸದ ಮುದ್ದೆ ಅಲ್ಲ. ಬಹಳ ಜನರ ಉಪಕೃತದ ಮೊತ್ತ ಮನುಷ್ಯ. ನಾವು ಈ ಭೂಮಿಗೆ ಬರುವುದಕ್ಕೆ ಮೊದಲೇ ನಮ್ಮ ತಾಯಿಯ ಎದೆಯ ಒಳಗೆ ಹಾಲು ಇಟ್ಟು ಕಳಿಸ್ಯಾನಲ್ಲ ದೇವರು. ಅವ ಎಷ್ಟು ಉಪಕಾರ ಮಾಡ್ಯಾನ ನಮಗ. ತಾಯಿ ಹಾಲಿನಲ್ಲಿ ಎಷ್ಟು ಫ್ಯಾಟ್ ಇರಬೇಕು? ಯಾವ ವಿಟಮಿನ್ ಇರಬೇಕು ಅಂತಾ ನಾವು ಚೆಕ್ ಮಾಡ್ಯಾವೇನು? ಅವ ತುಂಬಿ ಕಳಿಸ್ಯಾನ. ಇಷ್ಟೆಲ್ಲಾ ಕೊಟ್ಟ ಅವನ ಉಪಕಾರ ಸ್ಮರಣೆಗೆ ನಾವು ಏನು ಮಾಡಬೇಕು? ಅದಕ್ಕ ನಾವು ಹಿಮಾಲಯ ನಿರ್ಮಾಣ ಮಾಡಬೇಕಿಲ್ಲ. ಹೊಳೆ ನಿರ್ಮಾಣ ಮಾಡಬೇಕಿಲ್ಲ. ಗುಡ್ಡ ಕಟ್ಟಬೇಕಿಲ್ಲ. ಜೀವನ ಸಾರ್ಥಕ ಆಗಬೇಕು ಎಂದರೆ ನೀವು ಹೆಚ್ಚೇನು ಮಾಡಬೇಕಿಲ್ಲ. ದೇವರು ಏನು ಕೊಟ್ಟಾನಲ್ಲ ಅದನ್ನು ಕೆಡಿಸಲಾರದಂಗೆ ಇಟ್ಟರೆ ಸಾಕು. ಸ್ವಚ್ಛ ಇಡಬೇಕು. ಸ್ವಚ್ಛ ದೇಶ, ಸ್ವಚ್ಛ ರಾಜ್ಯ. ಇಷ್ಟು ಮಾಡಿದರೆ ಸಾಕು. ಅದೇ ಧರ್ಮ. ಅದನ್ನು ಮಕ್ಕಳಿಗೆ ಕಲಿಸಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಆಗಸ್ಟ್ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಷ್ಟಮಿ ಗಂ. 26-20 ನಕ್ಷತ್ರ: ಕೃತ್ತಿಕಾ ಗಂ. 15-55 ಯೋಗ: ವ್ಯಾಘಾತ ಗಂ. 22-17 ಕರಣ: ಬಾಲವ ಗಂ. 14-56, ಸಿಂಹ ಮಾಸದ 10 ನೇ ದಿನ, ಮಳೆನಕ್ಷತ್ರ: ಮಘಾ 3.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-22 ಸೂರ್ಯಾಸ್ತ : 06-42
ಮುಸ್ಲಿಂ ದಿನಾಂಕ : 21 ಸಫರ್
ದಿನ ವಿಶೇಷ : ಶ್ರೀ ಕೃಷ್ಣ ಜನ್ಮಾಷ್ಟಮಿ, ಅದೃಷ್ಟ ಸಂಖ್ಯೆ : 4, 11

ಮೇಷ: ನಿಮ್ಮಲ್ಲಿ ಹೆಚ್ಚಿನ ಉತ್ಸಾಹ ಕಾಣಿಸುತ್ತಿದ್ದು, ಹೊಸದೊಂದು ಹಾದಿಯಲ್ಲಿ ನಡೆಯಲಿದ್ದೀರಿ. ಕೆಲಸದಲ್ಲಿ ಈ ದಿನ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ಸಂಬಂಧಿಗಳಿಂದ ಸಂತಸದ ಸುದ್ದಿ ಕೇಳುವಿರಿ.

ವೃಷಭ: ವ್ಯಾಪಾರದಲ್ಲಿ ಸಹಚರರಿಂದಲೇ ಮೋಸವಾಗುತ್ತಿರುವ ವಿಚಾರವು ಅನುಭವಕ್ಕೆ ಬಂದು ದುಃಖವಾಗಬಹುದು. ಇಂದಿನ ಆಫೀಸಿನ ಕೆಲಸಗಳೂ ಮುಗಿಯುವುದು. ಜಾಹೀರಾತು ಏಜೆನ್ಸಿಯವರಿಗೆ ಆದಾಯವಿರುವುದು.

ಮಿಥುನ: ಯಾವುದೇ ನಿಯಮ ಉಲ್ಲಂಘನೆಯಾಗದೇ ಇರುವ ರೀತಿಯಲ್ಲಿ ಇರುವುದು ಉತ್ತಮ. ಅಧಿಕಾರ, ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ. ಹೊಸ ಏಜೆನ್ಸಿಯೊಂದನ್ನು ಪ್ರಾರಂಭಿಸುವವರಿಗೆ ಸಕಾಲ.

ಕರ್ಕಾಟಕ: ಶೀತ ಬಾಧೆ ಹೋಗಲಾಡಿಸಿಕೊಳ್ಳುವ ವಿಚಾರವಾಗಿ ಮನೆಮದ್ದಿನ ಮೊರೆ ಹೋಗುವುದು ಉತ್ತಮ. ಮನೆಗಾಗಿ ದುಬಾರಿ ಸಾಮಗ್ರಿ ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ.

ಸಿಂಹ: ಅರ್ಧಕ್ಕೆ ನಿಂತ ಎಲ್ಲಾ ಕಾರ್ಯಗಳು ಪುನಃ ಚಾಲನೆ ಪಡೆಯಲಿವೆ. ತಾರ್ಕಿಕ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಸೂಕ್ತ ಸಮಯ. ಉತ್ತಮ ಕಾರ್ಯಗಳಿಗೆ ಎಂದಿನಂತೆಯೇ ಶ್ಲಾಘನೆ ಸಿಗುತ್ತದೆ.

ಕನ್ಯಾ: ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು. ಗುರು ವಾಕ್ಯ ಪಾಲಿಸುವುದರಿಂದ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಸಂಜೆಯ ಸಮಯದಲ್ಲಿ ಸಣ್ಣ ವಿಹಾರಕ್ಕೆ ತೆರಳುವಂತೆ ಆಗುವುದು.

ತುಲಾ: ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿದರೆ, ಬಯಕೆ ಈಡೇರುವುದು. ವರಿಷ್ಠರೊಡನೆ ಗಣಿಗಾರಿಕೆ ವಿಷಯಗಳ ಬಗ್ಗೆ ಚರ್ಚೆ ಸಂಭವಿಸಬಹುದು. ಇನ್ನೊಬ್ಬರಿಗೆ ಸಾಲದ ರೂಪದಲ್ಲಿ ಹಣ ಕೊಡುವುದು ಸರಿಯಲ್ಲ.

ವೃಶ್ಚಿಕ: ಬಹು ದೊಡ್ಡ ಪ್ರಮಾಣದ ಸಿಹಿ ತಿಂಡಿಯ ತಯಾರಕರಿಗೆ ಕಾರ್ಮಿಕರ ಕೊರತೆ ಎದುರಾಗುವ ಸಾಧ್ಯತೆ ಇದೆ. ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ. ನಿಮ್ಮ ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ.

ಧನು: ವಕೀಲಿ ವೃತ್ತಿಯವರಿಗೆ ನಿಗೂಢ ವಿಷಯ ಸಂಗ್ರಹಣೆಗೆ ಅತ್ಯಂತ ಸೂಕ್ತವಾಗಿರುತ್ತದೆ. ದೇಹದಲ್ಲಿ ವಾಯು ಬಾಧೆ ಕಂಡುಬಂದು ಸಣ್ಣ-ಪುಟ್ಟ ಅನಾರೋಗ್ಯ ಎದುರಾಗುವುದು.

ಮಕರ: ಉದ್ಯೋಗಕ್ಕಾಗಿ ವಿದೇಶಪ್ರಯಾಣದ ಅವಕಾಶ ಸಿಗಬಹುದು. ಸಂಘ-ಸಂಸ್ಥೆಯಲ್ಲಿ ಅಥವಾ ಗ್ರಾಮೀಣ ಬದುಕಿನಲ್ಲಿ ಅಧಿಕಾರ ಸಿಗಲಿದೆ. ಆರ್ಥಿಕ ಅಭಿವೃದ್ಧಿಯ ವಿಚಾರಕ್ಕೆ ಸಂಬಂಧಿಸಿದಂತೆ ಮಾತುಗಳು ಬರಬಹುದು

ಕುಂಭ: ದುಡುಕಿನ ಕೆಲವು ನಿರ್ಧಾರಗಳಿಂದಾಗಿ ಆತ್ಮೀಯರಲ್ಲಿ ಮನಸ್ತಾಪವಾಗಲಿದೆ. ಹೊರ ದೇಶದ ಪ್ರಯಾಣದ ಅವಕಾಶಗಳು ಸಿಗಬಹುದು. ನೃತ್ಯಾಭ್ಯಾಸ ಮುಂದುವರಿಸುವಂತೆ ಅಧ್ಯಾಪಕರಿಂದ ಒತ್ತಾಯ ಹೆಚ್ಚುವುದು.

ಮೀನ: ತಾರ್ಕಿಕ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತ ಸಮಯವಾಗಿದೆ. ಆಫೀಸಿನ ಸಿಬ್ಬಂದಿಯೊಂದಿಗೆ ಮಾತುಗಳನ್ನು ಕಡಿಮೆ ಮಾಡುವುದು ಉತ್ತಮ. ರಾಜಕೀಯ ಸೇರುವ ಯೋಚನೆ ಬರುವುದು.

ಪದಬಂಧ 5784

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರಗಳ ಸಮೂಹದಲ್ಲಿ ತುಪಾಕಿ ಕಾಣಿಸುತ್ತಿದೆಯಲ್ಲಾ (2)
3.ಕಾಲಿನ ತುದಿ (4)
6.ಕಮಂಡಲದ ಬಳಿಯಲ್ಲಿರುವ ತಾವರೆ (3)
8.ಉತ್ತರದವರ ಚಿಕಿತ್ಸಾಲಯ (4)
9.ಜೈನರ ದೇವಾಲಯ (3)
10.ವಾಲುತ್ತಾ ಕೇಳುವಿಕೆ! (3)
11.ದೊಡ್ಡಜಾತಿಯ ನಿಂಬೆಯಿದು (4)
13.ಭಾಜಿಸುವ ಸಂಖ್ಯೆ (3)
15.ಶತೃತ್ವ ವನ್ನು ಹೀಗೆನ್ನಿ (4)
16.ತಟಕ್ಕನೆ ಬಂದು ನಿಂತ ಮೋಸಗಾರ! (2)

ಮೇಲಿಂದ ಕೆಳಕ್ಕೆ
2.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
3.ಮನಸ್ಸಿನ ಗೊಂದಲ (3)
4.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಗಜದ ಪಾದದಂತೆ ಊದಿಕೊಳ್ಳುವ ಒಂದು ರೋಗ (4)
7.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
9.ಉತ್ತರ ದಿಕ್ಕಿದು (4)
10.ಸ್ವಾಭಾವಿಕವಾದುದು ಸಜದೊಳಗಿದೆ (3)
12.ಲೋಹಭಾಗಗಳನ್ನು ಕಾಯಿಸಿ ಒಂದರೊಡನೆ ಒಂದು ಸೇರಿಸುವುದು (3)
13.ಕೊನೆಗೆ ಜನ ಇದ್ದಾಗ ಅರ್ಹನಾದವನು ಕಾಣುತ್ತಾನೆ (3)
14.ನಾಣ್ಯಗಳನ್ನು ಮುದ್ರಿಸುವ ಸ್ಥಳ (3)



5783ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಬಲಿಪಶು 5.ಜರಡಿ
6.ಕಶೇರುಕ 7.ರದ
9.ಆಗಂತುಕ 10.ವಲ್ಮೀಕ
11.ಬಟವಾಡೆ 12.ರವ
15.ಮಹೋತ್ಸವ 17.ಮಾದಕ
18.ಜಾಯಮಾನ

ಮೇಲಿಂದ ಕೆಳಕ್ಕೆ:
1.ಮಜಕೂರು 2.ಬಡಿವಾರ 3.ಶುಕ
4.ಆಕಸ್ಮಿಕ 8.ದವಡೆ
9.ಆಕರ 11.ಬಹುಮತ
13.ವರಮಾನ 14.ಮಾತುಕತೆ
16.ವಜಾ

ಸುಡೊಕು 6169

	2			5		8		
8		7	3		9		2	1
	4			1				7
	3	2				7		6
				7	2		9	
7	9				6			5
3	1		9		5		7	
	7			8		1		9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6168 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಸರ್ಕಾರಿ ನೌಕರನಿಗೆ 'ಜಿ–ಪ್ರವರ್ಗ'ದಲ್ಲಿ ದೊರೆತ ನಿವೇಶನ • ಬದಲಿ ನಿವೇಶನಕ್ಕೆ ಉಳ್ಳವರಿಂದಲೂ ಪ್ರಭಾವ

ಬದಲಿ ನಿವೇಶನಕ್ಕೆ ಪದೇ ಪದೇ ಶಿಫಾರಸು

• ಎಂ. ಮಹೇಶ

ಮುಖ್ಯಾಂಶಗಳು

- ಸಾತಗಳ್ಳಿ ಬದಲಿಗೆ ವಿಜಯನಗರ ಅಥವಾ ದಟ್ಟಗಳ್ಳಿ ನಿವೇಶನಕ್ಕೆ ಪ್ರಯತ್ನ
- ಪದೇ ಪದೇ ಅರ್ಜಿ ಸಲ್ಲಿಕೆ, ಶಿಫಾರಸು ಪತ್ರ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ 'ಬದಲಿ ನಿವೇಶನ' ಪಡೆಯಲು ಉಳ್ಳವರು ದೊಡ್ಡ ಮಟ್ಟದಲ್ಲೇ ಪ್ರಭಾವ ಬಳಸುತ್ತಿರುವುದು ದಾಖಲೆಗಳಿಂದ ಬಹಿರಂಗಗೊಂಡಿದೆ.

ಇಲ್ಲಿನ ಅಶೋಕಪುರಂನವರಾದ, ನವದೆಹಲಿಯ ಕರ್ನಾಟಕ ಭವನದ ನೌಕರ ಸಿ. ಮೋಹನ್‌ಕುಮಾರ್ ಅವರು 'ಜಿ–ಪ್ರವರ್ಗ' (ಜಿ ಕೆಟಗರಿ)ದಲ್ಲಿ ತಮಗೆ ಹಂಚಿಕೆಯಾದ ನಿವೇಶನಕ್ಕೆ 'ಬದಲಿ ನಿವೇಶನ' ಮಂಜೂರು ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನಗರಾಭಿವೃದ್ಧಿಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ನಗರಾಭಿವೃದ್ಧಿ ಸಚಿವ ಮೊದಲಾದವರ ಮೂಲಕ ಪ್ರಭಾವ ಬಳಸಿದ್ದಾರೆ. ಈ ಬಗ್ಗೆ ಮಾಹಿತಿ ಹಕ್ಕು ಕಾರ್ಯಕರ್ತ (ಆರ್‌ಟಿಐ) ಗಂಗರಾಜು ಅವರು ದಾಖಲೆಗಳನ್ನು ಪಡೆದಿದ್ದು, ಅವು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ದಾಖಲೆಗಳ ಪ್ರಕಾರ: ಮೋಹನ್‌ಕುಮಾರ್ ಅವರಿಗೆ ಸಾತಗಳ್ಳಿ 2ನೇ ಹಂತ ಬಡಾವಣೆಯಲ್ಲಿ 50x80 ಅಡಿ ಅಳತೆಯ ನಿವೇಶನ (ಸಂಖ್ಯೆ 5,312) 'ಜಿ–ಪ್ರವರ್ಗ'ದಲ್ಲಿ ಮಂಜೂರಾಗಿದ್ದು, ಪಟ್ಟಿಯಲ್ಲಿ ತಪ್ಪಾಗಿದ್ದ ಹೆಸರು ಸರಿಪಡಿಸುವಂತೆ 2005ರಲ್ಲಿ ಆಗಿನ ಶಾಸಕ ಡಿ.ಕೆ.ಶಿವಕುಮಾರ್ ಶಿಫಾರಸು ಪತ್ರ ಕೊಟ್ಟಿದ್ದರು.

2010ರ ಜುಲೈ 17ರಂದು ಆಗಿನ ನಗರಾಭಿವೃದ್ಧಿ ಸಚಿವರ ಟಿಪ್ಪಣಿ ಆಧರಿಸಿ ಇಲಾಖೆಯ ಮುಖ್ಯ ಕಾರ್ಯದರ್ಶಿಯು ಮುಡಾಕ್ಕೆ ಪತ್ರ ಬರೆದು, ಬದಲಿ ನಿವೇಶನಕ್ಕೆ ಪರಿಶೀಲಿಸುವಂತೆ ತಿಳಿಸಿದ್ದರು. ಅದಕ್ಕೆ ಅದೇ ತಿಂಗಳ 29ರಂದು ಪ್ರತಿಕ್ರಿಯಿಸಿದ ಮುಡಾ ಕಾರ್ಯದರ್ಶಿ, 'ಬದಲಿ ನಿವೇಶನ ನೀಡಲು ಅವಕಾಶವಿಲ್ಲ' ಎಂದಿದ್ದರು.

ಬಳಿಕವೂ ಮೋಹನ್‌ಕುಮಾರ್ ಅರ್ಜಿ ಸಲ್ಲಿಸಿದ್ದರು. 2010ರ ಆ.18ರಂದು ಆಗಿನ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಂದ ಪತ್ರ ಬರೆಸಿದ್ದರು. 'ಅರ್ಜಿದಾರರು ಕರ್ನಾಟಕ ಭವನದಲ್ಲಿ 4ನೇ ದರ್ಜೆ ನೌಕರರಾಗಿದ್ದು, ಅವರ ಕುಟುಂಬ ಏಕಾಂಗಿಯಾಗಿ ಸಾತಗಹಳ್ಳಿ 2ನೇ ಹಂತದಲ್ಲಿ ಮನೆ ಕಟ್ಟಿ ವಾಸವಿರಲು ಸಾಧ್ಯವಿರುವುದಿಲ್ಲ. ಅಲ್ಲಿ ಮನೆಗಳು ನಿರ್ಮಾಣವಾಗಿಲ್ಲ. ಮಾನವೀಯ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ಬಡಾವಣೆಯಾದ ವಿಜಯನಗರ 3ನೇ ಹಂತ ಅಥವಾ ದಟ್ಟಗಳ್ಳಿಯಲ್ಲಿ ನಿವೇಶನ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿದೆ' ಎಂದು ಪತ್ರ ನೀಡಿದ್ದರು.

ಮುಖ್ಯಮಂತ್ರಿಯಾದ ಮೇಲೂ: ಮತ್ತೆ 2014ರ ಜ.6ರಂದು ಆಗಿನ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ಅವರಿಂದಲೂ ಮುಡಾಕ್ಕೆ ಪತ್ರ ಬಂದಿತ್ತು. 'ಅವರ ಕೋರಿಕೆ ಅರ್ಜಿ ಸ್ವಯಂ ವೇದ್ಯವಾಗಿದ್ದು, ಅಗತ್ಯ ಕ್ರಮಕ್ಕೆ ಕೋರುವಂತೆ ಮುಖ್ಯಮಂತ್ರಿಯಿಂದ ನಿರ್ದೇಶಿತನಾಗಿದ್ದೇನೆ' ಎಂದು ತಿಳಿಸಿದ್ದರು. ಆಗಲೂ ಬದಲಿ ನಿವೇಶನ ದೊರೆತಿರಲಿಲ್ಲ. ಬಳಿಕ ಅವರು, 2019ರಲ್ಲೂ ಅರ್ಜಿ ಹಾಕಿದ್ದರು. 2020ರಲ್ಲಿ ಹಾಗೂ 2021ರಲ್ಲಿ ಆಗಿನ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಅವರ ಮೂಲಕವೂ ಒತ್ತಡ ತಂದಿದ್ದರು. ಆಗಲೂ 'ಕಾನೂನಿನಲ್ಲಿ ಅವಕಾಶವಿಲ್ಲ' ಎಂದು ಮುಡಾ ತಿಳಿಸಿದೆ.

'ಬದಲಿ ನಿವೇಶನಕ್ಕಾಗಿ ಪ್ರಭಾವಿಗಳು ಹೇಗೆಲ್ಲಾ ಪ್ರಭಾವ ಬಳಸುತ್ತಾರೆ ಎಂಬುದಕ್ಕೆ ಇದು ನಿದರ್ಶನ. ಅವಕಾಶ ಇಲ್ಲವೆಂದು ಅಧಿಕಾರಿಗಳು ತಿಳಿಸಿದರೂ ಹಲವು ಬಾರಿ ಶಿಫಾರಸು ಪತ್ರಗಳನ್ನು ಕೊಡಿಸಿದ್ದಾರೆ. ಅಧಿಕಾರಿಗಳು ಬದಲಾಗುತ್ತಿದ್ದಂತೆಯೇ ಅರ್ಜಿ ಕೊಡಿಸಿದ್ದಾರೆ. ರಾಜಕಾರಣಿಗಳಿಗೆ ಉಳ್ಳವರ ಬಗೆಗಿರುವ ಕಾಳಜಿ ಬಡವರ ಪರ ಏಕಿಲ್ಲ?' ಎಂದು ಆರ್‌ಟಿಐ ಕಾರ್ಯಕರ್ತ ಗಂಗರಾಜು ಕೇಳಿದರು.

'ಅಧಿಕಾರಿಗಳ ದಿಕ್ಕು ತಪ್ಪಿಸಲು ಪದೇ ಪದೇ ಅರ್ಜಿ ಸಲ್ಲಿಸುತ್ತಿರುವ ವ್ಯಕ್ತಿಯನ್ನು ಈ ನಾಯಕರು ಬೆಂಬಲಿಸಿದ್ದಾರೆ. ಒಬ್ಬ ಸರ್ಕಾರಿ ನೌಕರ, ಅಧಿಕಾರಿಗಳ ಮೇಲೆ ಒತ್ತಡ ಹೇರುವುದು, ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿರುವುದು ಹಾಗೂ ಪ್ರಭಾವ ಬಳಸುವುದು ಎಷ್ಟು ಸರಿ?' ಎಂಬ ಪ್ರಶ್ನೆ ಅವರದು.

'ಹಂಚಿಕೆಯಾದ ನಿವೇಶನಕ್ಕೆ ಬದಲಿಯಾಗಿ 'ಅಭಿವೃದ್ಧಿ ಹೊಂದಿದ ಹಾಗೂ ಒಳ್ಳೆಯ ಮೌಲ್ಯವುಳ್ಳ ಸ್ಥಳದಲ್ಲಿ ನಿವೇಶನ ಪಡೆದುಕೊಳ್ಳಲು ಹಲವರು ಪ್ರಯತ್ನಿಸುತ್ತಿರುವುದು ಹಾಗೂ ಅದರಲ್ಲಿ ಹಲವರು ಸಫಲವಾಗಿರುವ ಉದಾಹರಣೆಯೂ ಇದೆ. ಈ ಬಗ್ಗೆಯೂ ತನಿಖೆ ನಡೆಯಬೇಕು' ಎನ್ನುತ್ತಾರೆ ಮುಡಾದ ವ್ಯವಹಾರಗಳನ್ನು ಬಲ್ಲವರು.

ಸುದ್ದಿ 2 ನಿಮಿಷ

ಖರ್ಗೆ ಯಾವಾಗ 'ಏರೋಸ್ಪೇಸ್' ಉದ್ಯಮಿಯಾದರು : ಲಹರ್ ಪ್ರಶ್ನೆ

ಬೆಂಗಳೂರು: 'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಭೂಮಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಹಂಚಿಕೆ ಮಾಡಿರುವುದು ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ ಅಲ್ಲವೇ' ಎಂದು ರಾಜ್ಯಸಭೆ ಬಿಜೆಪಿ ಸದಸ್ಯ ಲಹರ್ ಸಿಂಗ್ ಪ್ರಶ್ನಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ನೀಡಿರುವ ಅವರು, 'ಬೆಂಗಳೂರು ಸಮೀಪದ 'ಹೈಟೆಕ್ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್'ನಲ್ಲಿ ಭೂಮಿ ಹಂಚಿಕೆ ಮಾಡಲು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಇದೇ ಮಾರ್ಚ್‌ನಲ್ಲಿ ಒಪ್ಪಿಗೆ ನೀಡಿದ್ದಾರೆ. ಕೆಐಎಡಿಬಿ ಭೂಮಿ ಪಡೆಯಲು ಖರ್ಗೆ ಕುಟುಂಬ ಯಾವಾಗ 'ಏರೋಸ್ಪೇಸ್ ಉದ್ಯಮಿಗಳಾದರು? ಸ್ವಹಿತಾಸಕ್ತಿ ಸಂಘರ್ಷಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ' ಎಂದು ಟೀಕಿಸಿದ್ದಾರೆ.

'ನಾಗರಿಕ ಸೌಲಭ್ಯಗಳಿಗೆ (ಸಿಎ) ಮೀಸಲಾದ 45.94 ಎಕರೆಯಲ್ಲಿ ಖರ್ಗೆ ಅವರ ಕುಟುಂಬ ನಡೆಸುತ್ತಿರುವ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಐದು ಎಕರೆ ಮಂಜೂರು ಮಾಡಲಾಗಿದೆ. ಖರ್ಗೆ, ಅವರ ಪತ್ನಿ ರಾಧಾಬಾಯಿ ಖರ್ಗೆ, ಅವರ ಅಳಿಯನೂ ಆಗಿರುವ ಗುಲ್ಬರ್ಗ ಸಂಸದ ರಾಧಾಕೃಷ್ಣ, ಮತ್ತೊಬ್ಬ ಪುತ್ರ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಮತ್ತೊಬ್ಬ ಮಗ ರಾಹುಲ್ ಖರ್ಗೆ ಟ್ರಸ್ಟಿಗಳಾಗಿದ್ದಾರೆ' ಎಂದು ಅವರು ಮಾಹಿತಿ ಬಹಿರಂಗಪಡಿಸಿದ್ದಾರೆ.

'ಅಕ್ರಮ ಹಂಚಿಕೆಯ ವಿಷಯ ಆರ್‌ಟಿಐ ಕಾರ್ಯಕರ್ತನ ಮೂಲಕ ಗೌರವಾನ್ವಿತ ರಾಜ್ಯಪಾಲರ ಕಚೇರಿಗೂ ತಲುಪಿದೆ. ಮೈಸೂರಿನ ವಿವಾದಿತ ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಟ್ಟು ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೆಯೇ, ಖರ್ಗೆ ಕುಟುಂಬವೂ ಅಕ್ರಮವಾಗಿ ಪಡೆದ ಭೂಮಿ ಬಿಟ್ಟು ಕೊಡಬೇಕಾಗುತ್ತದೆ' ಎಂದಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–3: ಫಲಿತಾಂಶ ಇಂದು

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಸೋಮವಾರ (ಆಗಸ್ಟ್ 26) ಮಧ್ಯಾಹ್ನ 12ಕ್ಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ–3ರ ಫಲಿತಾಂಶವನ್ನು ಪ್ರಕಟಿಸಲಿದೆ.

ಇದೇ ಆಗಸ್ಟ್ 2ರಿಂದ 9ರವರೆಗೆ 410 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. 67,716 ಬಾಲಕರು, 30,217 ಬಾಲಕಿಯರು ಸೇರಿದಂತೆ ಒಟ್ಟು 97,933 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. 459 ವಿದ್ಯಾರ್ಥಿಗಳು ಫಲಿತಾಂಶ ವೃದ್ಧಿಗಾಗಿ ಮೂರನೇ ಪರೀಕ್ಷೆ ತೆಗೆದುಕೊಂಡಿದ್ದರು.ಮಂಡಳಿಯ ಜಾಲತಾಣ https://karresults.nic.in ನಲ್ಲಿ ಫಲಿತಾಂಶ ವೀಕ್ಷಿಸಬಹುದು.

ನಕಲಿ ಪತ್ರ ನೀಡಿ ಶಾಮನೂರು ಪಿ.ಎ ಹುದ್ದೆ ಗಿಟ್ಟಿಸಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಕಲಿ ಲೆಟರ್‌ಹೆಡ್ ಮತ್ತು ಸಹಿ ಬಳಸಿಕೊಂಡು, ಅವರ ಆಪ್ತ ಸಹಾಯಕರಾಗಿ ವಿಧಾನಸಭಾ ಸಚಿವಾಲಯದಿಂದ ಮಹಿಳೆಯೊಬ್ಬರು ನೇಮಕಾತಿ ಆದೇಶ ಪಡೆದಿದ್ದಾರೆ.

ಈ ಸಂಬಂಧ ವಿಧಾನಸಭಾ ಸಚಿವಾಲಯದ ಅಧೀನ ಕಾರ್ಯದರ್ಶಿ ಲಲಿತಾ ಅವರು ನೀಡಿರುವ ದೂರು ಆಧರಿಸಿ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರು ನಿವಾಸಿ ಕೆ.ಸಿ. ವಿನುತಾ ಅವರ ಪತಿ ಸ್ವಾಮಿ ಎಂಬಾತನನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ವಿನುತಾಗೆ ನೋಟಿಸ್ ಜಾರಿ ಮಾಡಲಾಗಿದೆ.

'ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರಿನ ವಿನುತಾ ಅವರನ್ನು ತಮ್ಮ ಆಪ್ತ ಸಹಾಯಕರನ್ನಾಗಿ ನೇಮಿಸುವಂತೆ ಶಾಸಕರು ಮನವಿ ಮಾಡಿರುವಂತೆ ಶಾಸಕರ ಲೆಟರ್‌ಹೆಡ್‌ನಲ್ಲಿ ಪತ್ರ ತಯಾರಿಸಿ, ಸಹಿ ಮಾಡಿ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಶಾಮನೂರು ಶಿವಶಂಕರಪ್ಪ ಅವರೇ ನೀಡಿರುವ ಪತ್ರವೆಂದು ಭಾವಿಸಿದ್ದ ಸಚಿವಾಲಯದ ಅಧಿಕಾರಿಗಳು, ವಿನುತಾ ಅವರನ್ನು ಆಪ್ತ ಸಹಾಯಕರನ್ನಾಗಿ ನೇಮಿಸಿ ಆದೇಶ ಹೊರಡಿಸಿದ್ದರು. ವಿನುತಾ ಅವರು ಕೆಲಸ ಮಾಡದೆಯೇ 11 ತಿಂಗಳು ಸಂಬಳ ಪಡೆದಿದ್ದರು. ಬಳಿಕ ತಾವು ಪತ್ರ ನೀಡಿಲ್ಲ, ಅದು ನಕಲಿ ಎಂದು ಶಿವಶಂಕರಪ್ಪ ಅವರು ವಿಧಾನಸಭಾ ಸಚಿವಾಲಯದ ಗಮನಕ್ಕೆ ತಂದರು' ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕರ ಸಹಿ ಫೋರ್ಜರಿ ಮಾಡಿದ್ದ ವಿನುತಾ ಪತಿಯನ್ನು ಬಂಧಿಸಲಾಗಿದೆ. ವಿನುತಾ ಅವರ ವಿಚಾರಣೆ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಸಿ.ಎಂ ಬೆನ್ನಿಗೆ ನಿಂತ 10 ಮಠಾಧೀಶರು

ಶೋಷಿತ ಸಮುದಾಯಗಳ ಸ್ವಾಮೀಜಿಗಳ ಒಕ್ಕೂಟದಿಂದ ನೈತಿಕ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಹಲವು ಸಂಘಟನೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆನ್ನಿಗೆ ನಿಂತಿದ್ದು, ಈಗ ಹಿಂದುಳಿದ ವರ್ಗ, ದಲಿತ ಹಾಗೂ ಶೋಷಿತ ಸಮುದಾಯಗಳ ಸ್ವಾಮೀಜಿಗಳ ಒಕ್ಕೂಟ ಕೂಡಾ ಅವರಿಗೆ ನೈತಿಕ ಬೆಂಬಲ ನೀಡಿದೆ.

ಸಿದ್ದರಾಮಯ್ಯ ಅವರನ್ನು 'ಕಾವೇರಿ' ನಿವಾಸದಲ್ಲಿ ಭಾನುವಾರ ಭೇಟಿ ಮಾಡಿದ 10 ಸ್ವಾಮೀಜಿಗಳನ್ನು ಒಳಗೊಂಡ ನಿಯೋಗ, ಸಿದ್ದರಾಮಯ್ಯ ಅವರಿಗೆ ಆತ್ಮಸ್ಥೈರ್ಯ ತುಂಬಿತು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಖಾಸಗಿ ದೂರು ಆಧರಿಸಿ ವಿಚಾರಣೆಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮವನ್ನು ನಿಯೋಗದಲ್ಲಿದ್ದ ಸ್ವಾಮೀಜಿಗಳು ಖಂಡಿಸಿದರು.

'ಪ್ರಜಾಸತ್ತಾತ್ಮಕ ರೀತಿಯಲ್ಲಿ ಜನರಿಂದ ಚುನಾಯಿತವಾದ ಸರ್ಕಾರವನ್ನು ಅಸ್ಥಿರಗೊಳಿಸುವ ಕೆಲಸವನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿವೆ. ಕೇಂದ್ರ ಸರ್ಕಾರ ಹಾಗೂ ರಾಜಭವನ ಷಡ್ಯಂತ್ರ ನಡೆಸಿವೆ. ಸರ್ಕಾರ ಪತನಗೊಳಿಸುವ, ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಪ್ರಯತ್ನ ಮುಂದುವರಿಸಿದರೆ ಹೋರಾಟ ನಡೆಸಲಾಗುತ್ತದೆ' ಎಂದು ಎಚ್ಚರಿಸಿದರು.

ಮಾದಾರ ಚನ್ನಯ ಗುರು ಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಕಾಗಿನೆಲೆ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ, ಈಶ್ವರಾನಂದ ಪುರಿ ಮಹಾಸ್ವಾಮೀಜಿ, ಕನಕ ಗುರುಪೀಠ ಕುಂಚಿಟಿಗ ಮಹಾ ಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ನಾರಾಯಣ ಗುರುಪೀಠ ರೇಣುಕಾನಂದ ಸ್ವಾಮೀಜಿ, ಮಡಿವಾಳ ಗುರು ಪೀಠದ ಬಸವ ಭಾರತಿ ಅಪ್ಪಣ್ಣ ಸ್ವಾಮೀಜಿ, ಮಾಚಿದೇವ ಸ್ವಾಮೀಜಿ, ಹಡಪದ ಸರೂರು ಪೀಠದ ಶಾಂತಮ್ಮಯ್ಯ ಅಪ್ಪಣ್ಣ ಗುರು ಪೀಠದ ಅನ್ನದಾನಿ ಸ್ವಾಮೀಜಿ ನಿಯೋಗದಲ್ಲಿದ್ದರು.

'ಪಟ್ಟಭದ್ರರು ಹೆಣೆದ ಷಡ್ಯಂತ್ರ'

ಬೆಂಗಳೂರು: 'ಮುಡಾ ವಿಚಾರ ಮೇಲ್ನೋಟಕ್ಕೆ ರಾಜಕೀಯ ಸಂಘರ್ಷವೆನಿಸಿದರೂ ಆಂತರ್ಯದಲ್ಲಿ ಹಿಂದುಳಿದ ಜಾತಿಗೆ ಸೇರಿದ ನಾಯಕನೊಬ್ಬನ ಏಳಿಗೆ ಸಹಿಸದ ಪಟ್ಟಭದ್ರರು ಕುತಂತ್ರದಿಂದ ಹೆಣೆದ ಷಡ್ಯಂತ್ರ ಎಂಬುದು ಸೂರ್ಯ ಚಂದ್ರರಷ್ಟೇ ಸತ್ಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ತಮ್ಮ 'X' ಖಾತೆಯಲ್ಲಿ ಈ ಬಗ್ಗೆ ಬರೆದುಕೊಂಡಿರುವ ಅವರು, 'ಬುದ್ಧ, ಬಸವ, ಬಾಬಾ ಸಾಹೇಬ್, ಕನಕದಾಸರು, ನಾರಾಯಣ ಗುರುಗಳ ಆಶಯದಂತೆ ಸಮಸಮಾಜದ ಸ್ಥಾಪನೆಗಾಗಿ ಶೋಷಿತ, ಅವಕಾಶ ವಂಚಿತ, ದೀನದಲಿತ, ಬಡಜನರ ಕಲ್ಯಾಣಕ್ಕಾಗಿ ದುಡಿಯುತ್ತಿರುವ ನಾನು ಪಟ್ಟಭದ್ರ ಹಿತಾಸಕ್ತಿಗಳಿಗೆ ಕಳೆದ 40 ವರ್ಷಗಳಿಂದ ದೊಡ್ಡ ಸವಾಲಾಗಿದ್ದೇನೆ. ನನ್ನನ್ನು ಮೂಲೆಗೆ ಸರಿಸುವ ಮೂಲಕ ಸಮಾಜದ ಬಹುಸಂಖ್ಯಾತ ಜನರ ಧ್ವನಿಯನ್ನು ಅಡಗಿಸುವ ಪ್ರಯತ್ನ ಇಂದು ನಡೆಯುತ್ತಿದೆ' ಎಂದಿದ್ದಾರೆ.

'ಮುಡಾ ವಿಚಾರದಲ್ಲಿ ನನ್ನ ವಿರುದ್ಧ ಷಡ್ಯಂತ್ರ ರೂಪಿಸಿ, ನನ್ನನ್ನು ರಾಜಕೀಯವಾಗಿ ಮುಗಿಸಲು ಹೊರಟಿರುವ ಎದುರಾಳಿಗಳ ಕುಟಿಲ ಕಾರಸ್ಥಾನವನ್ನು ಅರ್ಥ ಮಾಡಿಕೊಂಡು ಬಹಳಷ್ಟು ಸ್ವಾಮೀಜಿಗಳು ನೈತಿಕವಾಗಿ ನನ್ನ ಬೆಂಬಲಕ್ಕೆ ನಿಂತು ಇಡೀ ಸಮಾಜಕ್ಕೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ. ಸತ್ಯ ನನ್ನ ಜತೆ ಇದೆ. ಸತ್ಯದ ಜತೆ ನಾನಿದ್ದೇನೆ' ಎಂದೂ ಹೇಳಿದ್ದಾರೆ.

'ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಭೂಮಿ ಬಳಕೆ: ಶ್ವೇತಪತ್ರ ಹೊರಡಿಸಿ'

ಪ್ರಜಾವಾಣಿ ವಾರ್ತೆ

ಬಡಗಲಪುರ ನಾಗೇಂದ್ರ

ಸಂಡೂರು(ಬಳ್ಳಾರಿ ಜಿಲ್ಲೆ) : 'ರಾಜ್ಯದಲ್ಲಿ ರೈತರಿಂದ ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಎಷ್ಟು ಭೂಮಿ ಪಡೆಯಲಾಗಿದೆ? ಅವುಗಳಲ್ಲಿ ನೈಜ ಬಳಕೆ ಎಷ್ಟು? ಉದ್ಯೋಗ ಸೃಷ್ಟಿ ಎಷ್ಟು? ಕೃಷಿಭೂಮಿ ಕಳೆದುಕೊಂಡ ಕೃಷಿಕರ ಪರಿಸ್ಥಿತಿ ಏನಾಗಿದೆ? ಎಂಬುದರ ಕುರಿತು ಕೈಗಾರಿಕಾ ಸಚಿವ ಎಂ.ಬಿ ಪಾಟೀಲ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಶ್ವೇತ ಪತ್ರ ಹೊರಡಿಸಬೇಕು' ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದ್ದಾರೆ.

ಸಂಡೂರಿನ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇವರಿಬ್ಬರೂ ಅವಿವೇಕಿ ರಾಜಕಾರಣಿಗಳು. ಆಡಳಿತ ಪ್ರಜ್ಞೆ ಇಲ್ಲದವರು ಮತ್ತು ಹಸಿವಿನ ಜ್ಞಾನ ಇಲ್ಲದವರು' ಎಂದು ಡಿಕೆಶಿ ಹಾಗೂ ಎಂ.ಬಿ ಪಾಟೀಲ ವಿರುದ್ಧ ಹರಿಹಾಯ್ದರು.

'ಜಿಂದಾಲ್ ಕಂಪನಿಗೆ 3,667 ಎಕರೆ ಭೂಮಿ ಮಂಜೂರು ವಿಚಾರಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ ಹೂಡಿಕೆದಾರರಿಗೆ ತಪ್ಪು ಮಾಹಿತಿ ಹೋಗಬಾರದೆಂದು ಭೂಮಿ ಮಂಜೂರು ಮಾಡಿದ್ದೇವೆ ಎನ್ನುತ್ತಾರೆ. ಈ ನೆಲದ ಬದುಕು ಸರ್ಕಾರಿ ಸಂಪತ್ತಲ್ಲ. ಕೈಗಾರಿಕಾ ಸಚಿವರಾಗಿ ಎಷ್ಟು ದಾಸ್ಯದ ಮನೋಭಾವ ಹೊಂದಿದ್ದೀರಿ?' ಎಂದು ಟೀಕಿಸಿದರು.

'ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಕೂಡ, 'ರಾಜ್ಯದಲ್ಲಿ ಕೈಗಾರಿಕೆ ಬೆಳೆದರೆ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ. ಜಿಂದಾಲ್ ಕಂಪನಿಯು ₹90 ಸಾವಿರ ಕೋಟಿ ಬಂಡವಾಳ ಹಾಕಿ,50 ಸಾವಿರ ಜನರಿಗೆ ಉದ್ಯೋಗ ಒದಗಿಸಿದೆ. ಹೀಗಾಗಿ ಮಂಜೂರು ಮಾಡಿದ್ದೇವೆ' ಎನ್ನುತ್ತಾರೆ. ದೇಶದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿ ಮಾಡುವುದು ಕೃಷಿ ಕ್ಷೇತ್ರ ಎಂಬುದನ್ನು ಅವರು ಅರಿಯಬೇಕು. ಶೇ 63 ರಷ್ಟು ಕೃಷಿ ಕ್ಷೇತ್ರವೇ ಉದ್ಯೋಗ ಸೃಷ್ಟಿಸುತ್ತಿದೆ. ಒಂದು ಎಕರೆ ಜಮೀನಿದ್ದರೆ ವಂಶ ಪಾರಂಪರ್ಯವಾಗಿ ಐವರು ಬದುಕುತ್ತಾರೆ. ಕೃಷಿ ಕ್ಷೇತ್ರ ಯಾವತ್ತೂ ಪರಿಸರಕ್ಕೆ ಹಾನಿ ಮಾಡಲ್ಲ. ಸಮಾಜಕ್ಕೂ ಆಹಾರ ಭದ್ರತೆ ನೀಡುತ್ತದೆ' ಎಂದು ಹೇಳಿದರು.

ಕಬಡ್ಡಿ...ಕಬಡ್ಡಿ...

ಉಡುಪಿಯ ಕೃಷ್ಣ ಮಠದಲ್ಲಿ ಶ್ರೀಕೃಷ್ಣ ಮಾಸೋತ್ಸವದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಕಬಡ್ಡಿ ಸ್ಪರ್ಧೆಗೆ ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು ಕಿರಿಯ ಶ್ರೀಪಾದರ ಜೊತೆ ಕಬಡ್ಡಿ ಆಡುವ ಮೂಲಕ ಚಾಲನೆ ನೀಡಿದರು

ಜಿಂದಾಲ್‌ಗೆ ಜಮೀನು: ಸಚಿವ ಎಂ.ಬಿ.ಪಾಟೀಲ ಸ್ಪಷ್ಟನೆ

'ಬಿಎಸ್‌ವೈ ಸರ್ಕಾರದ ತೀರ್ಮಾನ ಜಾರಿ'

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: 'ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಜಿಂದಾಲ್ ಕಂಪನಿಗೆ 3,666 ಎಕರೆ ಕೊಡಲು ತೀರ್ಮಾನಿಸಿ, 2021ರ ಮೇ 5ರಂದು ಸರ್ಕಾರಿ ಆದೇಶ ಹೊರಡಿಸಿತ್ತು. ಹೈಕೋರ್ಟ್ ಸೂಚನೆಯಂತೆ ಅದೇ ಆದೇಶವನ್ನು ಜಾರಿ ಮಾಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಇಲ್ಲಿ ಯಾವ ಅಕ್ರಮವೂ ಇಲ್ಲ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

'ಈ ವಿಷಯದಲ್ಲಿ ಸರ್ಕಾರ ಒಳ ಒಪ್ಪಂದ ಮಾಡಿಕೊಂಡಿದೆ ಎನ್ನುವ ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರ ಆರೋಪ ನಿರಾಧಾರ. ಒಂದು ವೇಳೆ ಒಳ ಒಪ್ಪಂದ ಆಗಿದ್ದರೆ ಅದು ಅವರದ್ದೇ ಪಕ್ಷದ ಸರ್ಕಾರದ ಜತೆ ಆಗಿರಬೇಕು' ಎಂದು ಅವರು ಆರೋಪಿಸಿದರು.

'ಯಡಿಯೂರಪ್ಪ ಸರ್ಕಾರದ ಆದೇಶ ಜಾರಿಯಾಗದ ಕಾರಣ ಜಿಂದಾಲ್ ಕಂಪನಿ ಹೈಕೋರ್ಟ್‌ಗೆ ಹೋಯಿತು. ಆ ಆದೇಶವನ್ನು ಪಾಲಿಸುವಂತೆ ಹೈಕೋರ್ಟ್ ಸೂಚಿಸಿತು. ಅದರಂತೆ ನಮ್ಮ ಸರ್ಕಾರ ನಡೆದುಕೊಂಡಿದೆ' ಎಂದರು.

'ಜಿಂದಾಲ್ ಕಂಪನಿ ರಾಜ್ಯದಲ್ಲಿ ₹ 90 ಸಾವಿರ ಕೋಟಿ ಹೂಡಿಕೆ ಮಾಡಿ, 50 ಸಾವಿರ ಜನರಿಗೆ ಉದ್ಯೋಗ ನೀಡಿದೆ. ಸರ್ಕಾರದ ಷರತ್ತುಗಳನ್ನು ಪಾಲಿಸಿದ ನಂತರವೂ ಅವರಿಗೆ ಜಮೀನಿನ ಗುತ್ತಿಗೆ ಮಾರಾಟ ಮಾಡದಿದ್ದರೆ ಹೂಡಿಕೆ ವಲಯಕ್ಕೆ ಕೆಟ್ಟ ಸಂದೇಶ ಹೋಗುತ್ತದೆ. ಇದು ಹೂಡಿಕೆಗೆ ಮಾರಕ' ಎಂದೂ ಹೇಳಿದರು.

'ಬಿಜೆಪಿಯಿಂದ ₹137 ಕೋಟಿ ನಷ್ಟ'

'ದೇವನಹಳ್ಳಿ ಸಮೀಪದ ಕೈಗಾರಿಕಾ ಪ್ರದೇಶದಲ್ಲಿ ಚಾಣಕ್ಯ ವಿಶ್ವವಿದ್ಯಾಲಯಕ್ಕೆ 116 ಎಕರೆಯನ್ನು ಭಾರಿ ರಿಯಾಯಿತಿ ದರದಲ್ಲಿ ಹಿಂದಿನ ಬಿಜೆಪಿ ಸರ್ಕಾರ ನೀಡಿದೆ. ಬಿಜೆಪಿ ಸರ್ಕಾರದ ನಿರ್ಧಾರದಿಂದ ಬೊಕ್ಕಸಕ್ಕೆ ₹137 ಕೋಟಿ ನಷ್ಟವಾಗಿದೆ' ಎಂದು ಎಂ.ಬಿ.ಪಾಟೀಲ ಆರೋಪಿಸಿದರು.

'ನಾವು ಬಿಜೆಪಿಯಂತೆ ಯಾವ ರಿಯಾಯಿತಿಯನ್ನೂ ಕೊಟ್ಟಿಲ್ಲ. 20 ವರ್ಷಗಳ ಹಿಂದೆ ಇದ್ದ ಮಾರುಕಟ್ಟೆ ದರವನ್ನು ಆಧರಿಸಿಯೇ ದರ ನಿಗದಿ ಮಾಡಲಾಗಿದೆ. ಅದರಂತೆ ಈಗ ಶುದ್ಧ ಕ್ರಯಪತ್ರ ಮಾಡಿಕೊಡಬೇಕಿದೆ' ಎಂದರು.

ಸಂಕ್ಷಿಪ್ತ ಸುದ್ದಿ

'ಅಕ್ಕ ಸಮ್ಮೇಳನ: ಸಚಿವಾಲಯ ಸ್ಪಷ್ಟನೆ

ಬೆಂಗಳೂರು: ಅಮೆರಿಕದ ವರ್ಜೀನಿಯಾ ರಾಜ್ಯದ ರಿಚ್‌ಮಂಡ್ ನಗರದಲ್ಲಿ 'ಅಮೆರಿಕ ಕನ್ನಡ ಕೂಟಗಳ ಆಗರ (ಅಕ್ಕ)' ವತಿಯಿಂದ ನಡೆಯಲಿರುವ 12ನೇ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಚಿವಾಲಯದ ಯಾವುದೇ ಅಧಿಕಾರಿ ಭಾಗವಹಿಸುತ್ತಿಲ್ಲ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಜೊತೆ ತೆರಳುವವರ ಪಟ್ಟಿಯಲ್ಲಿ ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ ವೆಂಕಟೇಶಯ್ಯ ಮತ್ತು ಜಂಟಿ ಕಾರ್ಯದರ್ಶಿ ಬಿ. ಶಿವಸ್ವಾಮಿ ಅವರ ಹೆಸರು ಇತ್ತು. ಅಲ್ಲದೆ, ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಅವರ ನೇತೃತ್ವದ ತಂಡದ ಪಟ್ಟಿಯಲ್ಲಿಯೂ ವೆಂಕಟೇಶಯ್ಯ ಅವರ ಹೆಸರು ಇತ್ತು. ಆ ಎರಡೂ ಪಟ್ಟಿಗೆ ಮುಖ್ಯಮಂತ್ರಿ ಅನುಮೋದನೆ ನೀಡಿದ್ದರು.

ಆದರೆ, ಈ ಇಬ್ಬರು ಅಧಿಕಾರಿಗಳು ಅಕ್ಕ ಸಮ್ಮೇಳನದಲ್ಲಿ ಭಾಗವಹಿಸುತ್ತಿಲ್ಲ ಎಂದು ಸಚಿವಾಲಯದ ಮೂಲಗಳು ಸ್ಪಷ್ಟಪಡಿಸಿವೆ.

ವಿಶೇಷ ರೈಲು ವಿಸ್ತರಣೆ

ಬೆಂಗಳೂರು: ಪ್ರಯಾಣಿಕರ ದಟ್ಟಣೆ ಕಡಿಮೆಗೊಳಿಸಲು ದಾನಪುರದ ವಿಶೇಷ ರೈಲುಗಳ ಸಂಚಾರವನ್ನು ಮತ್ತೆರಡು ವಾರ ವಿಸ್ತರಿಸಲು ರೈಲ್ವೆ ನಿರ್ಧರಿಸಿದೆ.

ಬೆಂಗಳೂರು ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್– ಬಿಹಾರದ ದಾನಪುರ ನಡುವೆ ವಾರಕ್ಕೊಮ್ಮೆ ಸಂಚರಿಸುವ ಎಂಟು ರೈಲುಗಳು ಆಗಸ್ಟ್ 28ರಿಂದ ಸೆಪ್ಟೆಂಬರ್ 7ರವರೆಗೆ ಒಟ್ಟು 14 ಟ್ರಿಪ್‌ಗಳನ್ನು ನಡೆಸಲಿವೆ. ಅದೇ ರೀತಿ ವಾರಕ್ಕೆ ಎರಡು ಬಾರಿ ಸಂಚರಿಸುವ ಎರಡು ರೈಲುಗಳು ತಲಾ ಎರಡು ಬಾರಿ ಹೆಚ್ಚುವರಿಯಾಗಿ ಸಂಚರಿಸಲಿವೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸ್‌ಗಳ ಪ್ರವೇಶದ ಮೊದಲ ಸುತ್ತಿನ ಅಣಕು ಸೀಟು ಹಂಚಿಕೆ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಆ. 27ರ ಬೆಳಿಗ್ಗೆ 11ರವರೆಗೆ ಅಭ್ಯರ್ಥಿಗಳು ಕಾಲೇಜು, ಕೋರ್ಸ್‌ಗಳನ್ನು ಬದಲಿಸಿಕೊಳ್ಳಬಹುದು. ನಿಗದಿಯಂತೆ ಮೊದಲ ಸುತ್ತಿನ ನೈಜ ಸೀಟು ಹಂಚಿಕೆ ಫಲಿತಾಂಶವನ್ನು ಸೆ. 1ರಂದು ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವಿವರಗಳಿಗೆ http://kea.kar.nic.in ಸಂಪರ್ಕಿಸಬೇಕು ಎಂದು ಮಾಹಿತಿ ನೀಡಿದ್ದಾರೆ.

ತನಿಖೆಗೆ ಬಿಆರ್‌ಎಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ರಾಜ್ಯದಲ್ಲಿ ಚುನಾವಣೆಗೆ ಕಾಂಗ್ರೆಸ್ ಮುಖಂಡರು, ಕರ್ನಾಟಕದಿಂದ ಅಕ್ರಮವಾಗಿ ವರ್ಗಾವಣೆ ಆಗಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಬಳಸಿದ್ದಾರೆ ಎಂದು ಬಿಆರ್‌ಎಸ್ ಪಕ್ಷ ಆರೋಪಿಸಿದೆ.

ಪಕ್ಷದ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಅವರು, 'ಪ್ರಕರಣದ ತನಿಖೆ ನಡೆಸುತ್ತಿರುವ ಕರ್ನಾಟಕದ ಎಸ್‌ಐಟಿ ಉಲ್ಲೇಖಿಸಿರುವ ಬ್ಯಾಂಕ್ ಖಾತೆಗಳ ವಿವರ ಬಹಿರಂಗಪಡಿಸಲಿ' ಕಾಂಗ್ರೆಸ್ ಮುಖಂಡರಿಗೆ ಆಗ್ರಹಪಡಿಸಿದ್ದಾರೆ. 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣಕ್ಕೂ ತೆಲಂಗಾಣದ ರಾಜಕಾರಣಿಗಳು, ಉದ್ಯಮಿಗಳಿಗೂ ಸಂಪರ್ಕವಿದೆ. ನಿಗಮದ ₹45 ಕೋಟಿ ವರ್ಗಾವಣೆ ಆಗಿದೆ ಎನ್ನಲಾದ ಬ್ಯಾಂಕ್‌ಗಳ 9 ಖಾತೆಗಳು ಯಾರ ಹೆಸರಿನಲ್ಲಿವೆ, ವಿ6 ಬ್ಯುಸಿನೆಸ್‌ನ ಮಾಲೀಕರು ಯಾರು? ಲೋಕಸಭೆ ಚುನಾವಣೆ ವೇಳೆ ಹಣ ಪಡೆದಿದ್ದ ಬಾರ್‌ಗಳು, ಚಿನ್ನದ ಮಳಿಗೆಗಳ ಮಾಲೀಕರಾರು? ಇವರಿಗೂ ಕಾಂಗ್ರೆಸ್ ಪಕ್ಷಕ್ಕೂ ಏನು ಸಂಬಂಧ' ಎಂದು ಪ್ರಶ್ನಿಸಿದ್ದಾರೆ.

ವಿಚಾರಗೋಷ್ಠಿಯಲ್ಲಿ ಪರಿಸರವಾದಿ ಕಲ್ಕುಳಿ ವಿಠಲ್ ಹೆಗ್ಡೆ ಅಭಿಮತ

'ಮಲೆನಾಡು, ಮಲೆನಾಡಿಗರು ಉಳಿಯಬೇಕು'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬೃಹತ್ ಕಾಮಗಾರಿಗಳ ಹಿಂದೆ ಹಣದೋಚುವ ಪ್ರವೃತ್ತಿ
- ಪರಿಸರ ನಾಶ ತಡೆಗೆ ಬೇಕಿದೆ ಪ್ರಬಲ ಜನಪರ ಚಳವಳಿ
- ಮಲೆನಾಡಿನ ಪ್ರವಾಸೋದ್ಯಮಕ್ಕೆ ಪ್ರತ್ಯೇಕ ನಿಯಮ

ಬೆಂಗಳೂರು: 'ಅರಣ್ಯದ ಜೊತೆಗಿನ ಮಲೆನಾಡಿಗರ ಒಡನಾಟ ಅರಿಯದೆ, ಸ್ಥಳೀಯ ವಿಚಾರಗಳನ್ನು ಪರಿಗಣಿಸದೆ, ಕೇವಲ ಕಸ್ತೂರಿ ರಂಗನ್–ಗಾಡ್ಗೀಳ್ ವರದಿ ಆಧಾರದಲ್ಲಿ ಪಶ್ಚಿಮಘಟ್ಟ ಸಂರಕ್ಷಣೆ ಅಸಾಧ್ಯ' ಎಂದು ಪರಿಸರವಾದಿ ಕಲ್ಕುಳಿ ವಿಠಲ್ ಹೆಗ್ಡೆ ಅಭಿಪ್ರಾಯಪಟ್ಟರು.

ಮಲೆನಾಡಿಗರ ಸಾಂಸ್ಕೃತಿಕ ಸಂಘಟನೆ ಸಹ್ಯಾದ್ರಿ ಸಂಘ ಭಾನುವಾರ ಹಮ್ಮಿಕೊಂಡಿದ್ದ 'ಮಲೆನಾಡಿನಲ್ಲಿ ಭೂಹಕ್ಕು ಮತ್ತು ಅರಣ್ಯ ಕಾಯ್ದೆಗಳಿಗೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಮಾರ್ಗೋಪಾಯಗಳು' ವಿಷಯದ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಕಸ್ತೂರಿ ರಂಗನ್, ಗಾಡ್ಗೀಳ್ ವರದಿಗಳು ಕೇವಲ ಹವಾಮಾನ ಬದಲಾವಣೆ, ಜಾಗತಿಕ ಸಮಸ್ಯೆಗಳನ್ನು ಪರಿಗಣಿಸಿ ಜೀವವೈವಿಧ್ಯ ಉಳಿಸಲು ಸಿದ್ಧಪಡಿಸಲಾಗಿದೆ. ವರದಿಗಳ ಆಧಾರದಲ್ಲಿ ಪಶ್ಚಿಮಘಟ್ಟದ ಭೂಕುಸಿತ ತಡೆಯಲು ಸಾಧ್ಯವಿಲ್ಲ. 50 ಮರ, ಗಿಡ ಇರುವ ಜಮೀನನ್ನು ಅರಣ್ಯವೆಂದು ವ್ಯಾಖ್ಯಾನಿಸಿದ ಕೋರ್ಟ್ ತೀರ್ಪು ಒಪ್ಪಲು ಆಗದು. ದಶಕಗಳ ಹಿಂದೆ ರೂಪಿಸಿದ ಅರಣ್ಯದ ವ್ಯಾಖ್ಯಾನ ಬದಲಾಗಬೇಕು. ಮಲೆನಾಡು, ಮಲೆನಾಡಿಗರು ಇಬ್ಬರೂ ಉಳಿಯಬೇಕು. ಇಲ್ಲದಿದ್ದರೆ ಮಲೆನಾಡಿನ ಜನರು ನೆಮ್ಮದಿಯಾಗಿ ಜೀವಿಸಲು ಸಾಧ್ಯವಿಲ್ಲ' ಎಂದರು.

'ಗುಡ್ಡ ಕುಸಿತಕ್ಕೆ ಬೇರೆಯದೇ ವೈಜ್ಞಾನಿಕ ಕಾರಣಗಳಿವೆ. ಗುಡ್ಡದ ಬುಡಕ್ಕೆ ಆಪತ್ತು ಬಾರದಂತೆ ನೋಡಿಕೊಳ್ಳಬೇಕಿದೆ. ಕೇರಳದಲ್ಲಿ ಶತಮಾನದ ಹಿಂದೆ ಇಂತಹ ಘೋರ ಘಟನೆಗಳು ನಡೆದಿವೆ. ಗುಡ್ಡಗಳ ಸಂರಚನೆ ಬಂಡೆ ಹಾಗೂ ಮಣ್ಣಿನ ಸಮ್ಮಿಶ್ರಣ. ಕಡಿಮೆ ಅವಧಿಯಲ್ಲಿ ಹೆಚ್ಚು ಮಳೆ ಬಂದರೆ ಅಪಾಯವಾಗುತ್ತದೆ. ವಯನಾಡ್‌ನಲ್ಲಿ ಈಚೆಗೆ ನಡೆದ ಘಟನೆಗೆ ಒಂದೇ ದಿನ ಸುರಿದ ಮಳೆಯ ಪ್ರಮಾಣ ಕಾರಣ. ಜಾಗತಿಕ ತಾಪಮಾನ, ಹವಾಮಾನ ಬದಲಾವಣೆಗಳಿಂದ ಮಳೆಯ ಪ್ರಮಾಣದಲ್ಲಿ ದಿಢೀರ್ ಏರಿಕೆಯಾಗಿದೆ. ಸಮುದ್ರವನ್ನೇ ಕೊಚ್ಚೆ ಮಾಡಿದ್ದರಿಂದ ವಿಷಾನಿಲ ಹೀರಿಕೊಳ್ಳುವ ಶಕ್ತಿ ಕಳೆದುಕೊಂಡಿದೆ. ಇಂತಹ ಎಲ್ಲ ಅಂಶಗಳನ್ನು ಪರಿಗಣಿಸಿ, ಸಮಗ್ರ ಯೋಜನೆ ರೂಪಿಸಿದಾಗ ಪಶ್ಚಿಮಘಟ್ಟ ಉಳಿಸಲು ಸಾಧ್ಯ ಎಂದು ಹೇಳಿದರು.

ಬೆಂಗಳೂರಿನಲ್ಲಿ ಭಾನುವಾರ 'ಸಹ್ಯಾದ್ರಿ ಸಂಘ' ಆಯೋಜಿಸಿದ್ದ ವಿಚಾರಗೋಷ್ಠಿ (ಎಡದಿಂದ) ಕಲ್ಕುಳಿ ವಿಠಲ್ ಹೆಗ್ಡೆ, ಆರಗ ಜ್ಞಾನೇಂದ್ರ, ಪ್ರಕಾಶ್ ಕಮ್ಮರಡಿ, ಬಿ.ಎ ರಮೇಶ್ ಹೆಗ್ಡೆ ಮಾತುಕತೆಯಲ್ಲಿ ತೊಡಗಿದ್ದರು —ಪ್ರಜಾವಾಣಿ ಚಿತ್ರ

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ, 'ದೊಡ್ಡ ಒತ್ತುವರಿ ತೆರವುಗೊಳಿಸಲು ಮಲೆನಾಡಿಗರ ವಿರೋಧವಿಲ್ಲ. ಆದರೆ, ಅಡೆತಡೆ ಇಲ್ಲದೆ ನಡೆಯುತ್ತಿರುವ ನಗರೀಕರಣ, ಅಭಿವೃದ್ಧಿ ಕಾರ್ಯಗಳು, ಪ್ರವಾಸೋದ್ಯಮಕ್ಕೆ ನೀಡುತ್ತಿರುವ ಆದ್ಯತೆಗಳ ಫಲವಾಗಿ ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ ಕುಗ್ಗುತ್ತಿದೆ. ಅತ್ತ ಗಿಡ, ಮರ ಬೆಳೆಸುವ ಮೂಲಕ ಹಸಿರು ಕವಚ ಬೆಳೆಸುತ್ತಿರುವ ರೈತರನ್ನು ಬಲಿಪಶು ಮಾಡಲಾಗುತ್ತಿದೆ' ಎಂದು ದೂರಿದರು.

ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಕಾರ್ಯಕರ್ತರಾದ ಬಿ.ಎ.ರಮೇಶ್ ಹೆಗ್ಡೆ, ಎನ್.ಎಸ್. ಶ್ರೀಧರಮೂರ್ತಿ, ಡಿ.ಸಿ.ಶ್ರೀಧರ್ ಇದ್ದರು.

ಕೃಷ್ಣನ ಕೊಳಲಿನ ಕರೆ...

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಕೃಷ್ಣ ಜನ್ಮಾಷ್ಟಮಿ

ಶ್ರೀಕೃಷ್ಣ ಎಂದ ಕೂಡಲೇ ನಮಗೆ ನೆನಪಾಗುವ ಸಂಗತಿಗಳಲ್ಲಿ ಒಂದು: ಕೊಳಲು. 'ಕೃಷ್ಣನ ಕೊಳಲಿನ ಕರೆ' – ಇದು ನಿರಂತರವಾದುದು; ಅಂದೂ ಇಂದೂ ಮುಂದೂ ನುಡಿಯುತ್ತಿರುವ ಕರೆ. ಆದರೆ ನಮಗೆ ಇದು ಕೇಳುತ್ತಿಲ್ಲವಲ್ಲ?! ಇದು ದೊಡ್ಡ ಸಮಸ್ಯೆ. ಕೊಳಲಿನ ಕರೆ – ಎಂದರೆ ಅದು ಪ್ರಕೃತಿಯ ಕರೆ; ಸೃಷ್ಟಿಯ ಕರೆ. ಕೊಳಲು ಪ್ರಕೃತಿಗೆ ಸಂಕೇತ. ನಮಗೆ ಇಂದು ಪ್ರಕೃತಿಯ ಕರೆ ಕೇಳುತ್ತಿಲ್ಲ ಎನ್ನುವುದು ದಿಟ ತಾನೆ?

ಕೃಷ್ಣನಷ್ಟು ಪ್ರಕೃತಿಯೊಂದಿಗೆ ತಾದಾತ್ಮ್ಯವನ್ನು ಸಾಧಿಸಿ ಜೀವಿಸಿದವರು ಮತ್ತೊಬ್ಬರಿಲ್ಲ; ಅದು ನಿಸರ್ಗದ, ಎಂದರೆ ಹೊರಗಿನ ಪ್ರಕೃತಿಯಾಗಿರಬಹುದು; ಅಂತರಂಗದ, ಎಂದರೆ ಮನುಷ್ಯನ ಒಳಗಿನ ಪ್ರಕೃತಿಯಾಗಿರಬಹುದು – ಈ ಎರಡನ್ನೂ ಅವನಷ್ಟು ಚೆನ್ನಾಗಿ ಬಲ್ಲವರು ಇನ್ನೊಬ್ಬರಿಲ್ಲ. ಕೃಷ್ಣನನ್ನು ನಮ್ಮ ಪರಂಪರೆ 'ಪೂರ್ಣಾವತಾರಿ' ಎಂದು ಎತ್ತಿಹಿಡಿದಿದೆ. ಇದಕ್ಕೆ ಕಾರಣವೇ ಅವನು ಪ್ರಕೃತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡವನು, ಪ್ರಕೃತಿಯ ಎಲ್ಲ ಆಯಾಮಗಳಿಗೂ ಸ್ಪಂದಿಸಿದವನು ಎಂದು. ಅವನು ಕಾಳಿಂಗನನ್ನು ನಿಗ್ರಹಿಸಿದ್ದು, ಗಿರಿಯನ್ನು ಎತ್ತಿಹಿಡಿದದ್ದು – ಇವೆಲ್ಲವೂ ಪ್ರಕೃತಿಯನ್ನು ಕಾಪಾಡುವುದಕ್ಕಾಗಿಯೇ ಅಲ್ಲವೆ? ಹೀಗೆಯೇ ಅವನು ಗೆಳೆಯ, ಸಹೋದರ, ಮಗು, ಗುರು, ರಾಜ, ಸಾರಥಿ, ಪ್ರಿಯಕರ, ಸಂಗಾತಿ, ಯೋಧ, ರಾಜಕಾರಣಿ – ಹೀಗೆ ಬೇರೆ ಬೇರೆ ರೂಪಗಳಲ್ಲಿ ಪ್ರಕಟವಾದದ್ದು ಕೂಡ ಸೃಷ್ಟಿಯಲ್ಲಿ ಪ್ರಕಟವಾಗಿರುವ ಬೇರೆ ಬೇರೆ ಪ್ರಕೃತಿಗಳ, ಎಂದರೆ ಸ್ವಭಾವಗಳ ಉದ್ಧಾರಕ್ಕಾಗಿಯೇ ಅಲ್ಲವೆ?

ಕೃಷ್ಣನು ಹುಟ್ಟಿನಿಂದ ಕೊನೆಯ ತನಕವೂ ಕಷ್ಟಗಳನ್ನೇ ಕಂಡವನು. ಆದರೆ ಅವನು ಜಗತ್ತಿನ ಒಳಿತಿಗಾಗಿ ಸದಾ ಕ್ರಿಯಾಮಥನವನ್ನು ಮಾಡಿದವನು. ಸೆರೆಮನೆಯಲ್ಲಿ ಹುಟ್ಟಿದ; ಅರಮನೆಯನ್ನು ತ್ಯಜಿಸಿದ; ರಾಜನಾದವನು ಸೇವಕನಾದ; ಸ್ನೇಹಕ್ಕೆ ಮಣಿದ; ಪ್ರೀತಿಗೆ ಒಲಿದ; ವಿಷಾದಕ್ಕೆ ಉತ್ಸಾಹ ತುಂಬಿದ; ಅಜ್ಞಾನಕ್ಕೆ ಅರಿವನ್ನು ಉಣಿಸಿದ; ಅಹಂಕಾರವನ್ನು ಶಿಕ್ಷಿಸಿದ; ಕಷ್ಟಕ್ಕೆ ಮರುಗಿದ; ಆಪತ್ತಿನಲ್ಲಿ ಕೈ ಹಿಡಿದ; ಭಕ್ತಿಗೆ ಕುಣಿದಾಡಿದ; ವಾತ್ಸಲ್ಯಕ್ಕೆ ಕರಗಿದ; ಮೋಸಕ್ಕೆ ತಂತ್ರವನ್ನು ಹೆಣೆದ; ಕೊನೆಗೆ ಧರ್ಮಕ್ಕೆ ಫಲವಾದ.

ಕೃಷ್ಣನ ಕೊಳಲಿನ ಕರೆ – ಎಂದರೆ ಅದು ಧರ್ಮದ ಕರೆ. ಎಲ್ಲ ರೀತಿಯ ಸಂಬಂಧಗಳ ನಡುವೆ, ಎಲ್ಲ ವಿಧದ ಭಾವಗಳ ನಡುವೆ, ಎಲ್ಲ ವಿಧದ ಕಷ್ಟಗಳ ನಡುವೆ ನಮ್ಮತನವನ್ನು ಉಳಿಸಿಕೊಳ್ಳುವುದು, ನಮ್ಮತನದ ನೆಮ್ಮದಿಯನ್ನು ಕಳೆದುಕೊಳ್ಳದಿರುವುದು ಶ್ರೀಕೃಷ್ಣತತ್ತ್ವದ ಸಂದೇಶ. ನಮ್ಮನ್ನು ನಾವು ನಮ್ಮಿಂದ ಜಾರಗೊಡದಂತೆ ನಿಲ್ಲಿಸಬಲ್ಲದ್ದೇ ಧರ್ಮ; ಅದೇ ಕೃಷ್ಣನ ಧರ್ಮದ ಕರೆ. ಕೃಷ್ಣನ ಕೊಳಲಿನ ಕರೆಗೆ ದನಗಳು ಪರವಶವಾಗಿ ಅವನತ್ತ ಓಡಿಬರುತ್ತಿದ್ದವಂತೆ, ಸಾಧಕನೊಬ್ಬನು ಅಂತರಂಗದ ಕರೆಗೆ ಓಗೊಟ್ಟು ಹೆಜ್ಜೆ ಹಾಕುವಂತೆ. ನಮ್ಮ ಪರಂಪರೆಯು ವೃಷಭವನ್ನು ಧರ್ಮಕ್ಕೆ ಸಂಕೇತವಾಗಿಯೂ ಕಂಡಿದೆಯಷ್ಟೆ. ಧರ್ಮದ ಗುರಿ ಕೃಷ್ಣನಲ್ಲಿದೆ – ಎಂಬ ಧ್ವನಿ ಅವನ ಕೊಳಲಿನ ಕರೆಯಲ್ಲಿದೆ. ಕೊಳಲು ಎಂಬ ವಾದ್ಯದ ನಿರ್ಮಾಣಕ್ಕೆ ಹೊರಗಿನ ಇನ್ನೊಂದು ವಸ್ತುವಿನ ಆವಶ್ಯಕತೆ ಇಲ್ಲ. ಧರ್ಮದ ನಡೆಯಲ್ಲೂ ಅಷ್ಟೆ; ನಮ್ಮನ್ನು ನಾವು ಸಿದ್ಧಗೊಳಿಸಿಕೊಳ್ಳುವುದೇ ದಿಟವಾದ ಸಿದ್ಧತೆಯೇ ಹೊರತು ಬಾಹ್ಯವಿವರಗಳಲ್ಲ.

ಶ್ರೀಕೃಷ್ಣತತ್ತ್ವದ ಅನುಸಂಧಾನ ಎಂದರೆ ಅದು ಪುರುಷಾರ್ಥಗಳ ಅನುಸಂಧಾನವೇ ಹೌದು. ಎಂದರೆ ಅವನಲ್ಲಿ ನಮ್ಮ ಜೀವನದ ಸತ್ಯ, ಶಿವ, ಸುಂದರಗಳ ರಾಗಸಂಚಾರದ ಗುಟ್ಟು ಅಡಗಿದೆ; ಅವನು ನಿತ್ಯವೂ ಕೊಳಲಿನಲ್ಲಿ ನುಡಿಸುತ್ತಿರುವ ಹಾಡು ಇದೇ ಹೌದು. ಅವನ ಕರೆಗೆ ನಾವು ಕಿವಿಗೊಡಬೇಕಷ್ಟೆ.

ಮಹಿಳೆ ಮೇಲಿನ ದೌರ್ಜನ್ಯ ಪಾಪಕೃತ್ಯ, ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು: ಪ್ರಧಾನಿ ಮೋದಿ

‘ದೌರ್ಜನ್ಯ ತಡೆ: ಕಾಯ್ದೆಗೆ ಇನ್ನಷ್ಟು ಬಲ’

ಜಲಗಾಂವ್ (ಮಹಾರಾಷ್ಟ್ರ) (ಪಿಟಿಐ): ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಕೃತ್ಯಗಳಲ್ಲಿ ತಪ್ಪಿತಸ್ಥರಿಗೆ ಕಠಿಣ ಸಜೆ ವಿಧಿಸಲು ಕಾಯ್ದೆಗಳನ್ನು ಇನ್ನಷ್ಟು ಬಲ ಪಡಿಸುತ್ತೇವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ಇಲ್ಲಿ ನಡೆದ ‘ಲಖ್‌ಪತಿ ದೀದಿ’ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಮಹಿಳೆಯರ ಮೇಲಿನ ದೌರ್ಜನ್ಯ ಕೃತ್ಯ ಕ್ಷಮಿಸಲಾಗದಂತಹ ಪಾಪ. ತಪ್ಪಿತಸ್ಥರು ಶಿಕ್ಷೆಯಿಂದ ಪಾರಾಗಬಾರದು’ ಎಂದು ಪ್ರತಿಪಾದಿಸಿದರು.

ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಹಾಗೂ ಮುಂಬೈನಲ್ಲಿ ಇಬ್ಬರು ಶಾಲಾ ವಿದ್ಯಾರ್ಥಿನಿಯರ ಮೇಲಿನ ಲೈಂಗಿಕ ದೌರ್ಜನ್ಯ ಕೃತ್ಯಗಳ ವಿರುದ್ಧ ಸಾರ್ವಜನಿಕವಾಗಿ ವ್ಯಕ್ತವಾಗಿರುವ ತೀವ್ರ ಆಕ್ರೋಶದ ಹಿಂದೆಯೇ ಪ್ರಧಾನಿ ಈ ಮಾತು ಹೇಳಿದ್ದಾರೆ.

‘ಮಹಿಳೆಯರ ಸುರಕ್ಷೆಯೇ ಆದ್ಯತೆ ಆಗಬೇಕು. ತಾಯಂದಿರು, ಸಹೋದರಿಯರು, ಪುತ್ರಿಯರ ರಕ್ಷಣೆ ದೇಶದ ಆದ್ಯತೆ. ಕೆಂಪುಕೋಟೆ ಭಾಷಣದಲ್ಲೂ ಇದನ್ನು ನಾನು ಹೇಳಿದ್ದೇನೆ. ದೇಶದ ಯಾವುದೇ ರಾಜ್ಯದ ಸಂಗತಿ ಇರಲಿ; ಸೋದರಿಯರ ಆಕ್ರೋಶ, ನೋವು ನನಗೆ ಅರ್ಥವಾಗುತ್ತದೆ’ ಎಂದರು.

‘ಆಸ್ಪತ್ರೆ, ಶಾಲೆ, ಸರ್ಕಾರ, ಪೊಲೀಸ್ ಠಾಣೆ ಎಲ್ಲಿಯೇ ಇರಲಿ; ತಪ್ಪಿತಸ್ಥರಿಗೆ ನೆರವು ನೀಡುವವರನ್ನೂ ಬಿಡಬಾರದು. ಯಾವುದೇ ಹಂತದಲ್ಲಿ ನಿರ್ಲಕ್ಷ್ಯ ಆಗಿದ್ದರೂ ಅದಕ್ಕೆ ಸರ್ವರನ್ನೂ ಹೊಣೆ ಮಾಡಬೇಕು’ ಎಂದರು.

ಮಹಿಳೆಯರ ಏಳಿಗೆಗೆ ಕ್ರಮ: ‘ಮಹಿಳಾ ಕಲ್ಯಾಣ ಗುರಿ ಸಾಧನೆಗಾಗಿ ನನ್ನ ನೇತೃತ್ವದ ಸರ್ಕಾರ ಕಳೆದ 10 ವರ್ಷಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ₹9 ಲಕ್ಷ ಕೋಟಿ ನೆರವು ಒದಗಿಸಿದೆ. ಆದರೆ, ನೆರವಿನ ಮೊತ್ತವು ಸ್ವಾತಂತ್ರ್ಯಾನಂತರದಿಂದ 2024ರವರೆಗೆ ಕೇವಲ ₹25 ಸಾವಿರ ಕೋಟಿ ಆಗಿತ್ತು’ ಎಂದು ಹೇಳಿದರು. ಇದೇ ವೇಳೆ ವಿವಿಧ ರಾಜ್ಯಗಳಿಂದ ಬಂದಿದ್ದ ‘ಲಖ್‌ಪತಿ ದೀದಿ’ಯರ ಜೊತೆಗೆ ಚರ್ಚಿಸಿದರು.

‘ಸ್ವಾತಂತ್ರ್ಯಾನಂತರ ಆಡಳಿತ ನಡೆಸಿದ್ದ ಸರ್ಕಾರಗಳು ಮಹಿಳೆಯರ ಏಳಿಗೆಗೆ ಮಾಡಿರುವುದಕ್ಕಿಂತಲೂ ಹೆಚ್ಚಿನದನ್ನು, ನನ್ನ ನೇತೃತ್ವದ ಸರ್ಕಾರ ಕಳೆದ 10 ವರ್ಷಗಳಲ್ಲಿಯೇ ಕಾರ್ಯಗತಗೊಳಿಸಿದೆ’ ಎಂದು ಮೋದಿ ಹೇಳಿಕೊಂಡರು. 4.3 ಲಕ್ಷ ಸ್ವಯಂ ಸೇವಾ ಸಂಘಟನೆಗಳ 48 ಲಕ್ಷ ಸದಸ್ಯೆಯರಿಗೆ ನೆರವಾಗಲು ₹2,500 ಕೋಟಿ ಆವರ್ತ ನಿಧಿ ಬಿಡುಗಡೆಯಾಗಿದೆ. ‘ಲಖ್‌ಪತಿ ದೀದಿ’ ಯೋಜನೆ ಗುರಿ ಭವಿಷ್ಯದ ಪೀಳಿಗೆಯ ಸಬಲೀಕರಣವೂ ಆಗಿದೆ ಎಂದರು. ಮನೆ, ಕುಟುಂಬದ ಏಳಿಗೆಗೆ ಮಹಿಳೆ ಗ್ಯಾರಂಟಿ. ಆದರೆ, ಮಹಿಳೆಗೆ ನೆರವಾಗುವ ಗ್ಯಾರಂಟಿಯನ್ನು ಯಾರೂ ನೀಡುವುದಿಲ್ಲ ಎಂದು ಪ್ರಧಾನಿ ಅಭಿಪ್ರಾಯಪಟ್ಟರು.

‘ಮಹಿಳೆ ಹೆಸರಲ್ಲಿ ಆಸ್ತಿ ಇರಲ್ಲ. ಬ್ಯಾಂಕ್ ಸಾಲ ಸಿಗುವುದಿಲ್ಲ. ಉದ್ದಿಮೆ ಆರಂಭಿಸಲಾಗದು. ಹೀಗಾಗಿ, 3 ಕೋಟಿ ಸೋದರಿಯರನ್ನು ಲಖ್‌ಪತಿ ದೀದಿ ಮಾಡುವುದಾಗಿ ಚುನಾವಣೆ ವೇಳೆ ವಾಗ್ದಾನ ಮಾಡಿದ್ದೆ. ಇದರರ್ಥ, ಸ್ವಯಂ ಸೇವಾ ಸಂಘಗಳ ಸದಸ್ಯೆಯರ ಆದಾಯ ವಾರ್ಷಿಕ ₹1 ಲಕ್ಷ ಮೀರುವುದನ್ನು ಖಾತರಿಪಡಿಸುವುದಾಗಿತ್ತು’ ಎಂದರು.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯನ್ನು ಪರೋಕ್ಷವಾಗಿ ಉಲ್ಲೇಖಿಸಿದ ಅವರು, ರಾಜ್ಯದ ಸ್ಥಿರತೆ ಮತ್ತು ಅಭ್ಯುದಯಕ್ಕಾಗಿ ಬಿಜೆಪಿ ನೇತೃತ್ವದ ಮಹಾಯುತಿ ಸರ್ಕಾರದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಭಾನುವಾರ ನಡೆದ ‘ಲಖ್‌ಪತಿ ದೀದಿ’ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಸ್ವಯಂ ಸೇವಾ ಸಂಘಗಳ ಆರ್ಥಿಕ ಸಾಧನೆ ಮಾಡಿದ ಸದಸ್ಯೆಯರಿಗೆ ಪ್ರಧಾನಿ ನಮಿಸಿದರು ಪಿಟಿಐ ಚಿತ್ರ

ಮುಖ್ಯಾಂಶಗಳು

- ಜಲಗಾಂವ್‌ನಲ್ಲಿ ‘ಲಖ್‌ಪತಿ ದೀದಿ’ಯರ ರ್‍ಯಾಲಿ
- ಮಹಿಳೆಯರ ನೋವು, ಆಕ್ರೋಶ ಅರ್ಥ ಆಗುತ್ತದೆ ಎಂದ ಪ್ರಧಾನಿ
- ಮಹಿಳಾ ಕಲ್ಯಾಣಕ್ಕೆ 10 ವರ್ಷಗಳಲ್ಲಿ ಗರಿಷ್ಠ ನೆರವು

ಮಹಿಳೆಯರ ಘನತೆ, ಬದುಕು ರಕ್ಷಿಸುವುದು ನಮ್ಮೆಲ್ಲರ ಹೊಣೆ ಆಗಬೇಕು. ಈ ಕುರಿತು ಸ್ಪಷ್ಟ ಮತ್ತು ಕಟು ಸಂದೇಶ ಮೇಲಿನಿಂದ ರವಾನೆ ಆಗಬೇಕು

ನರೇಂದ್ರ ಮೋದಿ, ಪ್ರಧಾನಿ

‘ವಿಕಸಿತ ಭಾರತ’ಕ್ಕಾಗಿ ರಾಜಕೀಯಕ್ಕೆ ಬನ್ನಿ’

ನವದೆಹಲಿ (ಪಿಟಿಐ): ‘ವಿಕಸಿತ ಭಾರತ ಗುರಿ ಸಾಧನೆಗೆ ಸಂಘಟಿತ ಯತ್ನ ಅಗತ್ಯ. ರಾಜಕೀಯ ಹಿನ್ನೆಲೆಯಿಲ್ಲದ ಯುವಜನರು ರಾಜಕಾರಣಕ್ಕೆ ಬರಬೇಕು’ ಎಂದು ಪ್ರಧಾನಿ ಹೇಳಿದ್ದಾರೆ.

‘ರಾಜಕೀಯ ಹಿನ್ನೆಲೆ ಇಲ್ಲದ ಯುವಜನರು ಸ್ವಾತಂತ್ರ್ಯ ಹೋರಾಟದಲ್ಲಿ ತೋರಿದ್ದಂತಹ ಕಾರ್ಯೋತ್ಸಾಹದ ಅಗತ್ಯ ಈಗ ಇದೆ’ ಎಂದು ‘ಮನ್ ಕೀ ಬಾತ್’ ಕಾರ್ಯಕ್ರಮದಲ್ಲಿ ಹೇಳಿದರು.

ಯುವಜನರು ರಾಜಕೀಯಕ್ಕೆ ಬರಬೇಕು ಎಂದು ತಾವು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ನೀಡಿದ್ದ ಕರೆಗೆ ಲಕ್ಷ ಯುವಜನರು ಸ್ಪಂದಿಸಿದ್ದಾರೆ. ಈ ಎಲ್ಲರೂ ಉತ್ತಮ ಅವಕಾಶ, ಸೂಕ್ತ ಮಾರ್ಗದರ್ಶನದ ನಿರೀಕ್ಷೆಯಲ್ಲಿದ್ದಾರೆ ಎಂದು ಅಭಿಪ್ರಾಯಪಟ್ಟರು.

‘ನನಗೆ ಹಲವರು ಪತ್ರ ಬರೆದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನಿರೀಕ್ಷೆ ಮೀರಿ ಸ್ಪಂದನ ಸಿಕ್ಕಿದೆ. ಹಲವರು ಸಲಹೆ ನೀಡಿದ್ದಾರೆ. ಬಯಕೆ ಇದ್ದರೂ ಕುಟುಂಬ ರಾಜಕಾರಣ ಪ್ರಾಬಲ್ಯ ಹೊಂದಿರುವ ಕಾರಣದಿಂದ ಬರಲಾಗುತ್ತಿಲ್ಲ ಎಂದೂ ಕೆಲವರು ಹೇಳಿದ್ದಾರೆ’ ಎಂದರು.

ಯುವಪ್ರತಿಭೆಗಳನ್ನು ಉಲ್ಲೇಖಿಸಿದ ಪ್ರಧಾನಿ, ಐಐಟಿ ಮದ್ರಾಸ್‌ನ ಹಿರಿಯ ವಿದ್ಯಾರ್ಥಿಗಳು ಗ್ಯಾಲಕ್ಸ್‌ಐ ಹೆಸರಿನ ಸ್ಟಾರ್ಟ್–ಅಪ್ ಆರಂಭಿಸಿ ಯಶಸ್ಸು ಕಂಡಿರುವುದನ್ನು ಉದಾಹರಿಸಿದರು.

ಚಂದ್ರಯಾನದ ಯಶಸ್ಸಿಗೆ ಆ. 23 ಅನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನವಾಗಿ ಆಚರಿಸಿರುವುದು, ಹರ್ ಘರ್ ತಿರಂಗಾ, ಪೂರಾ ದೇಶ್ ತಿರಂಗಾ ಅಭಿಯಾನವನ್ನು ಉಲ್ಲೇಖಿಸಿದರು.

ಆಗಸ್ಟ್ 29 ‘ತೆಲುಗು ಭಾಷಾ ದಿನ’ವಾಗಿದೆ ಎಂದು ಹೇಳಿದ ಅವರು, ‘ತೆಲುಗು ಒಂದು ಅದ್ಭುತ ಭಾಷೆ. ಈ ಸಂದರ್ಭದಲ್ಲಿ ಎಲ್ಲ ತೆಲುಗು ಭಾಷಿಕರಿಗೆ ಶುಭ ಕೋರುತ್ತೇನೆ’ ಎಂದರು.

‘ಪ್ಯಾರಿಸ್‌ನಲ್ಲಿನ ಪ್ಯಾರಾಲಿಂಪಿಕ್ ಕ್ರೀಡಾಕೂಟಕ್ಕೆ ತೆರಳಿರುವ ನಮ್ಮ ಅಂಗವಿಕಲ ಸೋದರರು, ಸೋದರಿಯರನ್ನು ‘ಚಿಯರ್4ಭಾರತ್’ ಹ್ಯಾಶ್ ಟ್ಯಾಗ್ ಮೂಲಕ ಬೆಂಬಲಿಸಿ ಎಂದು ಕರೆ ಕೊಟ್ಟರು.

ಎಎಪಿ ಹಿರಿಯ ನಾಯಕ ಮನೀಶ್ ಸಿಸೋಡಿಯಾ ಅವರು ಭಾನುವಾರ ಪಂಜಾಬ್‌ನ ಸ್ವರ್ಣ ಮಂದಿರಕ್ಕೆ ಭೇಟಿ ನೀಡಿ ಪ್ರಾರ್ಥಿಸಿದರು. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಜೊತೆಗಿದ್ದರು ಪಿಟಿಐ ಚಿತ್ರ

ಕೆರೆ ಒತ್ತುವರಿ ಮುಲಾಜಿಲ್ಲದೆ ತೆರವು: ಸಿ.ಎಂ ರೇವಂತ ರೆಡ್ಡಿ

ಹೈದರಾಬಾದ್ (ಪಿಟಿಐ): ‘ಕೆರೆ ಒತ್ತುವರಿಯನ್ನು ಸರ್ಕಾರ ತೆರವುಗೊಳಿಸಲಿದ್ದು, ಎಷ್ಟೇ ಪ್ರಭಾವಿಗಳು ಕೃತ್ಯ ನಡೆಸಿದ್ದರೂ ಕಡಿವಾಣ ಹಾಕಲಾಗುವುದು’ ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹೇಳಿದರು.

ನಟ ಅಕ್ಕಿನೇನಿ ನಾಗಾರ್ಜುನ ಅವರ ಜಂಟಿ ಮಾಲೀಕತ್ವದ ಎನ್‌-ಕನ್ವೆನ್ಷನ್ ಸೆಂಟರ್ ಅನ್ನು ಕೆರೆ ಒತ್ತುವರಿ ಜಾಗದಲ್ಲಿ ನಿರ್ಮಿಸಿದ್ದ ಆರೋಪದಡಿ ನೆಲಸಮಗೊಳಿಸಿದ ಹಿಂದೆಯೇ ಈ ಎಚ್ಚರಿಕೆ ನೀಡಿದರು.

ಭಾನುವಾರ ನಗರದಲ್ಲಿ ನಡೆದ ‘ಹರೇ ಕೃಷ್ಣ ಅಭಿಯಾನ’ದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ನಾನು ಶ್ರೀ ಕೃಷ್ಣ ಹೇಳಿದ ಮಾತಿನಂತೆ ನಡೆದುಕೊಳ್ಳುತ್ತೇನೆ. ಜನರ ಒಳಿತಿಗಾಗಿ ಅಧರ್ಮವನ್ನು ಹೋರಾಟದ ಮೂಲಕ ಸೋಲಿಸಲು ಧರ್ಮದ ಮಾರ್ಗವನ್ನು ಅನುಸರಿಸಬೇಕು’ ಎಂದರು.

ತುಮ್ಮಿಡಿಕುಂಟ ಕೆರೆ ಒತ್ತುವರಿ ಮಾಡಿ ಎನ್‌-ಕನ್ವೆನ್ಷನ್ ಸೆಂಟರ್ ನಿರ್ಮಿಸಿರುವ ಆರೋಪವಿತ್ತು. ಹೈದರಾಬಾದ್ ವಿಕೋಪ ಸ್ಪಂದನೆ, ಆಸ್ತಿಗಳ ನಿಗಾ ಹಾಗೂ ರಕ್ಷಣಾ ಏಜೆನ್ಸಿಯ (ಹೈಡ್ರಾ) ಅಧಿಕಾರಿಗಳು ಪೊಲೀಸರ ಬಿಗಿ ಭದ್ರತೆಯಲ್ಲಿಶನಿವಾರ ಬೆಳಿಗ್ಗೆ ಒತ್ತುವರಿ ತೆರವು ಕಾರ್ಯ ನಡೆಸಿದ್ದರು.

‘ಎಷ್ಟೇ ಒತ್ತಡ ಬಂದರೂ, ಕೆಲವು ಸ್ನೇಹಿತರ ಫಾರ್ಮ್ ಹೌಸ್‌ಗಳು ಇದ್ದರೂ ‘ಹೈಡ್ರಾ’ ರಚಿಸಿದ್ದೇನೆ. ಆ ಮೂಲಕ ಜನರಿಗೆ ಒಳ್ಳೆಯದು ಮಾಡಲು ನಿರ್ಧರಿಸಿದ್ದೇನೆ. ಕೆರೆಗಳ ಒತ್ತುವರಿ ತೆರವುಗೊಳಿಸುವುದೇ ಇದರ ಉದ್ದೇಶ’ ಎಂದರು.

‘ಕೆರೆಗಳು ಭಾರತೀಯ ಸಂಸ್ಕೃತಿಯ ಭಾಗ. ಜನರ ಹಿತರಕ್ಷಣೆಗೆ ಅವುಗಳನ್ನು ರಕ್ಷಿಸದಿದ್ದರೆ ನಾನು ಜನರ ನೈಜ ಪ್ರತಿನಿಧಿ ಆಗಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದರು. ಹೈದರಾಬಾದ್‌ನಲ್ಲಿ 1908ರ ನಿಜಾಮರ ಆಡಳಿತದಲ್ಲಿ ನಿರ್ಮಾಣಗೊಂಡ ಕೆರೆಗಳು ಪರಸ್ಪರ ಸಂಪರ್ಕ ಹೊಂದಿದ್ದು, ಹೆಸರಾಂತ ಎಂಜಿನಿಯರ್ ಸರ್.ಎಂ. ವಿಶ್ವೇಶ್ವರಯ್ಯ ಅಗತ್ಯ ತಾಂತ್ರಿಕ ನೆರವು ನೀಡಿದ್ದರು.

ಸಾಮೂಹಿಕ ಅತ್ಯಾಚಾರ: ನಾಲ್ವರ ಬಂಧನ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಧಾರಾಶಿವದಲ್ಲಿ 15 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ನಾಲ್ವರನ್ನು ಬಂಧಿಸಲಾಗಿದೆ. ಪ್ರಕರಣದ ಮುಖ್ಯ ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಾಲಕಿಯು ಶನಿವಾರ ಕಿರಾಣಿ ಅಂಗಡಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಪರಿಚಯವಾಗಿದ್ದ ಪ್ರಮುಖ ಆರೋಪಿ ವಿಜಯ್ ಫಡ್ಕೆ ಆಕೆಯನ್ನು ತನ್ನ ಮನೆಗೆ ಕರೆದಿದ್ದ. ಆಗ ಮನೆಯಲ್ಲಿ ಇತರ ನಾಲ್ವರೂ ಇದ್ದರು. ವಿಜಯ್ ಸೇರಿ ಮೂವರು ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾರೆ. ಬಾಲಕಿಯು ಮನೆಗೆ ಮರಳಿ ಪೋಷಕರಿಗೆ ವಿಷಯ ತಿಳಿಸಿದ್ದು, ದೂರು ದಾಖಲಿಸಲಾಗಿದೆ ಎಂದು ಹೇಳಿದರು.

ಭಾರತೀಯ ನ್ಯಾಯ ಸಂಹಿತೆ ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

ಬಾಲಕಿ ಮೇಲೆ ಅತ್ಯಾಚಾರ (ಠಾಣೆ ವರದಿ, ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಕಲ್ಯಾಣ್ ಪಟ್ಟಣದಲ್ಲಿ 10 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ಮಧ್ಯಾಹ್ನ ಮಗು ಆಟವಾಡಲು ಆರೋಪಿಯ ಮನೆಗೆ ಹೋದಾಗ ಈ ಘಟನೆ ನಡೆದಿದೆ. ಆ ಸಮಯದಲ್ಲಿ ಆರೋಪಿ ಮನೆಯಲ್ಲಿ ಒಬ್ಬನೇ ಇದ್ದನು ಮತ್ತು ಬಾಲಕಿಯನ್ನು ಅನುಚಿತವಾಗಿ ಸ್ಪರ್ಶಿಸಿ ಅತ್ಯಾಚಾರ ಎಸಗಿದ್ದಾನೆ ಎಂದು ಅವರು ಹೇಳಿದ್ದಾರೆ.

ಬಾಲಕಿ ಮನೆಗೆ ಹಿಂದಿರುಗಿ ತನ್ನ ಪೋಷಕರಿಗೆ ವಿಷಯ ತಿಳಿಸಿದ್ದು, ನಂತರ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. 32 ವರ್ಷದ ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಹಲ್ಲೆ ಮತ್ತು ಅತ್ಯಾಚಾರದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅತ್ಯಾಚಾರ: 42 ವರ್ಷದ ವ್ಯಕ್ತಿ ಬಂಧನ

ಪಾಲ್ಘರ್ (ಪಿಟಿಐ): ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಮೇಲೆ 42 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಆರೋಪಿ ರಾಮ ಗಣಪತ್ ಬೋಯಿರ್ ಶನಿವಾರ ಮಧ್ಯಾಹ್ನ ಬಾಲಕಿ ಒಬ್ಬಳೇ ಇದ್ದ ಸಂದರ್ಭದಲ್ಲಿ ಆಕೆಯ ಮನೆಗೆ ನುಗ್ಗಿ ಕೃತ್ಯ ಎಸಗಿ ಓಡಿಹೋಗಿದ್ದ. ನಂತರ ಬಾಲಕಿಯು ಪೋಷಕರಿಗೆ ವಿಷಯ ತಿಳಿಸಿದ್ದಳು. ಪೋಷಕರು ದೂರು ದಾಖಲಿಸಿದ್ದರು ಎಂದು ತಿಳಿಸಿದರು.

ಭಾರತೀಯ ನೀತಿ ಸಂಹಿತೆಯ ಸೆಕ್ಷನ್ 64 (ಅತ್ಯಾಚಾರ) ಮತ್ತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದರು.

ಉತ್ತರ ಪ್ರದೇಶ: ಆರೋಪಿ ಸೆರೆ

ಬಲಿಯಾ (ಪಿಟಿಐ): 16 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಪೊಲೀಸ್ ವರಿಷ್ಠಾಧಿಕಾರಿ ವಿಕ್ರಾಂತ್ ವೀರ್ ಅವರು, ‘ಬಾಂಸಡಿಹ ಪೊಲೀಸ್ ಠಾಣೆ ವ್ಯಾಪ್ತಿಯ ಹಳ್ಳಿಯೊಂದರ ಬಾಲಕಿ ಮೇಲೆ ಆಕೆಯ ಚಿಕ್ಕಪ್ಪ ಲಾಲ್‌ಜಿ (45) ಅತ್ಯಾಚಾರ ನಡೆಸಿದ್ದಾನೆ. ಬಾಲಕಿಯು ಒಡಹುಟ್ಟಿದವರೊಂದಿಗೆ ಮನೆಯಲ್ಲಿ ಮಲಗಿದ್ದ ಸಂದರ್ಭದಲ್ಲಿ ಚಾವಣಿ ಮೂಲಕ ಬಂದು ಲೈಂಗಿಕ ದೌರ್ಜನ್ಯ ನಡೆಸಲಾಗಿದೆ’ ಎಂದು ಹೇಳಿದರು.

ಬಾಲಕಿಯ ಚಿಕ್ಕಮ್ಮ ನೀಡಿದ ದೂರಿನ ಆಧಾರದಲ್ಲಿ ಬಿಎನ್‌ಎಸ್ ಮತ್ತು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಬಾಲಕಿ ಮೇಲೆ ಅತ್ಯಾಚಾರ ಅಸ್ಸಾಂನ ವಿವಿಧೆಡೆ ಪ್ರತಿಭಟನೆ

ಗುವಾಹಟಿ (ಪಿಟಿಐ): ನಾಗಾಂವ್ ಜಿಲ್ಲೆಯಲ್ಲಿ 14 ವರ್ಷದ ಬಾಲಕಿ ಮೇಲೆ ನಡೆದಿರುವ ಅತ್ಯಾಚಾರ ಕೃತ್ಯ ಖಂಡಿಸಿ ಅಸ್ಸಾಂನ ವಿವಿಧೆಡೆ ಜನರು ಪ್ರತಿಭಟಿಸಿದ್ದು, ತಪ್ಪಿತಸ್ಥರಿಗೆ ಕಠಿಣ ಸಜೆ ವಿಧಿಸುವಂತೆ ಒತ್ತಾಯಿಸಿದ್ದಾರೆ.

ಜಿಲ್ಲೆಯ ಧಿಂಗ್‌ನಲ್ಲಿ ಗುರುವಾರ ಮನೆಪಾಠ ಮುಗಿಸಿಕೊಂಡು ಸೈಕಲ್‌ನಲ್ಲಿ ಮನೆಗೆ ಮರಳುತ್ತಿದ್ದ ಬಾಲಕಿಯನ್ನು ಬೈಕ್‌ನಲ್ಲಿ ಬಂದು ಅಡ್ಡಗಟ್ಟಿದ್ದ ಮೂವರು ಕೃತ್ಯ ಎಸಗಿದ್ದರು.

ಕೃತ್ಯವನ್ನು ಖಂಡಿಸಿ ಧಿಂಗ್‌ನಲ್ಲಿ ವ್ಯಾಪಾರಿಗಳು ಭಾನುವಾರ ಸ್ವಪ್ರೇರಿತರಾಗಿ ವಹಿವಾಟು ಸ್ಥಗಿತಗೊಳಿಸಿದ್ದರು. ಆರೋಪಿಗಳನ್ನು ಬಂಧಿಸಬೇಕು, ಕಠಿಣ ಸಜೆ ವಿಧಿಸಬೇಕು ಎಂದು ಒತ್ತಾಯಿಸಿದರು.

ಪ್ರಮುಖ ಆರೋಪಿಯನ್ನು ಶುಕ್ರವಾರ ಬಂಧಿಸಲಾಗಿತ್ತು. ಆದರೆ, ತಪ್ಪಿಸಿಕೊಳ್ಳುವ ಯತ್ನದಲ್ಲಿ ಆತ ಕೆರೆಗೆ ಹಾರಿದ್ದು, ಮೃತಪಟ್ಟಿದ್ದಾನೆ ಎಂದು ಶನಿವಾರ ಪೊಲೀಸರು ಹೇಳಿದ್ದರು.

ಕೃತ್ಯದಲ್ಲಿ ಭಾಗಿಯಾಗಿರುವ ಇತರೆ ಇಬ್ಬರು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ಕ್ರಮ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುದ್ದು ಕೃಷ್ಣ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಇಂದೋರ್‌ನಲ್ಲಿ ಭಾನುವಾರ ಶ್ರೀಕೃಷ್ಣನ ವೇಷದಲ್ಲಿ ಗಮನಸೆಳೆದ ಚಿಣ್ಣರು ಪಿಟಿಐ ಚಿತ್ರ

ದರ್ಶನ್‌ಗೆ ವಿಶೇಷ ಆತಿಥ್ಯ?

ಒಂದನೇ ಪುಟದಿಂದ...

ದರ್ಶನ್ ತಲೆ ಬೋಳಿಸಿಕೊಂಡಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಈಗ ಬಹಿರಂಗಗೊಂಡಿರುವ ಫೋಟೊದಲ್ಲಿ ದರ್ಶನ್ ವಿಗ್ ಧರಿಸಿಲ್ಲ. ಗಿಡ್ಡನೆಯ ತಲೆಗೂದಲು ಹೊಂದಿದ್ದಾರೆ.

ಕೈದಿಯೊಬ್ಬರು ದರ್ಶನ್ ಮತ್ತು ಸಹಚರರು ವಿಶೇಷ ಬ್ಯಾರಕ್ ಎದುರಿನ ನಡಿಗೆ ಪಥದ ಬಳಿ ಕುಳಿತು ಹರಟುತ್ತಿದ್ದ ಫೋಟೊವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು, ಪತ್ನಿಗೆ ಕಳುಹಿಸಿದ್ದರು. ಆ ಫೋಟೊ ಜಾಲತಾಣದಲ್ಲಿ ಹಂಚಿಕೆ ಆಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ತಪಾಸಣೆ ಬೆನ್ನಲ್ಲೇ ಬಹಿರಂಗ: ಅಕ್ರಮ ಚಟುವಟಿಕೆ ನಡೆಯುತ್ತಿರುವ ಶಂಕೆಯಲ್ಲಿ ಸಿಸಿಬಿ ಪೊಲೀಸರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಶನಿವಾರ ದಿಢೀರ್ ದಾಳಿ ನಡೆಸಿ, ಕೈದಿಗಳ ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದ್ದರು. ದರ್ಶನ್, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಇರುವ ಬ್ಯಾರಕ್‌ಗಳು ಸೇರಿದಂತೆ ಜೈಲಿನ ಎಲ್ಲಾ ಬ್ಯಾರಕ್‌ಗಳನ್ನು ಹಲವು ಗಂಟೆ ಶೋಧಿಸಿದ್ದರು.

‘ಜೈಲಿನಲ್ಲಿ ಮೊಬೈಲ್ ಸೇರಿ ಯಾವುದೇ ಅನಧಿಕೃತ ವಸ್ತುಗಳು ದೊರೆತಿಲ್ಲ’ ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದರು. ಇದರ ಬೆನ್ನಲ್ಲೇ ದರ್ಶನ್ ಸಹಚರರ ಜತೆ ಕುಳಿತು ಚರ್ಚಿಸುತ್ತಿರುವ ಫೋಟೊ ಈಗ ಬಹಿರಂಗವಾಗಿದೆ.

ವಿಲ್ಸನ್ ಗಾರ್ಡನ್ ನಾಗನ ವಿರುದ್ಧ ದರೋಡೆ, ಕೊಲೆ ಸೇರಿದಂತೆ ಹಲವು ಪ್ರಕರಣಗಳು ದಾಖಲಾಗಿವೆ. ಜೈಲಿನಲ್ಲಿಯೇ ಕುಳಿತು ಅಕ್ರಮ ಚಟುವಟಿಕೆಗೆ ಸಂಚು ರೂಪಿಸುತ್ತಿದ್ದರು ಎಂಬ ಮಾಹಿತಿ ಸಿಸಿಬಿ ಪೊಲೀಸರಿಗೆ ಲಭಿಸಿತ್ತು. ಹೀಗಾಗಿ, ವಿಲ್ಸನ್ ಗಾರ್ಡನ್ ನಾಗ ಸೇರಿದಂತೆ ಹಲವು ರೌಡಿಗಳನ್ನು ಬೇರೆ ಕಾರಾಗೃಹಗಳಿಗೆ ಸ್ಥಳಾಂತರಿಸುವಂತೆ ಕಾರಾಗೃಹ ಇಲಾಖೆ ಅಧಿಕಾರಿಗಳಿಗೆ ಸಿಸಿಬಿ ಪೊಲೀಸರು ಪತ್ರವನ್ನೂ ಬರೆದಿದ್ದರು.

‘ತಪ್ಪು ನಡೆದಿದ್ದರೆ ಕಠಿಣ ಕ್ರಮ’

ಒಂದನೇ ಪುಟದಿಂದ...

‘ನಮ್ಮ ಇಲಾಖೆಯ ಹೆಚ್ಚುವರಿ ಐಜಿಪಿ ಬಿ.ವಿ. ಆನಂದ್ ರೆಡ್ಡಿ ಮತ್ತು ಐಜಿಪಿ ಸೋಮಶೇಖರ್ ಅವರನ್ನು ವಿಚಾರಣಾ ಅಧಿಕಾರಿಗಳಾಗಿ ನೇಮಿಸಲಾಗಿದೆ. ಅವರು ನೀಡುವ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಪಡೆಯಲು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ವಿ. ಶೇಷಮೂರ್ತಿ ಅವರಿಗೆ ಕರೆ ಮಾಡಿದರೂ, ಅವರ ಮೊಬೈಲ್ ಸಂಖ್ಯೆ ‘ಸ್ವಿಚ್ಡ್ ಆಫ್’ ಆಗಿತ್ತು.

ವಿಡಿಯೊ ಕರೆ ಮಾಡಿದ್ದ ದರ್ಶನ್

ಜೈಲಿನಲ್ಲಿ ಸಹಚರರ ಜತೆ ಕುಳಿತು ಹರಟೆ ಹೊಡೆಯುತ್ತಿರುವ ಫೋಟೊ ಹರಿದಾಡಿದ ಬೆನ್ನಲ್ಲೇ ದರ್ಶನ್ ಅವರು ಸಹ ಕೈದಿಯೊಬ್ಬರ ಮೊಬೈಲ್‌ನಿಂದ ಆಪ್ತರಿಗೆ ವಿಡಿಯೊ ಕರೆ ಮಾಡಿ ಮಾತನಾಡಿದ್ದಾರೆ ಎನ್ನಲಾದ ದೃಶ್ಯಾವಳಿಯ ತುಣುಕು ಕೂಡ ಸಾಮಾಜಿಕ ಮಾಧ್ಯಮಗಳಲ್ಲಿ ಭಾನುವಾರ ರಾತ್ರಿ ಬಹಿರಂಗವಾಗಿದೆ. ‘ಊಟ ಆಯಿತಾ, ಆರಾಮವಾಗಿದ್ದೀನಿ’ ಎಂದು ಆಪ್ತನಿಗೆ ಹೇಳಿರುವ ವಿಡಿಯೊ ತುಣುಕನ್ನು ರೆಡ್ಡಿ ಎಂಬವರು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ನಟ ದರ್ಶನ್ ಜೈಲಿನಲ್ಲಿ ಚಹಾ ಸೇವಿಸುತ್ತ, ಸಿಗರೇಟ್ ಸೇದುತ್ತ ಕುಳಿತಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಅದು ನಿಜವೇ ಆಗಿದ್ದರೆ ಜೈಲು ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು

ಕಾಶಿನಾಥಯ್ಯ ಶಿವನಗೌಡರ, ರೇಣುಕಸ್ವಾಮಿ ತಂದೆ

ನಿರ್ದೇಶಕ ರಂಜಿತ್, ನಟ ಸಿದ್ದೀಕ್ ರಾಜೀನಾಮೆ

ಸಿದ್ದೀಕ್

ರಂಜಿತ್

ತಿರುವನಂತಪುರ/ ಕೊಚ್ಚಿ (ಪಿಟಿಐ): ಮಲಯಾಳ ಸಿನಿಮಾ ನಿರ್ದೇಶಕ ರಂಜಿತ್ ಅವರು ಕೇರಳ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಮತ್ತು ನಟ ಸಿದ್ದೀಕ್ ಅವರು ಮಲಯಾಳ ಸಿನಿಮಾ ಕಲಾವಿದರ ಸಂಘದ (ಅಮ್ಮ) ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಭಾನುವಾರ ರಾಜೀನಾಮೆ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಕೆ.ಹೇಮಾ ಸಮಿತಿಯು ಮಲಯಾಳ ಚಿತ್ರರಂಗದಲ್ಲಿ ಕಲಾವಿದೆಯರ ಮೇಲಿನ ಲೈಂಗಿಕ ದೌರ್ಜನ್ಯದ ಬಗ್ಗೆ ಬೆಳಕು ಚೆಲ್ಲಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ರಂಜಿತ್ ಅವರು ದುರ್ವರ್ತನೆ ತೋರಿದ್ದಾಗಿ ಕಳೆದ ವರ್ಷ ಬಂಗಾಳಿ ನಟಿಯೊಬ್ಬರು ಆರೋಪಿಸಿದ್ದರು. ಆದರೆ, ಹೇಮಾ ಸಮಿತಿ ವರದಿ ನಂತರ ವಿಷಯವು ಬೆಳಕಿಗೆ ಬಂದಿದ್ದು, ರಂಜಿತ್ ಅವರಿಗೆ ರಾಜೀನಾಮೆ ನೀಡುವಂತೆ ಒತ್ತಡ ಹೇರಲಾಗಿತ್ತು.

ಸಿದ್ದೀಕ್ ಅವರು ಲೈಂಗಿಕ ದೌರ್ಜನ್ಯ ಎಸಗಿದ್ದಾಗಿ ನಟಿಯೊಬ್ಬರು ಶನಿವಾರ ಆರೋಪಿಸಿದ್ದರು.

ರಂಜಿತ್ ಅವರು ಆಡಿಯೊ ತುಣುಕನ್ನು ಸುದ್ದಿವಾಹಿನಿಯೊಂದಕ್ಕೆ ಕಳುಹಿಸುವ ಮೂಲಕ ತಮ್ಮ ರಾಜೀನಾಮೆ ನಿರ್ಧಾರ ಘೋಷಿಸಿದ್ದಾರೆ.

‘ಅಕಾಡೆಮಿಯ ಅಧ್ಯಕ್ಷ ಸ್ಥಾನ ವಹಿಸಿಕೊಂಡಾಗಿನಿಂದ ಒಂದು ವರ್ಗದ ಜನರು ನನ್ನನ್ನು ಗುರಿ ಮಾಡುತ್ತಲೇ ಬಂದಿದ್ದಾರೆ. ಆರೋಪಗಳೆಲ್ಲವೂ ಸುಳ್ಳು ಎಂದು ಸಮಾಜದ ಎದುರು ಸಾಬೀತು ಮಾಡಬೇಕಿದೆ’ ಎಂದು ಅವರು ಆಡಿಯೊದಲ್ಲಿ ಹೇಳಿದ್ದಾರೆ.

ಸಿದ್ದೀಕ್ ಅವರು ರಾಜೀನಾಮೆ ಪತ್ರವನ್ನು ‘ಅಮ್ಮ’ ಅಧ್ಯಕ್ಷ ಮತ್ತು ನಟ ಮೋಹನ್‌ಲಾಲ್ ಅವರಿಗೆ ಕಳುಹಿಸಿದ್ದಾರೆ. ಸಿದ್ದೀಕ್ ಅವರ ನಿರ್ಧಾರವನ್ನು ಸಂಘದ ಹಲವು ಸದಸ್ಯರು ಸ್ವಾಗತಿಸಿದ್ದಾರೆ.

ಏಳು ಸದಸ್ಯರ ತನಿಖಾ ತಂಡ ರಚನೆ

ಕೊಚ್ಚಿ ವರದಿ: ಮಲಯಾಳ ಚಿತ್ರರಂಗದಲ್ಲಿ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯ ಕುರಿತ ಆರೋಪಗಳ ಬಗೆಗೆ ತನಿಖೆ ನಡೆಸಲು ಏಳು ಸದಸ್ಯರ ವಿಶೇಷ ತಂಡವೊಂದನ್ನು ರಚಿಸಿರುವುದಾಗಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಕಚೇರಿ ಪ್ರಕಟಣೆ ತಿಳಿಸಿದೆ.

ಭಾನುವಾರ ಪೊಲೀಸ್ ಅಧಿಕಾರಿಗಳ ಜತೆ ಉನ್ನತ ಮಟ್ಟದ ಸಭೆ ನಡೆಸಿದ ನಂತರ ತಂಡವನ್ನು ರಚಿಸಲಾಯಿತು ಎಂದು ಪ್ರಕಟಣೆ ಹೇಳಿದೆ.

ಐ.ಜಿ ಸ್ಪರ್ಜನ್ ಕುಮಾರ್ ನೇತೃತ್ವದ ತನಿಖಾ ತಂಡದಲ್ಲಿ ನಾಲ್ವರು ಮಹಿಳಾ ಐಎಎಸ್ ಅಧಿಕಾರಿಗಳೂ ಇರಲಿದ್ದಾರೆ ಎಂದಿದೆ.

ಲೋಕ ಜನಶಕ್ತಿ ಅಧ್ಯಕ್ಷರಾಗಿ ಚಿರಾಗ್ ಮರು ಆಯ್ಕೆ

ರಾಂಚಿ (ಪಿಟಿಐ): ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್ ಬಣ) ಅಧ್ಯಕ್ಷರಾಗಿ ಚಿರಾಗ್ ಪಾಸ್ವಾನ್ ಮರು ಆಯ್ಕೆ ಆದರು. ‘ಕಾರ್ಯಕಾರಿ ಸಮಿತಿ ಸಭೆ ನನ್ನ ಆಯ್ಕೆ ಕುರಿತು ತೀರ್ಮಾನ ತೆಗೆದುಕೊಂಡಿದೆ. ಐದು ವರ್ಷ ಅವಧಿಗೆ ಅಧ್ಯಕ್ಷನಾಗಿ ಇರುತ್ತೇನೆ’ ಎಂದು ಕೇಂದ್ರ ಸಚಿವರೂ ಆದ ಚಿರಾಗ್ ಪಾಸ್ವಾನ್ ಹೇಳಿದರು.

ಮುಂದೆ ನಡೆಯಲಿರುವ ಹರಿಯಾಣ, ಜಮ್ಮು–ಕಾಶ್ಮೀರ ಹಾಗೂ ಜಾರ್ಖಂಡ್ ವಿಧಾನಸಭೆ ಚುನಾವಣೆ ಕಾರ್ಯತಂತ್ರದ ಬಗೆಗೂ ಚರ್ಚೆ ನಡೆಯಿತು ಎಂದರು.

ಆರ್‌.ಜಿ. ಕರ್ ಆಸ್ಪತ್ರೆ ಅಕ್ರಮ: ಸಿಬಿಐ ಶೋಧ

ನವದೆಹಲಿ/ಕೋಲ್ಕತ್ತ (ಪಿಟಿಐ): ಆರ್. ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಮತ್ತು ಅಲ್ಲಿನ ಮಾಜಿ ವೈದ್ಯಕೀಯ ನಿರೀಕ್ಷಕ ಹಾಗೂ ಉಪ ಪ್ರಾಂಶುಪಾಲ (ಎಂಎಸ್‌ವಿಪಿ) ಸಂಜಯ್ ವಸಿಷ್ಠ ಹಾಗೂ ಇತರ 13 ಜನರಿಗೆ ಸೇರಿದ ಸ್ಥಳಗಳಲ್ಲಿ ಸಿಬಿಐ ಅಧಿಕಾರಿಗಳು ಭಾನುವಾರ ಶೋಧ ನಡೆಸಿದ್ದಾರೆ.

ಘೋಷ್ ಅವರ ನಿವಾಸದಲ್ಲಿ 13 ತಾಸು ಶೋಧ ನಡೆಸಿದ ಅಧಿಕಾರಿಗಳು ಕೆಲವೊಂದು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಹಣದ ಅವ್ಯವಹಾರಗಳ ಕುರಿತ ತನಿಖೆ ಭಾಗವಾಗಿ ಕೋಲ್ಕತ್ತದಲ್ಲಿ ಹಾಗೂ ನಗರದ ಸುತ್ತಮುತ್ತಲಿನ ಕೆಲವು ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದೆ.

ಘೋಷ್ ಅವರನ್ನು ಸಿಬಿಐನ ಏಳು ಮಂದಿ ಅಧಿಕಾರಿಗಳು ಭಾನುವಾರ ಬೆಳಿಗ್ಗೆ 8ರಿಂದ ಅವರ ನಿವಾಸದಲ್ಲಿ ವಿಚಾರಣೆಗೆ ಒಳಪಡಿಸಿದ್ದಾರೆ. ಸಿಬಿಐ ಅಧಿಕಾರಿಗಳು ಭದ್ರತೆಗೆ ಕೇಂದ್ರೀಯ ಪಡೆಗಳನ್ನು ಕರೆದುಕೊಂಡು ಬಂದಿದ್ದರು.

ಸಿಬಿಐ ತಂಡವು ಬೆಳಿಗ್ಗೆ 6 ಗಂಟೆಗೇ ಘೋಷ್ ಅವರ ಮನೆ ಮುಂದೆ ಇತ್ತು. ಆದರೆ ಬಾಗಿಲು ತೆರೆಯಲು ಘೋಷ್ ಒಂದೂವರೆ ಗಂಟೆ ತೆಗೆದುಕೊಂಡರು. ಸಿಬಿಐ ತಂಡವು ಅಷ್ಟು ಹೊತ್ತು ಮನೆಯ ಎದುರು ಕಾಯಬೇಕಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ವಸಿಷ್ಠ ಅವರು ಆಸ್ಪತ್ರೆಯ ಎಂಎಸ್‌ವಿಪಿ ಆಗಿದ್ದಾಗ ಅಲ್ಲಿ ನಡೆದ ಹಣಕಾಸಿನ ಅಕ್ರಮಗಳ ಬಗ್ಗೆ ಎಷ್ಟರಮಟ್ಟಿಗೆ ಮಾಹಿತಿ ಹೊಂದಿದ್ದರು ಎಂಬ ಬಗ್ಗೆ ಅವರಲ್ಲಿ ಪ್ರಶ್ನಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲ ಮನಸ್ ಕುಮಾರ್ ಬಂದ್ಯೋಪಾಧ್ಯಾಯ ಅವರಿಗೆ ಆಸ್ಪತ್ರೆಗೆ ಬರಲು ಸೂಚಿಸಿದ್ದ ಅಧಿಕಾರಿಗಳು, ಶೋಧ ಅವಧಿಯಲ್ಲಿ ತಮ್ಮ ಜೊತೆ ಇರಿಸಿಕೊಂಡಿದ್ದರು.

ಏಕೀಕೃತ ಪಿಂಚಣಿ ವ್ಯವಸ್ಥೆ–ಕಾಂಗ್ರೆಸ್ ವಾಗ್ದಾಳಿ

ಯೂಟರ್ನ್ ಸರ್ಕಾರ: ಖರ್ಗೆ ಟೀಕೆ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಏಕೀಕೃತ ಪಿಂಚಣಿ ವ್ಯವಸ್ಥೆಯನ್ನು (ಯುಪಿಎಸ್) ಜಾರಿಗೆ ತರುವುದಾಗಿ ಘೋಷಿಸಿರುವ ವಿಚಾರವಾಗಿ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ಪಕ್ಷವು, ಯುಪಿಎಸ್‌ನಲ್ಲಿ ಇರುವ ‘ಯು’ ಅಕ್ಷರ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ‘ಯೂಟರ್ನ್’ ನಿಲುವನ್ನು ಪ್ರತಿನಿಧಿಸುತ್ತಿದೆ ಎಂದು ಹೇಳಿದೆ.

ಯುಪಿಎಸ್ ವ್ಯವಸ್ಥೆಯನ್ನು ಜಾರಿಗೆ ತರಲು ಕೇಂದ್ರ ಸಚಿವ ಸಂಪುಟವು ಶನಿವಾರ ಅನುಮೋದನೆ ನೀಡಿದೆ. ‘ಜೂನ್ 4ರ ನಂತರದಲ್ಲಿ ಪ್ರಧಾನ ಮಂತ್ರಿಯವರ ಅಧಿಕಾರದ ಸೊಕ್ಕಿನ ಜಾಗದಲ್ಲಿ ಜನರ ಅಧಿಕಾರವು ಪಾರಮ್ಯ ಸಾಧಿಸಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

‘ದೀರ್ಘಾವಧಿ ಬಂಡವಾಳ ವೃದ್ಧಿ ಮತ್ತು ಇಂಡೆಕ್ಸೇಷನ್ ವಿಚಾರವಾಗಿ ಬಜೆಟ್‌ನಲ್ಲಿ ಘೋಷಿಸಿದ್ದನ್ನು ಹಿಂಪಡೆಯಲಾಯಿತು. ವಕ್ಫ್ ಮಸೂದೆಯನ್ನು ಜೆಪಿಸಿ ಪರಿಶೀಲನೆಗೆ ಕಳುಹಿಸಲಾಯಿತು. ಪ್ರಸಾರ ಮಸೂದೆಯನ್ನು ಹಿಂಪಡೆಯಲಾಯಿತು. ಲ್ಯಾಟರಲ್ ಎಂಟ್ರಿ ಪ್ರಸ್ತಾವನೆಯನ್ನೂ ಹಿಂದಕ್ಕೆ ಪಡೆಯಲಾಯಿತು’ ಎಂದು ಖರ್ಗೆ ಅವರು ಹೇಳಿದ್ದಾರೆ. ‘ದಬ್ಬಾಳಿಕೆಯ ಮನೋಭಾವದ ಈ ಸರ್ಕಾರದಿಂದ 140 ಕೋಟಿ ಭಾರತೀಯರನ್ನು ರಕ್ಷಿಸುವ ಕೆಲಸವನ್ನು ಮತ್ತು ಉತ್ತರದಾಯಿತ್ವ ಇರುವಂತೆ ನೋಡಿಕೊಳ್ಳುವ ಕೆಲಸವನ್ನು ನಾವು ಮಾಡುತ್ತಿರುತ್ತೇವೆ’ ಎಂದು ಖರ್ಗೆ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಬಿಜೆಪಿ ತಿರುಗೇಟು: ಬಿಜೆಪಿಯು ‘ಯು–ಟರ್ನ್’ ಹೊಡೆದಿದೆ’ ಎಂದು ಲೇವಡಿ ಮಾಡಿರುವ ಕಾಂಗ್ರೆಸ್‌ಗೆ ತಿರುಗೇಟು ನೀಡಿದ ಬಿಜೆಪಿ ವಕ್ತಾರ ರವಿಶಂಕರ್ ಪ್ರಸಾದ್, ‘ಒಪಿಎಸ್ ಜಾರಿ ಕುರಿತು ವಿಧಾನಸಭೆ ಚುನಾವಣೆ ವೇಳೆ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಭರವಸೆ ನೀಡಿತ್ತು. ಈ ಯೋಜನೆ ಅಲ್ಲಿ ಜಾರಿಯಾಗಿದೆಯೇ ಎಂಬ ಕುರಿತು ನಾನು ರಾಹುಲ್ ಗಾಂಧಿ ಹಾಗೂ ಅವರ ಸರ್ಕಾರಕ್ಕೆ ಪ್ರಶ್ನೆ ಕೇಳಬಯಸುತ್ತೇನೆ. ಹಳೆ ಪಿಂಚಣಿ ಯೋಜನೆ ಕುರಿತು ಕಾಂಗ್ರೆಸ್ ಭಾರಿ ಕಾಳಜಿ ವ್ಯಕ್ತಪಡಿಸುತ್ತದೆ. ಆದರೆ, ಇದನ್ನು ತಮ್ಮ ಪ್ರಣಾಳಿಕೆಯಲ್ಲಿ ಅಳವಡಿಸುವ ಧೈರ್ಯ ಮಾತ್ರ ತೋರಲಿಲ್ಲ’ ಎಂದರು.

‘ದೇಶದಲ್ಲಿ ಕಡಿಮೆ ಆಗುತ್ತಿರುವ ವಾಸ್ತವ ವರಮಾನ’

ನವದೆಹಲಿ (ಪಿಟಿಐ): ವೇತನ ಏರಿಕೆಯು ನಿಧಾನಗತಿಯಲ್ಲಿರುವುದು ಹಾಗೂ ಹಣದುಬ್ಬರ ಏರಿಕೆಯ ಪ್ರಮಾಣವು ತೀವ್ರವಾಗಿರುವ ಪರಿಣಾಮವಾಗಿ ಜನರ ‘ವಾಸ್ತವ ವರಮಾನ’ವು (ಹಣದುಬ್ಬರ ಏರಿಕೆಗೆ ಹೊಂದಿಸಿದ ನಂತರದ ವರಮಾನ) ಹಿಂದೆಂದೂ ಕಾಣದ ರೀತಿಯಲ್ಲಿ ಕಡಿಮೆ ಆಗಿದೆ ಎಂದು ಕಾಂಗ್ರೆಸ್ ಭಾನುವಾರ ದೂರಿದೆ.

ನಾಣ್ನುಡಿಗಳಲ್ಲಿ ಬರುವ ಆಸ್ಟ್ರಿಚ್ ಪಕ್ಷಿಯ ಧೋರಣೆಯಂತೆ, ಸರ್ಕಾರವು ಸಮಸ್ಯೆಯನ್ನು ಎದುರಿಸುವ ಬದಲು, ದೇಶದ ಅರ್ಥವ್ಯವಸ್ಥೆ ಎದುರಿಸುತ್ತಿರುವ ಅತ್ಯಂತ ಮೂಲಭೂತ ಸಮಸ್ಯೆಯ ವಿಚಾರವಾಗಿ ಕಣ್ಣುಮುಚ್ಚಿ ಕುಳಿತಿದೆ ಎಂದು ಕಾಂಗ್ರೆಸ್ ಪಕ್ಷ ಆಕ್ರೋಶ ವ್ಯಕ್ತಪಡಿಸಿದೆ.

ಭಾರತದಲ್ಲಿ ಕುಟುಂಬಗಳ ವಾಸ್ತವ ವರಮಾನವು ನಿರಂತರವಾಗಿ ಇಳಿಕೆಯಾಗುತ್ತಿದೆ ಎಂಬ ಸತ್ಯದ ಮೇಲೆ ಹೆಸರಾಂತ ಬ್ರೋಕರೇಜ್ ಸಂಸ್ಥೆಯೊಂದರ ವರದಿಯು ಬೆಳಕು ಚೆಲ್ಲುವ ಕೆಲಸ ಮಾಡಿದೆ. ಆದರೆ, ಈ ಸತ್ಯವನ್ನು ನಿರಾಕರಿಸುವ ಕೆಲಸವನ್ನು ಕೇಂದ್ರ ನಿರಂತರವಾಗಿ ಮಾಡಿಕೊಂಡು ಬಂದಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹೇಳಿದ್ದಾರೆ.

ಒಡಿಶಾ: ಮಹಿಳೆಯ ತಲೆ ಬೋಳಿಸಿ, ಬಹಿಷ್ಕಾರ

ಭುವನೇಶ್ವರ (ಪಿಟಿಐ): ಸ್ಥಳೀಯರ ‘ಪಂಚಾಯಿತಿ’ ಆದೇಶದಂತೆ ಒಡಿಶಾ ರಾಜ್ಯದ ಝಾರಸುಗುಡ ಜಿಲ್ಲೆಯಲ್ಲಿ ಮಹಿಳೆ ಒಬ್ಬಳ ತಲೆ ಬೋಳಿಸಿ, ಆಕೆಗೆ ಬಹಿಷ್ಕಾರ ಹೇರಲಾಗಿದೆ ಎಂಬ ದೂರು ದಾಖಲಾಗಿದೆ.

ದೂರು ಆಧರಿಸಿ ಪೊಲೀಸರು ಮಹಿಳೆಯ ಪತಿ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ರೌತ್‌ಬಹಾಲ್ ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಕೆಲ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳೆ, ಪತಿಯ ಜೊತೆ ಜಗಳವಾಡಿದ್ದಳು. ಜಗಳದ ಸಂದರ್ಭದಲ್ಲಿ ಆಕೆ, ಪತಿಗೆ ಹೊಡೆದಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಇದನ್ನು ಪತಿಯು ಗ್ರಾಮಸ್ಥರಿಗೆ ತಿಳಿಸಿದ್ದ.

ನಂತರ ಸ್ಥಳೀಯರು ಪಂಚಾಯಿತಿ ಸೇರಿಸಿ, ವಿಚಾರಣೆ ನಡೆಸಿದ್ದರು. ಮಹಿಳೆಯ ತಲೆ ಬೋಳಿಸಬೇಕು ಮತ್ತು ಬಹಿಷ್ಕಾರ ಹೇರಬೇಕು ಎಂದು ಆದೇಶಿಸಿದ್ದರು ಎನ್ನಲಾಗಿದೆ. ಅಲ್ಲದೆ, ಮಹಿಳೆಯು ₹5,000 ದಂಡ ಪಾವತಿಸಬೇಕು ಹಾಗೂ ಜನರಿಗೆ ಮಾಂಸದ ಊಟ ಹಾಕಿಸಬೇಕು ಎಂದು ಕೂಡ ಆದೇಶಿಸಿದೆ ಎನ್ನಲಾಗಿದೆ.

ಮಹಿಳೆಯ ತಲೆ ಬೋಳಿಸಿ, ಆಕೆಗೆ ಬಹಿಷ್ಕಾರ ಹೇರಿದ ನಂತರ ಆಕೆ ತನ್ನ ಮಗನ ಜೊತೆ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ‘ಮಹಿಳೆಯ ಪತಿ ಹಾಗೂ ಗ್ರಾಮದ ಮೂವರು ಈ ಕೃತ್ಯದಲ್ಲಿ ಭಾಗಿಯಾಗಿರುವುದು ನಮಗೆ ತನಿಖೆಯಿಂದ ಗೊತ್ತಾಗಿದೆ. ಅವರನ್ನು ನಾವು ಬಂಧಿಸಿದ್ದೇವೆ’ ಎಂದು ಲೈಕೆರಾ ಪೊಲೀಸ್ ಠಾಣೆಯ ಅಧಿಕಾರಿ ದಿಲೀಪ್ ಕುಮಾರ್ ಬೆಹೆರಾ ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹480
12 ಕ್ಕೆ ₹66
ಮೈಸೂರು
100ಕ್ಕೆ ₹482

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಡಾ. ಹೆಚ್. ಪುಟ್ಟದಾಸ್. ಮಾಜಿ ಶಾಸಕರು.
ದೈವಾಧೀನ: 26-08-2012
ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳು ಗತಿಸಿವೆ. ನಿಮ್ಮ ಪ್ರೀತಿ, ಸೇವೆ, ಆದರ್ಶಗಳೇ ಎಂದೆಂದಿಗೂ ನಮಗೆ ದಾರಿದೀಪವಾಗಿದೆ.
ಪತ್ನಿ, ಮಕ್ಕಳು ಹಾಗೂ ಮೊಮ್ಮಕ್ಕಳು.

ಸವಿನೆನಪು

ಆರ್. ಸ್ಮಿತಾರೆಡ್ಡಿ (ಚಿನ್ನು) B.E.,
06-05-1981 - 26-8-2007
ದೇಹ ಮರೆಯಾಗುತ್ತದೆ, ಭಾವನೆಗಳು ಮರೆಯಾಗುತ್ತವೆ, ವಿಚಾರಗಳು ಮರೆಯಾಗುತ್ತವೆ, ಆದರೆ ನೆನಪುಗಳು ಮಾತ್ರ ಸ್ಥಿರವಾಗಿ ಉಳಿಯುತ್ತವೆ.
ತಂದೆ, ತಾಯಿ, ಮಗ-ಸ್ವಯಂರೆಡ್ಡಿ ಹಾಗೂ ಕುಟುಂಬದವರು

‘ಸೆಬಿ ಆದೇಶ ವಿರುದ್ಧ ಕಾನೂನು ಹೋರಾಟಕ್ಕೆ ನಿರ್ಧಾರ’

ಅನಿಲ್ ಅಂಬಾನಿ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಆದೇಶ ಕುರಿತು ಉದ್ಯಮಿ ಅನಿಲ್ ಅಂಬಾನಿ ಅವರು ಪರಾಮರ್ಶೆ ನಡೆಸುತ್ತಿದ್ದಾರೆ. ಸೆಬಿ ವಿಧಿಸಿರುವ ದಂಡ ಹಾಗೂ ನಿಷೇಧ ಕುರಿತಂತೆ ಕಾನೂನು ಸಲಹೆ ಪಡೆದು ಮುಂದಿನ ಹೋರಾಟದ ಬಗ್ಗೆ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಅನಿಲ್ ಅಂಬಾನಿ ಅವರ ವಕ್ತಾರರು ಭಾನುವಾರ ತಿಳಿಸಿದ್ದಾರೆ.

ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್‌ನಿಂದ (ಆರ್‌ಎಚ್‌ಎಫ್ ಎಲ್) ಬೇರೆಡೆಗೆ ಹಣ ಅಕ್ರಮವಾಗಿ ವರ್ಗಾಯಿಸಿದ ಪ್ರಕರಣದಲ್ಲಿ ಅನಿಲ್ ಅಂಬಾನಿ ಮತ್ತು ಇತರೆ 24 ಕಂಪನಿಗಳಿಗೆ ಷೇರುಪೇಟೆಯಿಂದ ಸೆಬಿ ಐದು ವರ್ಷ ನಿರ್ಬಂಧ ವಿಧಿಸಿದೆ. ಅನಿಲ್ ಅಂಬಾನಿಗೆ ₹25 ಕೋಟಿ ದಂಡ ಕೂಡ ವಿಧಿಸಲಾಗಿದೆ.

ಆರ್‌ಎಚ್‌ಎಫ್‌ಎಲ್ ಪ್ರಕರಣಕ್ಕೆ ಸಂಬಂಧಿಸಿದಂತೆ 2022ರ ಫೆಬ್ರುವರಿ 11ರಂದು ಸೆಬಿ ಮಧ್ಯಂತರ ಆದೇಶ ನೀಡಿತ್ತು. ಇದರ ಅನ್ವಯ ರಿಲಯನ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಮತ್ತು ರಿಲಯನ್ಸ್ ಪವರ್ ಲಿಮಿಟೆಡ್‌ನ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ ಆದೇಶ ಪಾಲಿಸುತ್ತಿದ್ದಾರೆ ಎಂದು ವಕ್ತಾರರು ಹೇಳಿದ್ದಾರೆ.

ಐದು ವರ್ಷದ ವರೆಗೆ ಯಾವುದೇ ನೋಂದಾಯಿತ ಕಂಪನಿ ಅಥವಾ ಸೆಬಿಯಿಂದ ನೋಂದಣಿ ಆಗಿರುವ ಕಂಪನಿಯಲ್ಲಿ ನಿರ್ದೇಶಕ ಅಥವಾ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯಾಗಿ (ಕೆಎಂಪಿ) ಕೆಲಸ ಮಾಡದಂತೆಯೂ ಅನಿಲ್ ಅಂಬಾನಿಗೆ ನಿರ್ಬಂಧ ಹೇರಲಾಗಿದೆ.

9 ಕಂಪನಿ ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಏರಿಕೆಯಿಂದಾಗಿ ಪ್ರಮುಖ 10 ಕಂಪನಿಗಳ ಪೈಕಿ 9 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹95,522 ಕೋಟಿ ಸೇರ್ಪಡೆಯಾಗಿದೆ.

ರಿಲಯನ್ಸ್ ಇಂಡಸ್ಟ್ರಿಸ್ ಎಂ–ಕ್ಯಾಪ್‌ಗೆ ₹29,634 ಕೋಟಿ ಸೇರ್ಪಡೆಯಾಗಿದ್ದು, ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ ₹20.29 ಲಕ್ಷ ಕೋಟಿಗೆ ತಲುಪಿದೆ.

ಟಿಸಿಎಸ್ ₹17,167 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹15,225 ಕೋಟಿ, ಭಾರ್ತಿ ಏರ್‌ಟೆಲ್ ₹12,268 ಕೋಟಿ, ಐಸಿಐಸಿಐ ಬ್ಯಾಂಕ್ ₹11,524 ಕೋಟಿ, ಐಟಿಸಿ ₹3,965 ಕೋಟಿ, ಎಸ್‌ಬಿಐ ₹2,498 ಕೋಟಿ, ಎಲ್‌ಐಸಿ ₹1,992 ಕೋಟಿ ಮತ್ತು ಇನ್ಫೊಸಿಸ್ ಮಾರುಕಟ್ಟೆ ಮೌಲ್ಯಕ್ಕೆ ₹1,245 ಕೋಟಿ ಸೇರ್ಪಡೆಯಾಗಿದೆ.

ಸಾಲಪತ್ರ ಮಾರುಕಟ್ಟೆ ₹1 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಭಾರತದ ಸಾಲಪತ್ರ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹11,366 ಕೋಟಿ (ಆಗಸ್ಟ್ 24ರ ವರೆಗೆ) ಹೂಡಿಕೆ ಮಾಡಿದ್ದಾರೆ. ಜನವರಿಯಿಂದ ಇಲ್ಲಿಯ ವರೆಗೆ ಈ ಮಾರುಕಟ್ಟೆಯಲ್ಲಿ ಒಟ್ಟಾರೆ ಹೂಡಿಕೆಯು ₹1 ಲಕ್ಷ ಕೋಟಿ ದಾಟಿದೆ.

ಜೂನ್‌ನಲ್ಲಿ ಜೆ.ಪಿ. ಮಾರ್ಗನ್‌ನ ಗ್ಲೋಬಲ್ ಬಾಂಡ್ ಇಂಡೆಕ್ಸ್‌ಗೆ ಭಾರತದ ಬಾಂಡ್ ಸೇರ್ಪಡೆಯಾಗಿದೆ. ಇದರಿಂದ ಭಾರತದ ಬಾಂಡ್‌ಗಳತ್ತ ವಿದೇಶಿ ಹೂಡಿಕೆದಾರರು ಹೆಚ್ಚು ಗಮನ ನೆಟ್ಟಿದ್ದಾರೆ. ಹಾಗಾಗಿ, ಬಂಡವಾಳದ ಒಳಹರಿವು ಹೆಚ್ಚುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಭಾರತದ ಸಾಲಪತ್ರ ಮಾರುಕಟ್ಟೆಯಲ್ಲಿ ಮೇ ತಿಂಗಳಿನಲ್ಲಿ ₹8,760 ಕೋಟಿ, ಜೂನ್‌ನಲ್ಲಿ ₹14,955 ಹಾಗೂ ಜುಲೈನಲ್ಲಿ ₹22,363 ಕೋಟಿ ಹೂಡಿಕೆಯಾಗಿದೆ. ಏಪ್ರಿಲ್‌ನಲ್ಲಿ ₹10,949 ಕೋಟಿ ಬಂಡವಾಳವನ್ನು ವಿದೇಶಿ ಹೂಡಿಕೆದಾರರು ಹಿಂಪಡೆದಿದ್ದರು.

ಆಗಸ್ಟ್‌ನಲ್ಲಿ ಇಲ್ಲಿಯವರೆಗೆ ದೇಶೀಯ ಷೇರುಪೇಟೆಗಳಿಂದ ವಿದೇಶಿ ಬಂಡವಾಳ ಹೂಡಿಕೆದಾರರು ₹16,305 ಕೋಟಿಯನ್ನು ಹಿಂಪಡೆದಿದ್ದಾರೆ. ಜಾಗತಿಕ ಬಿಕ್ಕಟ್ಟು, ಅಮೆರಿಕದಲ್ಲಿ ತಲೆದೋರಿದ ಆರ್ಥಿಕ ಹಿಂಜರಿತದ ಭೀತಿಯಿಂದಾಗಿ ಷೇರುಪೇಟೆಯಲ್ಲಿ ಬಂಡವಾಳದ ಹೊರಹರಿವು ಹೆಚ್ಚಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸಂಬಳದಲ್ಲಿ ಹೂಡಿಕೆ ಪಾಲು ಎಷ್ಟು?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸಂಬಳದ ಎಷ್ಟು ಮೊತ್ತವನ್ನು ಮ್ಯೂಚುವಲ್ ಫಂಡ್‌ನಲ್ಲಿ (ಎಂ.ಎಫ್) ಹೂಡಿಕೆ ಮಾಡಬೇಕು? ಇಂಥದ್ದೊಂದು ಪ್ರಶ್ನೆ ವೇತನ ಪಡೆಯುತ್ತಿರುವ ಅನೇಕ ಹೂಡಿಕೆದಾರರಲ್ಲಿದೆ.

ಎಷ್ಟು ಉಳಿತಾಯ ಮಾಡಬೇಕು ಮತ್ತು ಎಷ್ಟು ಹೂಡಿಕೆ ಮಾಡಬೇಕು ಎನ್ನುವುದನ್ನು ಲೆಕ್ಕಾಚಾರ ಮಾಡಲು ಕೆಲವು ಸೂತ್ರಗಳಿದ್ದರೂ ಎಲ್ಲರಿಗೂ ಒಪ್ಪುವಂತಹ ಒಂದು ನಿರ್ದಿಷ್ಟ ಸಂಖ್ಯೆ ನೀಡುವುದು ಕಷ್ಟ. ಏಕೆಂದರೆ, ಒಬ್ಬೊಬ್ಬರ ಹಣಕಾಸಿನ ಪರಿಸ್ಥಿತಿ ಒಂದೊಂದು ರೀತಿ ಇರುತ್ತದೆ. ಹಾಗಾಗಿ, ಒಂದು ಉದಾಹರಣೆ ತೆಗೆದುಕೊಂಡು ಸಂಬಳದ ಎಷ್ಟು ಪಾಲನ್ನು ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸಬಹುದು ಎನ್ನುವುದಕ್ಕೆ ಉತ್ತರ ಕಂಡುಕೊಳ್ಳೋಣ.

ಮೊದಲು ಹಣಕಾಸಿನ ಸ್ಥಿತಿಗತಿ ಅರಿಯಿರಿ: ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆಗೆ ಮುಂದಾಗುವ ಮೊದಲು ನಿಮ್ಮ ಹಣಕಾಸಿನ ಪರಿಸ್ಥಿತಿ ಅರಿತುಕೊಳ್ಳುವುದು ಬಹಳ ಮುಖ್ಯ. ಸಾಮಾನ್ಯವಾಗಿ ವ್ಯಕ್ತಿಯೊಬ್ಬ ತನ್ನ ಆದಾಯವನ್ನು ಪ್ರಮುಖವಾಗಿ ಮೂರು ಮೂಲ ಉದ್ದೇಶಗಳಿಗೆ ಬಳಸಿಕೊಳ್ಳುತ್ತಾನೆ. ಆತನ ದೈನಂದಿನ ಖರ್ಚು, ತುರ್ತು ಅಗತ್ಯ ಮತ್ತು ದೀರ್ಘಾವಧಿ ಹೂಡಿಕೆಗೆ ಹಣ ಬಳಕೆಯಾಗುತ್ತದೆ.

ನಿಮ್ಮ ತಿಂಗಳ ಒಟ್ಟು ಆದಾಯ ಎಷ್ಟು ಮತ್ತು ಖರ್ಚು ಎಷ್ಟು ಎನ್ನುವುದನ್ನು ಕಂಡುಕೊಳ್ಳುವ ಮೂಲಕ ಮ್ಯೂಚುವಲ್ ಫಂಡ್‌ನಲ್ಲಿ ಎಷ್ಟು ಹೂಡಿಕೆ ಮಾಡಬೇಕು ಎನ್ನುವುದನ್ನು ಅರಿತುಕೊಳ್ಳಲು ಮುಂದಾಗಬೇಕಾಗುತ್ತದೆ. ಉದಾಹರಣೆಗೆ ನಿಮ್ಮ ತಿಂಗಳ ಗಳಿಕೆ ₹50 ಸಾವಿರ ಆಗಿದ್ದು ಖರ್ಚು ₹25 ಸಾವಿರ ಎಂದು ಭಾವಿಸಿ. ಆಗ ಇನ್ನುಳಿದ ₹25 ಸಾವಿರ ನಿಮ್ಮ ಉಳಿತಾಯದ ಮೊತ್ತವಾಗುತ್ತದೆ.

ಈಗ ಉಳಿತಾಯದ ಮೊತ್ತದಲ್ಲಿ ಎಷ್ಟು ಪಾಲನ್ನು ಮ್ಯೂಚುವಲ್ ಫಂಡ್ ಮೇಲೆ ತೊಡಗಿಸಬೇಕು ಎಂದು ತೀರ್ಮಾನಿಸಬೇಕಾಗುತ್ತದೆ. ಮುಂದಿನ ಹಂತಗಳಲ್ಲಿ ಮ್ಯೂಚುವಲ್ ಫಂಡ್ ಮೇಲೆ ಎಷ್ಟು ಮೊತ್ತ ಹಾಕಬೇಕು ಎನ್ನುವುದಕ್ಕೆ ಇನ್ನಷ್ಟು ಸ್ಪಷ್ಟತೆ ಪಡೆದುಕೊಳ್ಳೋಣ.

ಹೂಡಿಕೆ ಗುರಿ, ಹೂಡಿಕೆ ಮಾದರಿ ಮತ್ತು ರಿಸ್ಕ್: ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವಾಗ ಹೂಡಿಕೆ ಗುರಿಗಳನ್ನು ಅರಿತು ಮುನ್ನಡೆಯುವುದು ಬಹಳ ಮುಖ್ಯ. ಮಕ್ಕಳ ಉನ್ನತ ಶಿಕ್ಷಣ, ಮನೆ ಖರೀದಿ, ನಿವೃತ್ತಿ ಜೀವನಕ್ಕಾಗಿ ಹೂಡಿಕೆ ಹೀಗೆ ನಿರ್ದಿಷ್ಟ ಗುರಿ ಸ್ಪಷ್ಟವಾಗಿದ್ದಾಗ ಮಾತ್ರ ಹೂಡಿಕೆ ಸುಗಮವಾಗುತ್ತದೆ. ನಿಮ್ಮ ಹೂಡಿಕೆಯ ಗುರಿ ಏನು ಎನ್ನುವುದನ್ನು ಆಧರಿಸಿ ಹೂಡಿಕೆಯನ್ನು ಅಲ್ಪಾವಧಿಗೆ ಮಾಡಬೇಕೋ, ಮಧ್ಯಮ ಅವಧಿಗೆ ಮಾಡಬೇಕೋ ಅಥವಾ ದೀರ್ಘಾವಧಿಗೆ ಹೂಡಿಕೆ ಪರಿಗಣಿಸಬೇಕೋ ಎನ್ನುವುದನ್ನು ತೀರ್ಮಾನಿಸಬೇಕಾಗುತ್ತದೆ.

ಉದಾಹರಣೆಗೆ ಮುಂದಿನ ವರ್ಷ ವಿದೇಶ ಪ್ರವಾಸಕ್ಕೆ ಹೋಗುತ್ತಿರುವಿರಿ ಎಂದುಕೊಳ್ಳಿ. ಇದಕ್ಕೆ ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ಹೆಚ್ಚು ರಿಸ್ಕ್ ಇರುವ ಮಾದರಿಯನ್ನು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಹೂಡಿಕೆಗೆ ಹೆಚ್ಚು ಸಮಯ ಸಿಗುವುದಿಲ್ಲ.

ಆದರೆ ಮಕ್ಕಳ ಉನ್ನತ ಶಿಕ್ಷಣಕ್ಕೆ, ನಿವೃತ್ತಿಗಾಗಿ ಹೂಡಿಕೆ ಮಾಡುವಾಗ 15ರಿಂದ 25 ವರ್ಷದವರೆಗೆ ಸಮಯ ಸಿಗುತ್ತದೆ. ಇಲ್ಲಿ ಹೆಚ್ಚು ರಿಸ್ಕ್ ತೆಗೆದುಕೊಂಡು ಹೆಚ್ಚು ಲಾಭ ಕೊಡುವ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸಮಂಜಸ ಎನಿಸಿಕೊಳ್ಳುತ್ತದೆ.

ಉದಾಹರಣೆಗೆ ಮನೆ ಖರೀದಿಯ ಡೌನ್ ಪೇಮೆಂಟ್‌ಗೆ ಮುಂದಿನ ಐದು ವರ್ಷದಲ್ಲಿ ಒಂದಷ್ಟು ಮೊತ್ತ ಪೇರಿಸಬೇಕು ಎಂದರೆ ಈಕ್ವಿಟಿ ಮತ್ತು ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮೊತ್ತವನ್ನು ಸಮ್ಮಿಶ್ರಣ ಮಾಡಿ ತೊಡಗಿಸಬೇಕು. ಆದರೆ, ನಿವೃತ್ತಿಯ ಉದ್ದೇಶಕ್ಕಾಗಿ ಹೂಡಿಕೆ ಮಾಡುತ್ತಿರುವಿರಿ ಎಂದಾದಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳನ್ನು ಮಾತ್ರ ಪರಿಗಣಿಸಬಹುದು. ಒಟ್ಟಾರೆಯಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸುವಾಗ ಹೂಡಿಕೆಯಲ್ಲಿ ವೈವಿಧ್ಯತೆ ಕಾಯ್ದುಕೊಳ್ಳುವುದು ಬಹಳ ಮುಖ್ಯ.

ಎಷ್ಟು ಮೊತ್ತ ಹೂಡಿಕೆ ಮಾಡಬೇಕು?: ಹೂಡಿಕೆ ಗುರಿ, ಹೂಡಿಕೆ ಮಾದರಿ ಮತ್ತು ರಿಸ್ಕ್ ಅರಿತುಕೊಂಡ ಬಳಿಕ ಮ್ಯೂಚುವಲ್ ಫಂಡ್ ಮೇಲೆ ಎಷ್ಟು ಮೊತ್ತ ಹೂಡಿಕೆ ಮಾಡಬೇಕು ಎನ್ನುವ ಪ್ರಶ್ನೆ ಎದುರಾಗುತ್ತದೆ. ಎಲ್ಲದಕ್ಕೂ ಮೊದಲು 50:30:20 ನಿಯಮದ ಬಗ್ಗೆ ಅರಿತುಕೊಳ್ಳೋಣ.

ಬಂದ ಆದಾಯದಲ್ಲಿ ಯಾವ್ಯಾವ ಉದ್ದೇಶಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡಬೇಕು ಎನ್ನುವುದನ್ನು 50:30:20 ನಿಯಮ ಹೇಳುತ್ತದೆ. ಬಂದ ಆದಾಯದಲ್ಲಿ ಶೇ 50ರಷ್ಟನ್ನು ಅಗತ್ಯಗಳಿಗೆ, ಶೇ 30ರಷ್ಟು ಹಣವನ್ನು ಆಸೆಗಳಿಗೆ ಮತ್ತು ಶೇ 20ರಷ್ಟು ಮೊತ್ತವನ್ನು ಹೂಡಿಕೆಗೆ ಬಳಸಬೇಕು ಎಂಬುದು ಈ ನಿಯಮದ ಸಾರ.

ಉದಾಹರಣೆಗೆ, ವ್ಯಕ್ತಿಯೊಬ್ಬರ ಸಂಬಳ ₹60 ಸಾವಿರ ಎಂದುಕೊಳ್ಳಿ. ₹60 ಸಾವಿರದಲ್ಲಿ ₹30 ಸಾವಿರವನ್ನು ಆ ವ್ಯಕ್ತಿ ಅಗತ್ಯ ವಸ್ತುಗಳ ಮೇಲೆ ಖರ್ಚು ಮಾಡಬೇಕಾಗುತ್ತದೆ. ಇನ್ನುಳಿದ ₹18 ಸಾವಿರವನ್ನು ಆಸೆಪಟ್ಟ ವಸ್ತುಗಳ ಖರೀದಿಗೆ ಬಳಸಬಹುದಾಗಿದೆ. ಇನ್ನುಳಿದ ₹12 ಸಾವಿರವನ್ನು ಉಳಿತಾಯಕ್ಕೆ ಮೀಸಲಿಡಬೇಕಾಗುತ್ತದೆ.

ಈ ₹12 ಸಾವಿರದಲ್ಲಿ ಶೇ 70ರಷ್ಟು ಅಂದರೆ ₹8,400 ಮ್ಯೂಚುವಲ್ ಫಂಡ್ ಹೂಡಿಕೆಗೆ ಪರಿಗಣಿಸಬಹುದು. ಇನ್ನುಳಿದ ₹3,600 ಅನ್ನು ಫಿಕ್ಸೆಡ್ ಡೆಪಾಸಿಟ್, ಅಂಚೆ ಕಚೇರಿ ಹೂಡಿಕೆ, ಉಳಿತಾಯ ಖಾತೆಯಲ್ಲಿ ಇಟ್ಟುಕೊಳ್ಳಬಹುದು. ಈ ಹಣ ತುರ್ತು ಅಗತ್ಯಗಳಿಗೆ ನೆರವಿಗೆ ಬರುತ್ತದೆ. ಉಳಿತಾಯ ಮಾಡಿ ಹೂಡಿಕೆ ಮಾಡುವ ಮೊತ್ತದಲ್ಲಿ ಶೇ 70ರಷ್ಟು ಹಣವನ್ನು ಮ್ಯೂಚುವಲ್ ಫಂಡ್‌ಗಳಲ್ಲೇ ಹೂಡಿಕೆ ಮಾಡಬೇಕು ಎಂಬುವುದು ಕಡ್ಡಾಯದ ಸೂತ್ರವಲ್ಲ. ಹಣಕಾಸಿನ ಪರಿಸ್ಥಿತಿ ಮತ್ತು ವ್ಯಕ್ತಿಗತ ಸ್ಥಿತಿಗತಿ ಆಧರಿಸಿ ಬದಲಾವಣೆ ಮಾಡಿಕೊಳ್ಳಬಹುದು.

ಕಿವಿಮಾತು: ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ಮುನ್ನ ತುರ್ತು ನಿಧಿ ಅಂದರೆ ಎಮರ್ಜೆನ್ಸಿ ಫಂಡ್ ರೂಪಿಸಿಕೊಂಡಿರಬೇಕು. ಮೂರರಿಂದ ಆರು ತಿಂಗಳ ಖರ್ಚಿನ ಬಾಬ್ತು ತುರ್ತಿ ನಿಧಿಯಲ್ಲಿ ಇರಬೇಕು. ಅಲ್ಲದೆ, ಜೀವನದ ಅನಿಶ್ಚಿತ ಸಂದರ್ಭ ಎದುರಿಸಲು ಆರೋಗ್ಯ ವಿಮೆ ಮತ್ತು ಜೀವ ವಿಮೆ ಮಾಡಿಸಿಕೊಂಡಿರಬೇಕು. ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ಹೂಡಿಕೆ ವೈವಿಧ್ಯ ಕಾಯ್ದುಕೊಳ್ಳುವತ್ತ ಗಮನಕೊಡಬೇಕು. ಹೀಗೆ ಅಳೆದು ತೂಗಿ ಹೂಡಿಕೆ ಮಾಡಿದಾಗ ಮಾತ್ರ ದೀರ್ಘಾವಧಿಯಲ್ಲಿ ಸಂಪತ್ತು ಗಳಿಸಲು ಸಾಧ್ಯವಾಗುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಜಿಗಿದ ಷೇರು ಸೂಚ್ಯಂಕಗಳು

ಆಗಸ್ಟ್ 23ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 81,086 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.81ರಷ್ಟು ಗಳಿಸಿಕೊಂಡಿದೆ. 24,823 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ವಾರದ ಅವಧಿಯಲ್ಲಿ ಶೇ 1.15ರಷ್ಟು ಜಿಗಿದಿದೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಬಹುದು ಎಂಬ ನಿರೀಕ್ಷೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಎರಡನೇ ತ್ರೈಮಾಸಿಕ ಅವಧಿಯಲ್ಲಿ ಭಾರತದ ಕಂಪನಿಗಳು ಗಳಿಕೆಯಲ್ಲಿ ಚೇತರಿಕೆ ಕಂಡು ಮುನ್ನಡೆ ಸಾಧಿಸಲಿವೆ ಎಂಬ ವಿಶ್ವಾಸ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಾರದ ಲೆಕ್ಕಾಚಾರದಲ್ಲಿ ವಲಯವಾರು ಪ್ರಗತಿ ನೋಡಿದಾಗ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಮಾತ್ರ ಶೇ 2.91ರಷ್ಟು ಕುಸಿದಿದೆ. ಉಳಿದಂತೆ ಎಲ್ಲ ವಲಯಗಳು ಉತ್ತಮ ಪ್ರಗತಿ ಸಾಧಿಸಿವೆ.

ನಿಫ್ಟಿ ಲೋಹ ವಲಯ ಶೇ 3.3, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.54, ಎಫ್‌ಎಂಸಿಜಿ ಶೇ 1.92, ಫಾರ್ಮಾ ಶೇ 1.91, ನಿಫ್ಟಿ ಎನರ್ಜಿ ಶೇ 1.35, ಫೈನಾನ್ಸ್ ಶೇ 1.11, ಅನಿಲ ಮತ್ತು ತೈಲ ಶೇ 1.08, ನಿಫ್ಟಿ ಆಟೊ ಶೇ 0.99, ನಿಫ್ಟಿ ಬ್ಯಾಂಕ್ ಶೇ 0.82, ಮಾಹಿತಿ ತಂತ್ರಜ್ಞಾನ ಶೇ 0.52 ಮತ್ತು ಮಾಧ್ಯಮ ಸೂಚ್ಯಂಕ ಶೇ 0.45ರಷ್ಟು ಗಳಿಸಿಕೊಂಡಿವೆ.

ವಾರದ ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಹಿಂಡಾಲ್ಕೋ ಇಂಡಸ್ಟ್ರಿಸ್ ಶೇ 8.02, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 6.02, ಬಿಪಿಸಿಎಲ್ ಶೇ 5.85, ಬಜಾಜ್ ಫಿನ್‌ಸರ್ವ್ ಶೇ 5.81, ಗ್ರಾಸಿಮ್ ಇಂಡಸ್ಟ್ರಿಸ್ ಶೇ 5.81, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 5.55, ಕೋಲ್ ಇಂಡಿಯಾ ಶೇ 5.15 ಮತ್ತು ಬಜಾಜ್ ಆಟೊ ಶೇ 5.12ರಷ್ಟು ಗಳಿಸಿಕೊಂಡಿವೆ.

ಒಎನ್‌ಜಿಸಿ ಶೇ 3.19, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 2.83, ಟಾಟಾ ಮೋಟರ್ಸ್ ಶೇ 1.27, ಅದಾನಿ ಎಂಟರ್‌ಪ್ರೈಸಸ್ ಶೇ 1.09, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 0.83, ವಿಪ್ರೊ ಶೇ 0.78, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 0.41, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 0.35, ಅದಾನಿ ಪೋರ್ಟ್ಸ್ ಶೇ 0.12 ಮತ್ತು ಎಕ್ಸಿಸ್ ಬ್ಯಾಂಕ್ ಶೇ 0.11ರಷ್ಟು ಕುಸಿದಿವೆ.

ಮುನ್ನೋಟ: ಜಾಗತಿಕ ಮಾರುಕಟ್ಟೆಗಳ ಪ್ರಭಾವ ದೇಶೀಯ ಮಾರುಕಟ್ಟೆ ಮೇಲೆ ಬೀರಲಿದೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಇಳಿಕೆ ಕುರಿತಾಗಿ ಯಾವ ನಿರ್ಣಯ ತೆಗೆದುಕೊಳ್ಳಲಿದೆ ಎನ್ನುವುದು ವಿಶ್ವದ ಪ್ರಮುಖ ಮಾರುಕಟ್ಟೆಗಳ ಮೇಲೆ ನೇರ ಪರಿಣಾಮ ಉಂಟು ಮಾಡಲಿದೆ. ಉಳಿದಂತೆ ದೇಶೀಯ ವಿದ್ಯಮಾನಗಳು ಸಹ ಷೇರುಪೇಟೆ ಮೇಲೆ ಪ್ರಭಾವ ಬೀರಲಿವೆ.

ಇನ್ಫೊಸಿಸ್ ಸಿಇಒ ಸಲೀಲ್ ಪರೇಖ್ ಹೇಳಿಕೆ

‘ಕೃತಕ ಬುದ್ಧಿಮತ್ತೆ ಅಳವಡಿಕೆ ಉದ್ಯೋಗಿಗಳ ವಜಾಗೊಳಿಸಲ್ಲ’

ಸಲೀಲ್ ಪರೇಖ್

ನವದೆಹಲಿ (ಪಿಟಿಐ): ‘ಇನ್ಫೊಸಿಸ್‌ನಿಂದ ಸೇವೆ ಸ್ವೀಕರಿಸುವ ಗ್ರಾಹಕರು ಜನರೇಟಿವ್ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಮೇಲೆ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಇದರ ಅಳವಡಿಕೆಗೆ ಕಂಪನಿಯೂ ಸಜ್ಜಾಗಿದೆ. ಆದರೆ, ಎ.ಐ ಅಳವಡಿಕೆ ಬಳಿಕ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸುವುದಿಲ್ಲ’ ಎಂದು ಇನ್ಫೊಸಿಸ್ ಕಂಪನಿಯ ಸಿಇಒ ಸಲೀಲ್ ಪರೇಖ್ ಹೇಳಿದ್ದಾರೆ.

ಕಂಪನಿ ಕಾರ್ಯಾಚರಣೆಯ ದಕ್ಷತೆ ಹೆಚ್ಚಿಸಲು ಮತ್ತು ವೆಚ್ಚ ಕಡಿತಗೊಳಿಸಲು ಈ ತಂತ್ರಜ್ಞಾನ ಬಳಕೆಯಾಗಲಿದೆ. ಇದರ ಅಳವಡಿಕೆಯಿಂದ ಉದ್ಯಮಗಳಿಗೆ ಆಗುವ ಲಾಭ ಮತ್ತು ವ್ಯಾಪಾರದ ಫಲಿತಾಂಶ ಆಧಾರದ ಮೇಲೆ ಈ ತಂತ್ರಜ್ಞಾನ ಮತ್ತಷ್ಟು ವಿಸ್ತರಣೆಯಾಗಲಿದೆ ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ್ದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

‘ಸಮಯ ಕಳೆದಂತೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ವೇಗವೂ ಹೆಚ್ಚುತ್ತದೆ ಎಂದು ನಾವು ಆಲೋಚಿಸುತ್ತಿದ್ದೇವೆ. ಅದು ಹೇಗೆ ಅಭಿವೃದ್ಧಿ ಹೊಂದಲಿದೆ ಎಂಬ ಬಗ್ಗೆಯೂ ಕಾಯುತ್ತೇವೆ’ ಎಂದು ತಿಳಿಸಿದ್ದಾರೆ.

‘ಕೆಲವು ವರ್ಷಗಳ ಹಿಂದೆ ಡಿಜಿಟಲ್ ಅಥವಾ ಕ್ಲೌಡ್‌ನೊಟ್ಟಿಗೆ ಎ.ಐ ತಂತ್ರಜ್ಞಾನವನ್ನು ಅಳವಡಿಕೆ ಮಾಡಿದ್ದೇವೆ. ನಮ್ಮ ಗ್ರಾಹಕರಿಗೆ ಇದರಿಂದ ಯಾವ ರೀತಿಯ ಪ್ರಯೋಜನ ದೊರೆಯಲಿದೆ ಎಂಬುದನ್ನು ಎದುರು ನೋಡುತ್ತಿದ್ದೇವೆ. ಅವರಿಗೆ ಹೆಚ್ಚಿನ ಪ್ರಯೋಜನ ಲಭಿಸಿದರೆ ನಾವು ಎ.ಐ ತಂತ್ರಜ್ಞಾನವನ್ನು ಮತ್ತಷ್ಟು ಅಳವಡಿಸಿಕೊಳ್ಳಲು ಮುಂದಾಗುತ್ತೇವೆ’ ಎಂದು ಹೇಳಿದ್ದಾರೆ.

ಜನರೇಟಿವ್ ಎ.ಐ ಅಳವಡಿಕೆಯಿಂದ ಉದ್ಯೋಗಗಳು ಕಡಿತವಾಗುವುದಿಲ್ಲ. ಹೊಸ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ. ಜಾಗತಿಕ ಉದ್ಯಮಗಳಿಗೆ ಉತ್ತಮ ಸೇವೆ ನೀಡಲು ಇದನ್ನು ಬಳಸುತ್ತೇವೆ ಎಂದಿದ್ದಾರೆ.

ತನ್ನ ಗ್ರಾಹಕರಿಗಾಗಿ 225 ಜನರೇಟಿವ್ ಎ.ಐ ಪ್ರೋಗ್ರಾಂಗಳಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ. ಕಂಪನಿಯ 2.25 ಲಕ್ಷ ಉದ್ಯೋಗಿಗಳಿಗೆ ಈ ತಂತ್ರಜ್ಞಾನ ಕುರಿತು ತರಬೇತಿ ನೀಡಲಾಗಿದೆ ಎಂದು ಪ್ರಸಕ್ತ ವರ್ಷದ ಆರಂಭದಲ್ಲಿ ಇನ್ಫೊಸಿಸ್ ಹೇಳಿಕೆ ನೀಡಿತ್ತು.

ಜಿಎಸ್‌ಟಿ ವಂಚನೆ: ₹32,403 ಕೋಟಿ ಜಿಎಸ್‌ಟಿ ವಂಚನೆಗೆ ಸಂಬಂಧಿಸಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಲೀಲ್ ಪರೇಖ್, ‘ಈ ಕುರಿತು ಈಗಾಗಲೇ ಕಂಪನಿಯು ಸ್ಪಷ್ಟನೆ ನೀಡಿದೆ. ಬಿಎಸ್‌ಇಗೂ ಈ ಕುರಿತು ವರದಿ ಸಲ್ಲಿಸಿದೆ. ಇದರ ಹೊರತಾಗಿ ಹೊಸದಾಗಿ ಹೇಳುವುದು ಏನೂ ಇಲ್ಲ’ ಎಂದು ಹೇಳಿದ್ದಾರೆ.

ಬಾಂಗ್ಲಾದೇಶದ ರಾಜಧಾನಿ ಢಾಕಾ ನಗರದಲ್ಲಿ ಒಂದು ತಿಂಗಳಿನಿಂದ ಸ್ಥಗಿತಗೊಂಡಿದ್ದ ಮೆಟ್ರೊ ಸೇವೆ ಭಾನುವಾರ ಪುನರಾರಂಭಗೊಂಡಿತು – ಎಎಫ್‌ಪಿ ಚಿತ್ರ

ಸಹಜ ಸ್ಥಿತಿಯತ್ತ ಬಾಂಗ್ಲಾ

ಢಾಕಾ (ಪಿಟಿಐ): ಇತ್ತೀಚೆಗೆ ಭಾರಿ ಹಿಂಸಾಚಾರ ನಡೆದ ಬಾಂಗ್ಲಾದೇಶದಲ್ಲಿ ಇದೀಗ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ. ದೇಶದಲ್ಲಿ ಮೆಟ್ರೊ, ಬಸ್, ಟ್ಯಾಕ್ಸಿ ಸೇವೆ ಪುನರಾರಂಭಗೊಂಡಿದೆ.

ಢಾಕಾದಲ್ಲಿ ಕಳೆದ ಒಂದು ತಿಂಗಳಿನಿಂದ ಸ್ಥಗಿತಗೊಂಡಿದ್ದ ಮೆಟ್ರೊ ಸೇವೆ ಭಾನುವಾರ ಪುನಾರಂಭಗೊಂಡಿತು. ಆದರೆ, ಪ್ರತಿಭಟನೆ ವೇಳೆ ಧ್ವಂಸಗೊಂಡಿರುವ ಎರಡು ಮೆಟ್ರೊ ನಿಲ್ದಾಣಗಳಲ್ಲಿ ಸಂಚಾರವನ್ನು ಮುಕ್ತಗೊಳಿಸ ಲಾಗಿಲ್ಲ. ಉಳಿದಂತೆ ದೇಶದಾದ್ಯಂತ ವ್ಯಾಪಾರ- ವಹಿವಾಟುಗಳು ಪುನಾರಂಭಗೊಳ್ಳುತ್ತಿವೆ. ರಾಜಧಾನಿ ಢಾಕಾದಲ್ಲಿ ಪರಿಸ್ಥಿತಿ ಇನ್ನೂ ಸಂಪೂರ್ಣವಾಗಿ ಸಹಜ ಸ್ಥಿತಿಗೆ ಮರಳಿಲ್ಲವಾದರೂ ನಿಧಾನವಾಗಿ ಸುಧಾರಿಸುತ್ತಿದೆ.

ಸರ್ಕಾರಿ ನೇಮಕಾತಿಯಲ್ಲಿನ ಮೀಸಲಾತಿ ವಿರೋಧಿಸಿ ಸರ್ಕಾರದ ವಿರುದ್ಧ ಬಾಂಗ್ಲಾದಾದ್ಯಂತ ಯುವಕರು ಮತ್ತು ವಿದ್ಯಾರ್ಥಿಗಳು ಪ್ರಾರಂಭಿಸಿದ ಪ್ರತಿಭಟನೆಯು ತೀವ್ರ ಹಿಂಸಾಚಾರಕ್ಕೆ ತಿರುಗಿತು. ಇದರಿಂದಾಗಿ ಆ.5ರಂದು ಮಾಜಿ ಪ್ರಧಾನಿ ಶೇಕ್ ಹಸೀನಾ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ ಭಾರತಕ್ಕೆ ಪಲಾಯನಗೈದರು.

ಪಾಕಿಸ್ತಾನ: ಪ್ರತ್ಯೇಕ ಅಪಘಾತ– 37 ಸಾವು

ಇಸ್ಲಾಮಾಬಾದ್/ಕರಾಚಿ (ಪಿಟಿಐ): ಪಾಕಿಸ್ತಾನದಲ್ಲಿ ಭಾನುವಾರ ಸಂಭವಿಸಿದ ಎರಡು ಪ್ರತ್ಯೇಕ ಬಸ್ ಅಪಘಾತಗಳಲ್ಲಿ 11 ಯಾತ್ರಿಗಳು ಸೇರಿದಂತೆ ಕನಿಷ್ಠ 37 ಜನರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 35 ಜನರನ್ನು ಹೊತ್ತೊಯ್ಯುತ್ತಿದ್ದ ಬಸ್ ಕಂದಕಕ್ಕೆ ಉರುಳಿದ್ದರಿಂದ 26 ಮಂದಿ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಈ ಅಪಘಾತಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

70 ಜನರನ್ನು ಹೊತ್ತೊಯ್ಯುತ್ತಿದ್ದ ಬಸ್ಸೊಂದು ಬಲೂಚಿಸ್ತಾನ್ ಪ್ರಾಂತ್ಯದ ಮಕ್ರಾನ್ ಕರಾವಳಿ ಹೆದ್ದಾರಿಯಿಂದ ಉರುಳಿ ಬಿದ್ದಿದೆ. ಈ ಅಪಘಾತದಲ್ಲಿ ಕನಿಷ್ಠ 11 ಜನರು ಮೃತಪಟ್ಟಿದ್ದು, 35 ಜನರು ಗಾಯಗೊಂಡಿದ್ದಾರೆ. ಬಸ್ ಇರಾನ್‌ನಿಂದ ಪಂಜಾಬ್ ಪ್ರಾಂತ್ಯಕ್ಕೆ ಶಿಯಾ ಯಾತ್ರಿಕರನ್ನು ಕರೆತರುತ್ತಿತ್ತು ಎನ್ನಲಾಗಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-525
ದ್ವಿತಳಿ (ಬಿ.ವಿ)	₹255-652

ಪ್ಯಾಲೆಸ್ಟೀನಿಯರ ಸಹಾಯಕ್ಕೆ ಪ್ರತಿಪಕ್ಷಗಳ ಒತ್ತಾಯ

ನವದೆಹಲಿ (ಪಿಟಿಐ): ಪ್ಯಾಲೆಸ್ಟೀನ್ ನಾಗರಿಕರ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಖಂಡಿಸಿ, ಸಂತ್ರಸ್ತರಿಗೆ ಶಾಂತಿ ಮತ್ತು ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಭಾರತ ಸರ್ಕಾರ ಕಾರ್ಯನಿರ್ವಹಿಸಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ಭಾನುವಾರ ಒತ್ತಾಯಿಸಿದ್ದಾರೆ.

ಕಾಂಗ್ರೆಸ್, ಎಸ್‌ಪಿ, ಜೆಡಿ(ಯು) ಮತ್ತು ಆಮ್ ಆದ್ಮಿ ಪಕ್ಷ ಸೇರಿದಂತೆ ಹಲವು ಪಕ್ಷಗಳ ಸದಸ್ಯರು ಸಭೆ ನಡೆಸಿ, ಪ್ಯಾಲೆಸ್ಟೀನಿಯರಿಗೆ ತಮ್ಮ ಬೆಂಬಲವಿದೆ ಎಂದು ಹೇಳಿದ್ದಾರೆ.

ಸಮಾಜವಾದಿ ಪಕ್ಷದ ಸಂಸದರಾದ ಜಾವೇದ್ ಅಲಿ ಮತ್ತು ಮೊಹಿಬ್ಬುಲಾ, ಎಎಪಿ ಸಂಸದ ಸಂಜಯ್ ಸಿಂಗ್, ಜೆಡಿಯು ನಾಯಕ ಕೆ. ಸಿ. ತ್ಯಾಗಿ ಮತ್ತು ಕಾಂಗ್ರೆಸ್‌ನ ಡ್ಯಾನಿಶ್ ಅಲಿ ಮತ್ತು ಅಲ್-ಕುದ್ಸ್‌ನ ಸಂಸದೀಯ ಲೀಗ್‌ನ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮಕ್ರಮ್ ಬಲಾವಿ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

ನಾಗರಿಕರನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುತ್ತಿದೆ ಎಂದು ಬಲಾವಿ ವಿವರಿಸಿದ್ದಾರೆ. ದಾಳಿಯಲ್ಲಿ ಸತ್ತವರಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಮತ್ತು ಮಕ್ಕಳಿದ್ದಾರೆ ಎಂದೂ ಹೇಳಿದ್ದಾರೆ.

‘ಜಿಯೋನಿಸ್ಟ್ ಆಕ್ರಮಣ ಮತ್ತು ಇಸ್ರೇಲ್‌ನಿಂದ ಪ್ಯಾಲೆಸ್ಟೀನ್ ನಾಗರಿಕರನ್ನು ಹತ್ಯೆ ಮಾಡುತ್ತಿರುವುದನ್ನು ನಾವು ಖಂಡಿಸುತ್ತೇವೆ’ ಎಂದು ವಿವಿಧ ಪಕ್ಷಗಳ ಸದಸ್ಯರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉತ್ತರ ಇಸ್ರೇಲ್‌ನಾದ್ಯಂತ ಮೊಳಗಿದ ಸೈರನ್‌ನ ಎಚ್ಚರಿಕೆ ಸಂದೇಶ

ಇಸ್ರೇಲ್ ಮೇಲೆ ಹಿಜ್ಬುಲ್ಲಾ ರಾಕೆಟ್ ದಾಳಿ

ಜೆರುಸಲೇಂ (ಎಪಿ): ‘ಸಂಘಟನೆಯ ಸಂಸ್ಥಾಪಕ ಹಾಗೂ ಕಮಾಂಡರ್ ಫೌವಾದ್ ಶುಕುರ್ ಅವರನ್ನು ಇಸ್ರೇಲ್ ಸೇನೆಯು ಹತ್ಯೆ ಮಾಡಿದೆ. ಇದಕ್ಕೆ ಪ್ರತೀಕಾರವಾಗಿ ಇಸ್ರೇಲ್‌ನ ವಿವಿಧ ನಗರಗಳನ್ನು ಗುರಿಯಾಗಿಸಿಕೊಂಡು 320ಕ್ಕೂ ಹೆಚ್ಚು ರಾಕೆಟ್ ಹಾಗೂ ಡ್ರೋನ್ ದಾಳಿ ನಡೆಸಿದ್ದೇವೆ. ಅಲ್ಲಿನ ಸೇನೆಯನ್ನು ಗುರಿಯಾಗಿಸಿಕೊಂಡು ನಡೆದಿರುವ ಈ ದಾಳಿಯು ಪ್ರತೀಕಾರದ ಮೊದಲ ಹಂತವಾಗಿದೆ’ ಎಂದು ಲೆಬನಾನ್‌ನ ಹಿಜ್ಬುಲ್ಲಾ ಸಂಘಟನೆ ತಿಳಿಸಿದೆ.

ಹಿಜ್ಬುಲ್ಲಾ ಸಂಘಟನೆಯು ಪ್ರತೀಕಾರದ ದಾಳಿಯ ಘೋಷಣೆ ಪ್ರಕಟಿಸಿದ ಬೆನ್ನಲ್ಲೇ ದಕ್ಷಿಣ ಲೆಬನಾನ್‌ನ ನಗರಗಳನ್ನು ಗುರಿಯಾಗಿಸಿಕೊಂಡು ಭಾನುವಾರ ಬೆಳಿಗ್ಗೆ ಇಸ್ರೇಲ್ ಕೂಡ ವಾಯುದಾಳಿ ನಡೆಸಿತು.

ಹಿಜ್ಬುಲ್ಲಾದಿಂದ ರಾಕೆಟ್ ದಾಳಿ ಆರಂಭವಾಗುತ್ತಿದ್ದಂತೆಯೇ, ಉತ್ತರ ಇಸ್ರೇಲ್‌ನಾದ್ಯಂತ ಎಚ್ಚರಿಕೆ ಸಂದೇಶವಾಗಿ ಸೈರನ್‌ಗಳು ಮೊಳಗಿದವು. ಮುಂಜಾಗ್ರತಾ ಕ್ರಮವಾಗಿ ಒಂದು ಗಂಟೆ ಬೆನ್- ಗುರಿಯಾನ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮುಚ್ಚಲಾಗಿತ್ತು. ನಾಗರಿಕರಿಗೂ ಬಾಂಬ್ ನಿರೋಧಕ ಅಡಗುತಾಣಗಳಲ್ಲಿ ಇರುವಂತೆ ಇಸ್ರೇಲ್ ಸೇನೆ ಸೂಚಿಸಿತ್ತು.

ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ವಾಯುದಾಳಿಯಿಂದ ಸಿರಿಯಾದ 17 ವರ್ಷದ ವ್ಯಕ್ತಿಯೊಬ್ಬರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ’ ಎಂದು ಲೆಬನಾನ್‌ನ ಆರೋಗ್ಯ ಇಲಾಖೆ ತಿಳಿಸಿದೆ.

ಎರಡೂ ರಾಷ್ಟ್ರಗಳಲ್ಲಿ ಪರಿಸ್ಥಿತಿ ಗಂಭೀರವಾಗಿದ್ದು, ಸಾವು–ನೋವು ಕುರಿತು ಇದುವರೆಗೂ ಮಾಹಿತಿ ಲಭ್ಯವಾಗಿಲ್ಲ.

ಸಂಧಾನ ಮಾತುಕತೆ: ಮತ್ತೊಂದೆಡೆ, ಇಸ್ರೇಲ್ ಹಾಗೂ ಹಮಾಸ್ ಬಂಡುಕೋರರ ನಡುವೆ ನಡೆಯುತ್ತಿರುವ ಯುದ್ಧವನ್ನು ಕೊನೆಗಾಣಿಸಲು ಈಜಿಪ್ಟ್ ಮತ್ತೊಂದು ಸುತ್ತಿನ ಮಾತುಕತೆ ನಡೆಸಿತು. ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾ ಅಲ್- ಶಿಸಿ ಹಾಗೂ ಅಮೆರಿಕ ಸೇನೆಯ ಜಂಟಿ ಅಧ್ಯಕ್ಷ ಚಾರ್ಲ್ಸ್ ಬ್ರೌನ್ ನೇತೃತ್ವದಲ್ಲಿ ಕೈರೊ ನಗರದಲ್ಲಿ ಭಾನುವಾರ ಸಭೆ ನಡೆಯಿತು. ಗಾಜಾದಲ್ಲಿ ಕದನ ವಿರಾಮ ಒಪ್ಪಂದ ಯಶಸ್ವಿಯಾದರೆ, ದಾಳಿಯನ್ನು ನಿಲ್ಲಿಸಲಾಗುವುದು ಎಂದು ಲೆಬನಾನ್‌ನ ಹಿಜ್ಬುಲ್ಲಾ ಗುಂಪು ತಿಳಿಸಿದೆ.

ಮತ್ತೊಂದೆಡೆ ಸಿರಿಯಾ, ಇರಾಕ್, ಯೆಮೆನ್‌ನಲ್ಲಿರುವ ಬಂಡುಕೋರ ಗುಂಪುಗಳಿಗೆ ಇರಾನ್ ತನ್ನ ಬೆಂಬಲ ಘೋಷಿಸಿದ್ದು, ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆಯುವ ಸಾಧ್ಯತೆಗಳಿವೆ.

ವಿಮಾನ ಸಂಚಾರ ರದ್ದು: ‘ಇಸ್ರೇಲ್‌ನ ಟೆಲ್ ಅವೀವ್, ಲೆಬನಾನ್‌ನ ಬೈರೂತ್ ನಗರಕ್ಕೆ ತೆರಳುವ ಎಲ್ಲ ವಿಮಾನಗಳ ಹಾರಾಟವನ್ನು ಸೋಮವಾರದವರೆಗೆ ರದ್ದುಗೊಳಿಸಲಾಗಿದೆ’ ಎಂದು ಏರ್ ಫ್ರಾನ್ಸ್ ಕಂಪನಿ ತಿಳಿಸಿದೆ.

‘ಈ ಮಾರ್ಗದಲ್ಲಿ ಮತ್ತೆ ಸಂಚಾರ ಆರಂಭಿಸುವ ಕುರಿತಂತೆ ಹೊಸತಾಗಿ ಭದ್ರತಾ ಪರಿಶೀಲನೆ ನಡೆಸಿದ ನಂತರ ನಿರ್ಧರಿಸಲಾಗುವುದು’ ಎಂದು ಏರ್‌ಲೈನ್ಸ್ ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಜರ್ಮನ್‌ನ ಪ್ರಮುಖ ಏರ್‌ಲೈನ್ಸ್ ಸಂಸ್ಥೆ ‘ಲುಫ್ತಾನ್ಸಾ’ ಕೂಡ ಸೆಪ್ಟೆಂಬರ್ 2ರ ತನಕ ಟೆಲ್ ಅವೀವ್, ಬೈರೂತ್ ನಗರಕ್ಕೆ ವಿಮಾನ ಹಾರಾಟವನ್ನು ರದ್ದುಗೊಳಿಲಾಗಿದೆ ಎಂದು ತಿಳಿಸಿದೆ.

ಲೆಬನಾನ್‌ನ ಹಿಜ್ಬುಲ್ಲಾ ಗುಂಪು ಭಾನುವಾರ ನಡೆಸಿದ ರಾಕೆಟ್ ದಾಳಿಯಿಂದ ಹಾನಿಗೆ ಒಳಗಾದ ಇಸ್ರೇಲ್‌ನ ಏಕರ್ ಪಟ್ಟಣ —ಎಎಫ್‌ಪಿ ಚಿತ್ರ

> **ದೇಶದ ಉತ್ತರ ಭಾಗದ ನಿವಾಸಿಗಳು ಮರಳಿ ಮನೆ ಸೇರುವವರೆಗೂ ನಾವು ಹೋರಾಟವನ್ನು ಮಾಡಲು ನಿರ್ಧರಿಸಿದ್ದೇವೆ. ಯಾರು ನಮಗೆ ಹಾನಿ ಮಾಡುತ್ತಾರೋ, ಅವರಿಗೆ ನಾವು ಹಾನಿ ಮಾಡುತ್ತೇವೆ**
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾಮೋಟಾರ್ಸ್ ಗಳಿಗೆ SSLC,PUC,Degree,ITI, DIPLOMAದವರು.18,100/- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000-20,000/- ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

16 ದಿನಗಳ ಅಯೋಧ್ಯೆ,ಕಾಶಿ ಅಮೃತಸರ್ ಪ್ರವಾಸ ಮತ್ತು 11ದಿನಗಳ ಅಯೋಧ್ಯೆ,ನೇಪಾಳ ಪ್ರವಾಸ 18.11.24. 14ದಿನಗಳ ಚಾರ್ಧಾಮ್ ಪ್ರವಾಸ 28.9.24 Twite Holidays. Contact: 8088559962.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homepages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹೆಚ್‌ಪಿಎಸ್‌ಎಲ್ ಬೆಂಗಳೂರು ಬೇಸಿಗೆ ಡರ್ಬಿ • 7 ಸಾವಿರಕ್ಕೂ ಹೆಚ್ಚು ವೀಕ್ಷಕರು

ಸ್ಯಾಂಟಿಸಿಮೊಗೆ ರೋಚಕ ಜಯ

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ ಎಚ್‌ಪಿಎಸ್‌ಎಲ್ ಬೇಸಿಗೆ ಡರ್ಬಿಯಲ್ಲಿ ಸ್ಯಾಂಟಿಸಿಮೊ ಅಶ್ವವು ಗೆಲುವಿನ ಗುರಿಯತ್ತ ಶರವೇಗದಲ್ಲಿ ಮುನ್ನುಗ್ಗಿತು (ಎಡ ಚಿತ್ರ). ಪ್ರಶಸ್ತಿ ಜಯಿಸಿದ ಸ್ಯಾಂಟಿಸಿಮೊ ಕುದುರೆ ಹಾಗೂ ಜಾಕಿ ಎಸ್. ಸಕ್ಲೇನ್ ಅವರೊಂದಿಗೆ ಮಾಲೀಕರಾದ ಗೇನ್ಸ್‌ವಿಲ್ ಸ್ಟಡ್ ಮತ್ತು ಎಜಿಆರ್‌ಎಲ್ ಫಾರ್ಮ್ ಪ್ರೈವೇಟ್ ಲಿಮಿಟೆಡ್‌ನ (ಎಡದಿಂದ) ಕಿಶೋರ್ ರಂಗ್ಟಾ, ಗೌತಮ್ ಪಿ ಲಾಲ್, ಜಾಯದೀಪ್ ದತ್ತ ಗುಪ್ತಾ, ಅಚ್ಯುತನ್ ಸಿದ್ಧಾರ್ಥ್, ಪೆಸಿ ಶ್ರಾಫ್ (ಟ್ರೇನರ್) ಅವರಿದ್ದಾರೆ –ಪ್ರಜಾವಾಣಿ ಚಿತ್ರಗಳು/ಎಸ್. ಕೆ. ದಿನೇಶ್

• ಡಿ. ರವಿಕುಮಾರ್

ಬೆಂಗಳೂರು: ಭಾನುವಾರ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಸೇರಿದ್ದ ರೇಸ್‌ಪ್ರೇಮಿಗಳ ಎದೆಬಡಿತ ಹೆಚ್ಚಿಸಿದ್ದ ಪೈಪೋಟಿಯಲ್ಲಿ ಸ್ಯಾಂಟಿಸಿಮೊ ಅಶ್ವವು ಎಚ್‌ಪಿಸಿಎಲ್ ಬೇಸಿಗೆ ಡರ್ಬಿ ಕಿರೀಟವನ್ನು ಗೆದ್ದುಕೊಂಡಿತು.

2000 ಮೀಟರ್ಸ್ ಅಂತರದ ರೇಸ್‌ನಲ್ಲಿ ಎಕ್ಸಲೆಂಟ್ ಲಾಸ್ ಕುದುರೆಯನ್ನು ಕೊನೆಯ ಹಂತದಲ್ಲಿ ಹಿಂದಿಕ್ಕಿದ ಸ್ಯಾಂಟಿಸಿಮೊ ಕುದುರೆಯ ವೇಗ ಮತ್ತು ಜಾಕಿ ಸಕ್ಲೇನ್ ಅವರ ಕೌಶಲ ಅಮೋಘವಾಗಿತ್ತು.

ಸ್ಯಾಂಟಿಸಿಮೊ ಎರಡು ನಿಮಿಷ 03.58 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಇದರೊಂದಿಗೆ ಸ್ಯಾಂಟಿಸುಮೊ ತನ್ನ ಮಾಲೀಕರಿಗೆ ₹ 99 ಲಕ್ಷ ಹಾಗೂ ₹ 1.5 ಲಕ್ಷ ಮೌಲ್ಯದ ಟ್ರೋಫಿಯನ್ನು ಗೆದ್ದುಕೊಟ್ಟಿತು.

ಕಣದಲ್ಲಿ ಹನ್ನೊಂದು ಕುದುರೆಗಳಿದ್ದವು. ಆರಂಭದಲ್ಲಿ ದಿ ಪ್ಯಾಂಥರ್ ಮುನ್ನಡೆಯಲ್ಲಿತ್ತು. ಆದರೆ, 1200 ಮೀಟರ್ಸ್‌ನಲ್ಲಿ ಎಲ್ವಿನ್ ನೈಟ್ ಮುನ್ನುಗ್ಗಿ ಲೀಡ್ ಪಡೆಯಿತು. ಕೊನೆಯ 500 ಮೀಟರ್ಸ್ ವರೆಗೂ ಎಲ್ವಿನ್ ನೈಟ್ ಹಿಂದೆ ದಿ ಪ್ಯಾಂಥರ್, ಎಕ್ಸಲೆಂಟ್ ಲಾಸ್, ಅಮೇಜಿಂಗ್ ರೂಲರ್, ಸ್ಯಾಂಟಿಸಿಮೊ, ಪಾಸಿಟಾನೊ ಮತ್ತು ಉಳಿದ ಐದು ಕುದುರೆಗಳು ಓಡುತ್ತಲಿದ್ದವು.

ಕೊನೆಯ ನೇರ ಓಟದ 400 ಮೀಟರ್ಸ್‌ನಲ್ಲಿ ಎಕ್ಸಲೆಂಟ್ ಲಾಸ್ ವೇಗವಾಗಿ ಮುನ್ನುಗ್ಗಿ ಲೀಡ್ ಪಡೆಯಿತು. ಅದೇ ಕ್ಷಣದಲ್ಲಿ, ಸ್ಯಾಂಟಿಸಿಮೊ ಸಹ ತನ್ನ ವೇಗ ಹೆಚ್ಚಿಸಿ ಕೊಂಡಿತು. ಅಲ್ಲಿಂದ ಇವರೆಡು ಕುದುರೆಗಳ ನಡುವೆ ನಡೆದ ತೀವ್ರ ಪೈಪೋಟಿಯು ನೋಡುಗರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿತು. ಕೊನೆಗೆ ಎಕ್ಸಲೆಂಟ್ ಲಾಸ್ ಅಲ್ಪ ಅಂತರದಲ್ಲಿ ಎರಡನೇ ಸ್ಥಾನ ಪಡೆದರು. ಒಂದು ಲೆಂಗ್ತ್ ಹಿಂದೆ ಇದ್ದ ಪೊಸಿಟಾನೊ ಮೂರನೇ ಸ್ಥಾನ ಪಡೆಯಿತು. .

ಗ್ರೈನ್ಸ್‌ವಿಲ್ ಸ್ಟಡ್ ಮತ್ತು ಅಗ್ರಿಕಲ್ಚರಲ್ ಫಾರ್ಮ್ ಲಿಮಿಟೆಡ್ ಮತ್ತು ಇತರರ ಒಡೆತನದ ಸ್ಯಾಂಟಿಸಿಮೊ ಕುದುರೆಗೆ ಪೆಸಿ ಶ್ರಾಫ್ ತರಬೇತಿ ನೀಡಿದ್ದಾರೆ.

ಬುಕ್‌ಮೇಕರ್ಸ್‌ಗಳ ಅನುಪಸ್ಥಿತಿ ಇದ್ದರೂ, ಇಂದಿನ ಡರ್ಬಿ ರೇಸ್ ದಿನದಂದು ಸುಮಾರು ಏಳು ಸಾವಿರ ರೇಸ್‌ಪ್ರಿಯರು ಬಿ.ಟಿ.ಸಿ ಆವರಣದಲ್ಲಿ ಉತ್ಸುಕತೆಯಿಂದ ರೇಸ್‌ಗಳನ್ನು ವೀಕ್ಷಿಸಿದರು.

ಚಿತ್ರನಟ ಅಭಿಷೇಕ್ ಅಂಬರೀಶ್ ರೇಸ್ ವೀಕ್ಷಿಸಿದರು

ಪೆಸಿ ಶ್ರಾಫ್ ಯಶಸ್ಸಿನ ಓಟ

ಮುಂಬೈ ಮೂಲದ ಟ್ರೇನರ್ ಪೆಸಿ ಶ್ರಾಫ್ ಅವರಿಗೆ ಇದು ಸತತ ಮೂರನೇ ಬೇಸಿಗೆ ಡರ್ಬಿ ಕಿರೀಟವಾಗಿದೆ.

2022ರಲ್ಲಿ ಝುಕರೇಲಿ ಮತ್ತು ಹೋದ ವರ್ಷ ಜಮಾರಿ ಅಶ್ವಗಳು ಬೇಸಿಗೆ ಡರ್ಬಿ ಜಯಿಸಿದ್ದವು. ಅಲ್ಲದೇ 2022ರ ಚಳಿಗಾಲದ ಡರ್ಬಿಯನ್ನೂ ಪೆಸಿ ಅವರ ಕುದುರೆಯೇ ಜಯಿಸಿತ್ತು.

'ಬೆಂಗಳೂರು ನನಗೆ ಅಚ್ಚುಮೆಚ್ಚಿನ ನಗರ. 1980ರ ದಶಕದಿಂದಲೂ ಈ ಊರು ನನಗೆ ತವರುಮನೆಯಂತಾಗಿದೆ. ಇಲ್ಲಿಯ ವಾತಾವರಣ ಅತ್ಯಂತ ಸುಂದರ ಮತ್ತು ಟ್ರ್ಯಾಕ್ ಅದ್ಭುತವಾಗಿದೆ. ಅಲ್ಲದೇ ಬಹಳಷ್ಟು ಸ್ನೇಹಿತರ ಬಳಗವು ಇಲ್ಲಿದೆ. ಅವರೆಲ್ಲರೂ ನನ್ನ ಕುಟುಂಬದ ಸದಸ್ಯರಂತಿದ್ದಾರೆ. ಇಲ್ಲಿ ಜಯಿಸುವುದೆಂದರೆ ನನಗೆ ಅಪಾರ ಖುಷಿ' ಎಂದು 59 ವರ್ಷದ ಪೆಸಿ ಶ್ರಾಫ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಸ್ಯಾಂಟಿಸಿಮೊ ಅಶ್ವದ ವಿಶೇಷವೆಂದರೆ ಅದು ಸ್ಪ್ರಿಂಟರ್. ಉತ್ತಮ ಸಾಮರ್ಥ್ಯವಿರುವ ಅಶ್ವ ಅದು. ನಮ್ಮ ತಂಡದಲ್ಲಿರುವ ಎಲ್ಲರ ಪರಿಶ್ರಮ, ನನ್ನ ಪತ್ನಿ (ಟೀನಾ) ಅವರ ನಿರಂತರ ಕಾಳಜಿಯಿಂದಾಗಿ ಈ ಸಾಧನೆ ಸಾಧ್ಯವಾಗಿದೆ. ಮಗ (ಯೋಹಾನ್) ಕುದುರೆಗಳಿಗೆ ಪೌಷ್ಟಿಕ ಆಹಾರ ನೀಡುವ ಕ್ರಮವೂ ಗೆಲುವಿನಲ್ಲಿ ಪ್ರಮುಖವಾಗಿದೆ. ಜಾಕಿ ಸಕ್ಲೇನ್ ಅತ್ಯದ್ಭುತ' ಎಂದು ಶ್ರಾಫ್ ಶ್ಲಾಘಿಸಿದರು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಬೇಸಿಗೆ ಡರ್ಬಿ ವೀಕ್ಷಿಸಲು ಸೇರಿದ್ದ ರೇಸ್‌ಪ್ರಿಯರು

ಡರ್ಬಿ ರೇಸ್ ಫಲಿತಾಂಶ (ಮೊದಲ ನಾಲ್ಕು ಸ್ಥಾನ)

ಸ್ಥಾನ	ಕುದುರೆ ಹೆಸರು	ಹೊತ್ತ ತೂಕ	ಟ್ರೈನರ್	ಜಾಕಿ	ಸಮಯ	ಬಹುಮಾನದ ಮೊತ್ತ (₹)
1	ಸ್ಯಾಂಟಿಸಿಮೊ	56	ಪೆಸಿ ಶ್ರಾಫ್	ಎಸ್.ಸಕ್ಲೈನ್	2ನಿ,3.58ಸೆ	₹98,01,000
2	ಎಕ್ಸಲೆಂಟ್ ಲಾಸ್	54.5	ರಾಜೇಶ್ ನರೇಡು	ಸೂರಜ್ ನರೇಡು	2:3.76	₹32,67,000
3	ಪೊಸಿಟಾನೊ	56	ಎಸ್.ಎಸ್. ಅತೋಲಾ ಹಿ	ಅಕ್ಷಯ್ ಕುಮಾರ್	2:3.91	₹16,33,500
4	ವಿಕ್ಟರ್ ಹುಗೊ	56	ಇರ್ಫಾನ್ ಘಟಾಲ	ಎಲ್.ಎ.ರೊಜಾರಿಯೊ	2ನಿ,4.56ಸೆ	₹8,16,750

ಬಾಂಗ್ಲಾದೇಶಕ್ಕೆ ಚಾರಿತ್ರಿಕ ಗೆಲುವು

ಪಾಕಿಸ್ತಾನ ವಿರುದ್ಧ ಶಾಂತೋ ಪಡೆಗೆ ಜಯ

ರಾವಲ್ಪಿಂಡಿ, ಪಾಕಿಸ್ತಾನ (ಎಪಿ): ರಾಜಕೀಯ ದಳ್ಳುರಿಯಲ್ಲಿ ಬೆಂದಿರುವ ಬಾಂಗ್ಲಾದೇಶದ ಜನರಿಗೆ ಒಂದಿಷ್ಟು ಚೇತೋಹಾರಿಯಾಗುವಂತಹ ಚಾರಿತ್ರಿಕ ಸಾಧನೆಯನ್ನು ಅಲ್ಲಿಯ ಕ್ರಿಕೆಟ್ ತಂಡ ಭಾನುವಾರ ಮಾಡಿದೆ.

ಪಾಕಿಸ್ತಾನ ತಂಡವನ್ನು ಅದರ ನೆಲದಲ್ಲಿಯೇ 10 ವಿಕೆಟ್‌ಗಳಿಂದ ಮಣಿಸಿದೆ. ಪಾಕ್ ವಿರುದ್ಧ ಬಾಂಗ್ಲಾ ಜಯಿಸಿದ ಮೊದಲ ಟೆಸ್ಟ್ ಪಂದ್ಯ ಇದಾಗಿದೆ. ಉಭಯ ತಂಡಗಳು ಇದುವರೆಗೆ 14 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಅದರಲ್ಲಿ 12 ಪಂದ್ಯಗಳನ್ನು ಪಾಕ್ ಜಯಿಸಿತ್ತು. ಒಂದು ಡ್ರಾ ಆಗಿತ್ತು.

ಎಡಗೈ ಸ್ಪಿನ್ನರ್ ಶಕೀಬ್ ಅಲ್ ಹಸನ್ (ಬಾಂಗ್ಲಾದ ಈ ಹಿಂದಿನ ಪ್ರಧಾನಿ ಶೇಖ್ ಹಸೀನಾ ಅವರ ಅಧಿಕಾರಾವಧಿಯಲ್ಲಿ ಸಂಸದರಾಗಿದ್ದರು) ಅವರು 3 ಹಾಗೂ ಹಾಗೂ ಮೆಹಿದಿ ಹಸನ್ ಮಿರಾಜ್ 4 ವಿಕೆಟ್‌ಗಳನ್ನು ಗಳಿಸಿ ಪಾಕ್ ತಂಡಕ್ಕೆ ಬಲವಾದ ಪೆಟ್ಟುಕೊಟ್ಟರು. ಇದರಿಂದಾಗಿ ಪಂದ್ಯದ ಕೊನೆಯ ದಿನದಾಟದಲ್ಲಿ ನಾಟಕೀಯ ರೀತಿಯಲ್ಲಿ ಕುಸಿಯಿತು. ಪಾಕ್ ತಂಡಕ್ಕೆ ಕೇವಲ 30 ರನ್‌ಗಳ ಗೆಲುವಿನ ಗುರಿ ನೀಡಿತು. ಬಾಂಗ್ಲಾ ತಂಡವು ವಿಕೆಟ್ ನಷ್ಟವಿಲ್ಲದೇ ಕೇವಲ 6.3 ಓವರ್‌ಗಳಲ್ಲಿ ಗುರಿ ಮುಟ್ಟಿ ಗೆದ್ದಿತು.

ಮೊದಲ ಇನಿಂಗ್ಸ್‌ನಲ್ಲಿ 448 ರನ್ ಗಳಿಸಿದ್ದ ಆತಿಥೇಯ ತಂಡವು ಡಿಕ್ಲೇರ್ ಮಾಡಿಕೊಂಡಿತ್ತು. ಆದರೆ ಬಾಂಗ್ಲಾ ತಂಡವು 565 ರನ್‌ಗಳ ಬೃಹತ್ ಮೊತ್ತ ಗಳಿಸಿ 117 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಬಾಂಗ್ಲಾ ತಂಡಕ್ಕೆ ಸವಾಲಿನ ಗುರಿ ನೀಡುವ ಹಾದಿಯಲ್ಲಿ ಪಾಕ್ ಎಡವಿತು.

ಅಬ್ದುಲ್ಲಾ ಸಿದ್ಧೀಕ್ (37; 86ಎ) ಮತ್ತು ಅರ್ಧಶತಕ ಗಳಿಸಿದ ಮೊಹಮ್ಮದ್ ರಿಜ್ವಾನ್ (51; 80ಎ) ಅವರಿಬ್ಬರ ಹೋರಾಟದ ಬಲದಿಂದ 146 ರನ್ ಗಳಿಸಿತು. ಅದರೆ ಇದು ಪಾಕ್ ತಂಡಕ್ಕೆ ಜಯ ಕೊಡಿಸಲು ಸಾಕಾಗಲಿಲ್ಲ. ಇದರಿಂದಾಗಿ ಶಾನ್ ಮಸೂದ್ ನಾಯಕತ್ವದ ಪಾಕ್ ತಂಡವು ಆಘಾತ ಅನುಭವಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 113 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 448 ಡಿಕ್ಲೇರ್ಡ್. **ಬಾಂಗ್ಲಾದೇಶ:** 167.3 ಓವರ್‌ಗಳಲ್ಲಿ 565. **ಎರಡನೇ ಇನಿಂಗ್ಸ್: ಪಾಕಿಸ್ತಾನ:** 55.5 ಓವರ್‌ಗಳಲ್ಲಿ 146 (ರಿಜ್ವಾನ್ 51, ಶಕೀಬ್ ಅಲ್ ಹಸನ್ 44ಕ್ಕೆ3, ಮೆಹದಿ ಹಸನ್ ಮಿರಾಜ್ 21ಕ್ಕೆ4) **ಬಾಂಗ್ಲಾದೇಶ:** 6.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 30 (ಝುಕೀರ್ ಹಸನ್ ಔಟಾಗದೆ 15, ಶಾದ್ಮನ್ ಇಸ್ಲಾಂ ಔಟಾಗದೆ 9) **ಫಲಿತಾಂಶ:** ಬಾಂಗ್ಲಾದೇಶ ತಂಡಕ್ಕೆ 10 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ಮುಷ್ಫಿಕುರ್ ರಹೀಮ್.

ಬಾಂಗ್ಲಾದೇಶ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ವಿಶ್ವ ಜೂನಿಯರ್ ಸ್ನೂಕರ್: ನತಾಶಾಗೆ ಜಯ

ಬೆಂಗಳೂರು: ಭಾರತದ ನತಾಶಾ ಚೇತನ್ ಅವರು ಇಲ್ಲಿ ನಡೆಯುತ್ತಿರುವ 21 ವರ್ಷದೊಳಗಿನವರ ಸ್ನೂಕರ್ ವಿಶ್ವ ಚಾಂಪಿಯನ್‌ಷಿಪ್ ಮಹಿಳೆಯರ ವಿಭಾಗದಲ್ಲಿ ಜಯಿಸಿದರು.

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ನಡೆಯುತ್ತಿರುವ ಸ್ಪರ್ಧೆಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ನತಾಶಾ ಅವರು 2-1 (67-25, 33-59, 73-23)ರಿಂದ ಭಾರತದವರೇ ಆದ ಸಮೀಕ್ಷಾ ದೇವನ್ ವಿರುದ್ಧ ಜಯಿಸಿದರು.

ಈ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ; ಸೆತಾಯಿಶ್ ಅಮಿರ್‌ಘಿಮಿ (ಇರಾನ್) ಅವರು 2-0 (47-16, 34-8) ರಿಂದ ನೂತ್ ಅಲ್ಬಾಲವಿ ವಿರುದ್ಧ; ಮಿಲಿಕಾ ನಜಾಫಿ (ಇರಾನ್) 2–0ಯಿಂದ ಮನರ್ ಅಲ್ಬಾಲಾವಿ ವಿರುದ್ಧ; ಚಾನ್ ವಾಲ್ ಲ್ಯಾಮ್ (ಹಾಂಗ್‌ಕಾಂಗ್) 2–0ಯಿಂದ ಜಿಯಾ ಸೆಹಗಲ್ ವಿರುದ್ಧ; ಆರ್.ಟಿ. ಮೋಹಿತಾ (ಭಾರತ) 2–0ಯಿಂದ ಶಾದಿ ನಜಾಫಿ (ಇರಾನ್) ವಿರುದ್ಧ; ನತಾಶ್ 2–1ರಿಂದ ಸೆತಾಯಿಶ್ ವಿರುದ್ಧ; ಸಮೀಕ್ಷಾ 2–0ಯಿಂದ ಅಲ್ಬಾಲವಿ ಎದುರೂ; ಅನ್ನಾ 2–0ಯಿಂದ ಮೆಲಿಕಾ ಎದುರೂ, ನರುಚಾ ಫೋಯೆಂಫೂಲ್ (ಥಾಯ್ಲೆಂಡ್) 2–0ಯಿಂದ ಅಲ್ಬಾಲ್‌ವಿ ವಿರುದ್ಧ ಜಯಿಸಿದರು.

17 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಅರವ್ ಸಂಚೇತಿ (ಭಾರತ) 3–1ರಿಂದ ಮುತ್ತಿಮಿ ಅಲ್ ಸಾಧಿ (ಒಮನ್) ಎದುರು: ಲೆನ್ನಾರ್ಟ್ ತೊಮೀ (ಜರ್ಮನಿ) 3–2ರಿಂದ ಝಿಯಾದ್ ಅಲ್ಕಾಬನಿ (ಕೆಎಸ್‌ಎ) ವಿರುದ್ಧ; ಮಿಸಾಗ ದೆಹಘನಿ (ಇರಾನ್) 3–1ರಿಂದ ಕ್ರಾಜಿಸ್‌ಟಾಫ್ ಸಿಜಾಪ್ನಿಕ್ (ಪೊಲೆಂಡ್) ವಿರುದ್ಧ, ಶಾಮ್ ಅಲ್ವಿನ್ (ಭಾರತ) 3–1ರಿಂದ ಅಬ್ಬುಲ್ ಅಲ್ಕಾಬನಿ ವಿರುದ್ಧ ಗೆದ್ದರು.

ಭಾರತದ ನತಾಶಾ ಚೇತನ್ –ಪ್ರಜಾವಾಣಿ ಚಿತ್ರ/ಎಸ್. ಕೆ.ದಿನೇಶ್

ಪ್ಯಾರಾಲಿಂಪಿಕ್ಸ್‌ಗೆ ಭಾರತದ 179 ಮಂದಿಯ ತಂಡ

ನವದೆಹಲಿ (ಪಿಟಿಐ): ಪ್ಯಾರಿಸ್‌ನಲ್ಲಿ ಇದೇ 28ರಿಂದ ಪ್ರಾರಂಭವಾಗಲಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ 84 ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಅವರ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಅಧಿಕಾರಿಗಳು, ವೈಯಕ್ತಿಕ ತರಬೇತುದಾರರು ಮತ್ತು ಸಹಾಯಕ ಸಿಬ್ಬಂದಿ ಸೇರಿದಂತೆ ಒಟ್ಟು 95 ಮಂದಿ ಸ್ಪರ್ಧಿಗಳ ಜೊತೆಯಲ್ಲಿರಲಿದ್ದಾರೆ.

ಭಾರತದ ಪ್ಯಾರಾಲಿಂಪಿಕ್ಸ್ ತಂಡದಲ್ಲಿ ಒಟ್ಟು 179 ಮಂದಿ ಇರಲಿದ್ದಾರೆ. 95ರಲ್ಲಿ 77 ಮಂದಿ ತಂಡದ ಅಧಿಕಾರಿಗಳು, ಒಂಬತ್ತು ವೈದ್ಯಕೀಯ ಸಿಬ್ಬಂದಿ ಮತ್ತು ಒಂಬತ್ತು ಇತರ ಅಧಿಕಾರಿಗಳು ಇದ್ದಾರೆ.

ಭಾರತವು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ 12 ಕ್ರೀಡೆಗಳಲ್ಲಿ ಸ್ಪರ್ಧಿಸಲು 84 ಕ್ರೀಡಾಪಟುಗಳನ್ನು ಕಳುಹಿಸುತ್ತಿದೆ. 2021ರಲ್ಲಿ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಒಂಬತ್ತು ಕ್ರೀಡೆಗಳಲ್ಲಿ 54 ಮಂದಿ ಸ್ಪರ್ಧಿಸಿದ್ದರು.

'ಕೆಲವು ಪ್ಯಾರಾ ಅಥ್ಲೀಟ್‌ಗಳ ವಿಶೇಷ ಅಗತ್ಯಗಳನ್ನು ಪರಿಗಣಿಸಿ ವೈಯಕ್ತಿಕ ತರಬೇತುದಾರರನ್ನು ತಂಡದಲ್ಲಿ ಸೇರಿಸಲಾಗಿದೆ. ಅವರು ಚೆಫ್ ಡಿ ಮಿಷನ್/ತಂಡದ ಮುಖ್ಯ ತರಬೇತುದಾರರ ನಿರ್ದೇಶನದಂತೆ ಇತರ ಆಟಗಾರರಿಗೆ ಅಗತ್ಯ ಸೇವೆಗಳನ್ನು ಒದಗಿಸುತ್ತಾರೆ' ಎಂದು ಸಚಿವಾಲಯ ತಿಳಿಸಿದೆ.

ಟೋಕಿಯೊ ಪ್ಯಾರಾಲಿಂಪಿಕ್ಸ್ ಗೆದ್ದ ಚಿನ್ನದ ಪದಕವನ್ನು ಕಾಪಾಡಿಕೊಳ್ಳುವ ನಿರೀಕ್ಷೆಯಲ್ಲಿರುವ ಜಾವೆಲಿನ್ ಥ್ರೋ ಅಥ್ಲೀಟ್ ಸುಮಿತ್ ಅಂಟಿಲ್ ಮತ್ತು ಶೂಟರ್ ಅವನಿ ಲೇಖರಾ ಅವರಂತಹ ಸ್ಪರ್ಧಿಗಳಿಗೆ ಇದು ಅನುಕೂಲವಾಗಲಿದೆ.

'ಯಾವುದೇ ಪ್ಯಾರಾ ಕ್ರೀಡೆಯಲ್ಲಿ ಭಾಗವಹಿಸುವವರಿಗೆ ವೈಯಕ್ತಿಕ ತರಬೇತುದಾರರು ಮತ್ತು ನೆರವು ಸಿಬ್ಬಂದಿಯ ಅಗತ್ಯವಿರುತ್ತದೆ. ಆದ್ದರಿಂದ ಹೆಚ್ಚಿನ ಬೆಂಬಲ ಸಿಬ್ಬಂದಿ ಹೊಂದಿರುವುದು ಹೊಸದೇನಲ್ಲ' ಎಂದು ತಂಡದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚೆಫ್ ಡಿ ಮಿಷನ್ ಸತ್ಯ ಪ್ರಕಾಶ್ ಸಾಂಗ್ವಾನ್ ಅವರೊಂದಿಗೆ ಪ್ಯಾರಿಸ್‌ಗೆ ತೆರಳಿದ ಪ್ಯಾರಾಲಿಂಪಿಕ್ ಸಂಸ್ಥೆಯ ಅಧ್ಯಕ್ಷ ದೇವೇಂದ್ರ ಝಝಾರಿಯಾ ಅವರು 'ನಾನು ಕ್ರೀಡಾಗ್ರಾಮದ ಹೊರಗೆ ಇದ್ದು ಎಲ್ಲ ಅಥ್ಲೀಟ್‌ಗಳನ್ನು ನೋಡಿಕೊಳ್ಳುತ್ತೇನೆ' ಎಂದು ಹೇಳಿದ್ದಾರೆ. ಕೆಲ ಸ್ಪರ್ಧೆಗಳು ಪ್ಯಾರಿಸ್‌ನಿಂದ ಹೊರಗಡೆ ನಡೆಯಲಿವೆ.

'ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಹತ್ತಕ್ಕೂ ಹೆಚ್ಚು ಚಿನ್ನದ ಪದಕ ಜಯಿಸುವ ಗುರಿ ಇದೆ. ಒಟ್ಟು 25ಕ್ಕೂ ಹೆಚ್ಚು ಪದಕಗಳನ್ನು ಭಾರತ ಸ್ಪರ್ಧಿಗಳು ಗೆಲ್ಲಲಿದ್ದಾರೆ' ಎಂದು ಝಝಾರಿಯಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪ್ಯಾರಾಲಿಂಪಿಕ್ಸ್‌ಗಾಗಿ ನವದೆಹಲಿಯಿಂದ ಪ್ಯಾರಿಸ್‌ಗೆ ಪ್ರಯಾಣ ಬೆಳೆಸುತ್ತಿರುವ ಭಾರತದ ಸ್ಪರ್ಧಿಗಳು –ಪಿಟಿಐ ಚಿತ್ರ

ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಆಸ್ಟ್ರಿಯಾಕ್ಕೆ ತೆರಳಿದ ಲಕ್ಷ್ಯ

ನವದೆಹಲಿ (ಪಿಟಿಐ): ಭಾರತದ ಅಗ್ರ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಮುಂಬರುವ ಬಿಡಬ್ಲ್ಯುಎಫ್ ಟೂರ್ನಿಗಳಲ್ಲಿ ಆಡಲಿದ್ದಾರೆ. ಅದಕ್ಕಾಗಿ ದೈಹಿಕ ಸಾಮರ್ಥ್ಯ ಮೌಲ್ಯಮಾಪನಕ್ಕಾಗಿ ಭಾನುವಾರ ಆಸ್ಟ್ರಿಯಾಕ್ಕೆ ತೆರಳಿದ್ದಾರೆ.

ಪ್ಯಾರಿಸ್‌ನಲ್ಲಿ ಒಲಿಂಪಿಕ್ ಪದಕವನ್ನು ಗೆಲ್ಲುವ ಸಮೀಪ ಬಂದಿದ್ದ ಸೇನ್ ಅಂತಿಮವಾಗಿ ನಾಲ್ಕನೇ ಸ್ಥಾನ ಪಡೆದಿದ್ದರು. ತಮ್ಮ ಫಿಟ್‌ನೆಸ್ ಮಟ್ಟ ಹೆಚ್ಚಿಸಿಕೊಳ್ಳಲು ವಿವರವಾದ ಪರೀಕ್ಷೆಗಾಗಿ ಸಾಲ್ಜ್‌ಬರ್ಗ್‌ನ ರೆಡ್ ಬುಲ್ ಅಥ್ಲೀಟ್ ಪರ್ಫಾರ್ಮೆನ್ಸ್ ಸೆಂಟರ್‌ನಲ್ಲಿ ಸರಣಿ ಪರೀಕ್ಷೆಗಳಿಗೆ ಒಳಗಾಗಲಿದ್ದಾರೆ.

'ಲಕ್ಷ್ಯ ಕೆಲವು ದೈಹಿಕ ಪರೀಕ್ಷೆಗಳಿಗಾಗಿ ಆಸ್ಟ್ರಿಯಾಕ್ಕೆ ಹೋಗುತ್ತಿದ್ದಾರೆ. ಅಲ್ಲಿನ ಉತ್ತಮ ಕ್ರೀಡಾಸಂಸ್ಥೆಯಲ್ಲಿ ಅವರು ಸ್ವಲ್ಪ ದೈಹಿಕ ಕಸರತ್ತು ಮಾಡಲು ಬಯಸಿದ್ದಾರೆ. ಒಂದು ವಾರದ ನಂತರ ಹಿಂತಿರುಗುತ್ತಾರೆ' ಎಂದು ವಿಮಲ್ ಕುಮಾರ್ ತಿಳಿಸಿದರು.

ಸೆಪ್ಟೆಂಬರ್ ಅಂತ್ಯದಲ್ಲಿ ಹಾಂಗ್‌ಕಾಂಗ್ ಸೂಪರ್ 500 ಮತ್ತು ಚೀನಾ ಓಪನ್ ಸೂಪರ್ 1000 ಟೂರ್ನಿಯಲ್ಲಿ ಲಕ್ಷ್ಯ ಅವರು ಆಡುವ ಸಾಧ್ಯತೆಯಿದೆ.

ಲಕ್ಷ್ಯ ಸೇನ್

ಮುನ್ನಡೆ ರಕ್ಷಿಸಿಕೊಂಡ ಸೂರ್ಯಶೇಖರ ಗಂಗೂಲಿ

ಪ್ರಜಾವಾಣಿ ವಾರ್ತೆ

ಗುರುಗ್ರಾಮ: ಆರು ಬಾರಿಯ ಚಾಂಪಿಯನ್ ಸೂರ್ಯಶೇಖರ ಗಂಗೂಲಿ, 61ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ 9ನೇ ಸುತ್ತಿನಲ್ಲಿ ಭಾನುವಾರ ಮೂರನೇ ಶ್ರೇಯಾಂಕದ ಎಸ್. ಪಿ.ಸೇತುರಾಮನ್ ಜೊತೆ 'ಡ್ರಾ' ಮಾಡಿಕೊಂಡರು. ಆ ಮೂಲಕ ಒಟ್ಟು ಎಂಟು ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ.

ಈ ಟೂರ್ನಿಯಲ್ಲಿ ಇನ್ನು ಎರಡು ಸುತ್ತಿನ ಪಂದ್ಯಗಳು ಉಳಿದಿವೆ. ಗಂಗೂಲಿ 16 ವರ್ಷಗಳ ಹಿಂದೆ (2008ರಲ್ಲಿ) ಕೊನೆಯ ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. 2003ರಿಂದ 2008ರವರೆಗೆ ಅವರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಆಧಿಪತ್ಯ ಸ್ಥಾಪಿಸಿದ್ದರು.

ನಾಲ್ಕನೇ ಬೋರ್ಡ್‌ನಲ್ಲಿ ಅರ್ಜುನ್ ಆದಿರೆಡ್ಡಿ (ತೆಲಂಗಾಣ) ಅವರನ್ನು ಸೋಲಿಸಿದ ರೈಲ್ವೇಸ್‌ನ ಐಎಂ ಅರಣ್ಯಕ್ ಘೋಷ್ ಅವರು ಒಟ್ಟು ಏಳೂವರೆ ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನದಲ್ಲಿದ್ದಾರೆ.

ಗ್ರ್ಯಾಂಡ್‌ಮಾಸ್ಟರ್‌ಗಳಾದ ಸೇತುರಾಮನ್ (ಪಿಎಸ್‌ಪಿಬಿ), ಎಂ.ಆರ್.ಲಲಿತ್‌ಬಾಬು (ಆಂಧ್ರಪ್ರದೇಶ), ಶ್ರೀರಾಮ್ ಝಾ (ಎಲ್‌ಐಸಿ), ಕಾರ್ತಿಕ್ ವೆಂಕಟರಾಮನ್ (ಆಂಧ್ರಪ್ರದೇಶ) ಸೇರಿದಂತೆ 13 ಆಟಗಾರರು ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ರೈಲ್ವೇಸ್‌ನ ನೀಲಾಶ್ ಸಹಾ (7) ಅವರು ಕರ್ನಾಟಕದ ಅಂಟಾನಿಯೊ ವಿಯಾನಿ ಡಿಕುನ್ಹ (6) ಅವರನ್ನು ಸೋಲಿಸಿದರು. ಕರ್ನಾಟಕದ ಎ.ಬಾಲಕಿಶನ್ (6.5) ಅವರು ಪಶ್ಚಿಮ ಬಂಗಾಳದ ಸೌಮಿಕ್ ಬಂದೋಪಾಧ್ಯಾಯ (5.5) ಅವರನ್ನು ಮಣಿಸಿದರು.

ಡಿಪಿಎಪಿ: 13 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗೆ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಾರ್ಟಿ (ಡಿಪಿಎಪಿ) ತನ್ನ 13 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಅವರು ಸ್ಥಾಪಿಸಿರುವ ಪಕ್ಷಕ್ಕೆ ಇದು ಚೊಚ್ಚಲ ವಿಧಾನಸಭಾ ಚುನಾವಣೆಯಾಗಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಆರ್. ಎಸ್.ಚಿಬ್ ಅವರು ಪಟ್ಟಿ ಬಿಡುಗಡೆ ಮಾಡಿದರು.

ಪಕ್ಷವು ಮಾಜಿ ಸಚಿವ ಅಬ್ದುಲ್ ಮಜೀದ್ ವಾನಿ ಅವರನ್ನು ಡೋಡಾ ಪೂರ್ವ ಕ್ಷೇತ್ರದಿಂದ ಕಣಕ್ಕಿಳಿಸಲು ನಿರ್ಧರಿಸಿದೆ. ಮಾಜಿ ಶಾಸಕ ಮೊಹಮ್ಮದ್ ಅಮೀನ್ ಬಟ್ (ದೇವಸರ್ ಕ್ಷೇತ್ರ), ಮಾಜಿ ಅಡ್ವೊಕೇಟ್ ಜನರಲ್ ಮೊಹಮ್ಮದ್ ಅಸ್ಲಮ್ ಗೋನಿ (ಭದ್ರವಾಹ್), ಡಿಡಿಸಿ ಸದಸ್ಯ ಸಲೀಂ ಪಾರಿ (ದೂರೂ) ಮತ್ತು ಮುನೀರ್ ಅಹ್ಮದ್ ಮೀರ್ (ಲೊಲಾಬ್) ಅವರು ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ.

ಬಿಲಾಲ್ ಅಹ್ಮದ್ ದೇವಾ (ಅನಂತನಾಗ್ ಪಶ್ಚಿಮ), ಗುಲಾಂ ನಬಿ ವಾನಿ (ರಾಜಪೊರಾ), ಮೀರ್ ಅಲ್ತಾಫ್ ಹುಸೇನ್ (ಅನಂತನಾಗ್), ಕೈಸರ್ ಸುಲ್ತಾನ್ ಗನ್ನೈ (ಗಂದೇರಬಲ್), ಗುಲಾಂ ನಬಿ ಬಟ್ (ಈದ್ಗಾ), ಅಮೀರ್ ಅಹ್ಮದ್ ಬಟ್ (ಖಾನ್ಯಾರ್), ನಿಸಾರ್ ಅಹ್ಮದ್ ಲೋನ್ (ಗುರೇಜ್) ಮತ್ತು ಪೀರ್ ಬಿಲಾಲ್ ಅಹ್ಮದ್ (ಹಜ್ರತ್‌ಬಾಲ್) ಅವರೂ ಕಣಕ್ಕಿಳಿಯಲಿದ್ದಾರೆ.

ಅಮೀರ್ ಅಹ್ಮದ್ ಬಟ್ ಅವರು ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಶ್ರೀನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು.

'ಜೆಇಐ ನಿಷೇಧ ಹಿಂಪಡೆಯಲಿ': 'ಜಮಾತ್-ಎ-ಇಸ್ಲಾಮಿ (ಜೆಇಐ), ಜಮ್ಮು ಕಾಶ್ಮೀರ ಸಂಘಟನೆ ಮೇಲೆ ಹೇರಿರುವ ನಿಷೇಧವನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕು ಎಂದು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ಆಗ್ರಹಿಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಜೆಇಐ ನಾಯಕರು ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿರುವುದು ಒಳ್ಳೆಯ ಬೆಳವಣಿಗೆ ಎಂದಿದ್ದಾರೆ.

'ಕೇಂದ್ರ ಸರ್ಕಾರವು ಜೆಇಐ ಮೇಲಿನ ನಿಷೇಧ ಹಿಂಪಡೆಯಬೇಕೆಂದು ಬಯಸುತ್ತೇನೆ. ಏಕೆಂದರೆ, ಮುಸ್ಲಿಮರನ್ನು ಹತ್ಯೆ ಮಾಡುವ, ದೇಶದಲ್ಲಿ ವಿಷವನ್ನು ಹರಡುವ ಕೋಮುವಾದಿ ಸಂಘಟನೆಗಳನ್ನು ನಿಮಗೆ ನಿಷೇಧಿಸಲು ಆಗಿಲ್ಲ. ಹೀಗಿರುವಾಗ, ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿರುವ, 2014ರ ಪ್ರವಾಹ ಮತ್ತು ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರಿಗೆ ಸಹಾಯ ಮಾಡಿರುವ ಜೆಇಐ ಮೇಲೆ ನಿಷೇಧ ಏಕೆ?' ಎಂದು ಮುಫ್ತಿ ಅವರು ಪ್ರಶ್ನಿಸಿದ್ದಾರೆ.

ಗಂದೇರ್‌ಬಲ್ ಕ್ಷೇತ್ರದಿಂದ ಒಮರ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ/ಗಂದೇರ್‌ಬಲ್: ಅಜ್ಜ ಶೇಖ್ ಮೊಹಮ್ಮದ್ ಅಬ್ದುಲ್ಲಾ, ತಂದೆ ಫಾರುಕ್ ಅಬ್ದುಲ್ಲಾ.. ಹೀಗೆ ಒಮರ್ ಅಬ್ದುಲ್ಲಾ ಅವರ ಕುಟುಂಬದವರು ಹಿಂದಿನಿಂದಲೂ ಪ್ರತಿನಿಧಿಸುತ್ತಾ ಬಂದಿರುವ ಗಂದೇರ್‌ಬಲ್ ಕ್ಷೇತ್ರದಿಂದಲೇ ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಒಮರ್ ಅವರು ಸ್ಪರ್ಧಿಸಲಿದ್ದಾರೆ ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಭಾನುವಾರ ಘೋಷಿಸಿದೆ.

ನ್ಯಾಷನಲ್ ಕಾನ್ಫರೆನ್ಸ್‌ನ (ಎನ್‌ಸಿ) ಉಪಾಧ್ಯಕ್ಷರಾಗಿರುವ ಒಮರ್ ಅಬ್ದುಲ್ಲಾ ಕೂಡ ಇದೇ ಕ್ಷೇತ್ರದಿಂದ ಹಲವು ಬಾರಿ ಸ್ಪರ್ಧಿಸಿದ್ದರು. ಒಮ್ಮೆ ಶಾಸಕರಾಗಿಯೂ ಆಯ್ಕೆ ಆಗಿದ್ದರು. ಆದರೆ, 2008ರ ನಂತರ ಅವರು ಈ ಕ್ಷೇತ್ರದಿಂದ ಸ್ಪರ್ಧಿಸಿರಲಿಲ್ಲ. ಸುಮಾರು 16 ವರ್ಷಗಳ ಬಳಿಕ ಈ ಮತ್ತೊಮ್ಮೆ ತಮ್ಮ ಕುಟುಂಬದ ಬಿಗಿ ಹಿಡಿತವಿರುವ ಗಂದೇರ್‌ಬಲ್‌ನಿಂದ ಅವರು ಸ್ಪರ್ಧಿಸುತ್ತಿದ್ದಾರೆ.

2002ರಲ್ಲಿ ಮೊದಲ ಬಾರಿಗೆ ಒಮರ್ ಅವರು ಇಲ್ಲಿಂದ ಸ್ಪರ್ಧಿಸಿದ್ದರು. ಆಗ ಅವರು ಪಿಡಿಪಿ ಪಕ್ಷದ ಖಾಜಿ ಮೊಹಮ್ಮದ್ ಅಫ್ಜಲ್ ಅವರ ಎದುರು ಸೋತಿದ್ದರು. ನಂತರ 2008ರಲ್ಲಿ ಮತ್ತೊಮ್ಮೆ ಇದೇ ಕ್ಷೇತ್ರದಿಂದ ಸ್ಪರ್ಧಿಸಿ ಅಫ್ಜಲ್ ಅವರ ವಿರುದ್ಧ ಗೆಲುವು ಸಾಧಿಸಿದ್ದರು. 2014ರ ಚುನಾವಣೆಯಲ್ಲಿ ಒಮರ್ ಅವರು ಗಂದೇರ್‌ಬಲ್ ಬದಲು ಬೇರೆ ಕ್ಷೇತ್ರವನ್ನು ಆರಿಸಿಕೊಂಡಿದ್ದರು.

'ನಮ್ಮ ವಿರುದ್ಧ ಅಭ್ಯರ್ಥಿ ನಿಲ್ಲಿಸಬೇಡಿ'

ನಮ್ಮ ಅಜೆಂಡಾಗಳನ್ನು ಒಪ್ಪಿಕೊಂಡರೆ, ಎನ್‌ಸಿ–ಕಾಂಗ್ರೆಸ್ ಮೈತ್ರಿಕೂಟಕ್ಕೆ ಬೆಂಬಲ ನೀಡುವುದಾಗಿ ನೀವು (ಪಿಡಿಪಿ) ಹೇಳಿದ್ದೀರಿ. ಈಗ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಇರುವುದನ್ನೇ ನೀವು ನಿಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿದ್ದೀರಿ. ಆದ್ದರಿಂದ, ನಮ್ಮ ಮೈತ್ರಿಯ ಅಜೆಂಡಾವನ್ನು ನೀವು ಒಪ್ಪಿಕೊಂಡಂತಾಯಿತು. ಹಾಗಾಗಿ, ನಮ್ಮ ಮೈತ್ರಿಕೂಟದ ಅಭ್ಯರ್ಥಿ ಎದುರು ನೀವು ನಿಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಡಿ.

ಒಮರ್ ಅಬ್ದುಲ್ಲಾ, ಉಪಾಧ್ಯಕ್ಷ, ಎನ್‌ಸಿ

ಬೆಂಗಳೂರಿಗೆ ಹೊರಟಿದ್ದ ಬಾಂಗ್ಲಾ ಪ್ರಜೆಗಳು ವಾಪಸ್

ಗುವಾಹಟಿ (ಪಿಟಿಐ): 'ಬಾಂಗ್ಲಾದೇಶದಿಂದ ಸೂಕ್ತ ದಾಖಲೆಗಳಿಲ್ಲದೇ ಅಕ್ರಮವಾಗಿ ಭಾರತ ಪ್ರವೇಶಿಸಿದ್ದ ಇಬ್ಬರು ವ್ಯಕ್ತಿಗಳನ್ನು ಅಸ್ಸಾಂನಲ್ಲಿ ಪತ್ತೆಹಚ್ಚಲಾಗಿದ್ದು, ಮರಳಿ ಅವರ ದೇಶಕ್ಕೆ ಕಳುಹಿಸಲಾಗಿದೆ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದ್ದಾರೆ.

'ಶುಕ್ರವಾರ ರಾತ್ರಿ ಬದರ್‌ಪುರ್ ರೈಲು ನಿಲ್ದಾಣದಲ್ಲಿ ಪತ್ತೆಯಾದ ಇಬ್ಬರನ್ನು ಮರಳಿ ಅವರ ದೇಶಕ್ಕೆ ಕಳುಹಿಸಲಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಢಾಕಾದ ಮೊಂಡೆಲ್‌ಗಂಜ್ ಪೊಲೀಸ್ ಠಾಣಾ ವ್ಯಾಪ್ತಿಯ ಮಾಸೂಮ್ ಖಾನ್, ಸೋನಿಯಾ ಅಖ್ತರ್ ಎಂದು ಗುರುತಿಸಲಾಗಿದೆ. ಅವರು ಮಾಧೋಪುರ್ ಮಾರ್ಗವಾಗಿ ಅಗರ್ತಲಾ ಮೂಲಕ ಬೆಂಗಳೂರಿಗೆ ಹೊರಟಿದ್ದರು. ಗಡಿ ಭದ್ರತಾ ಪಡೆ, ಅಸ್ಸಾಂ ಪೊಲೀಸರು ಪತ್ತೆ ಹಚ್ಚಿ, ಬಾಂಗ್ಲಾದೇಶಕ್ಕೆ ಮರಳಿ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ' ಎಂದಿದ್ದಾರೆ.

'ಕಳೆದೊಂದು ತಿಂಗಳಲ್ಲಿ ಸೂಕ್ತ ದಾಖಲೆಗಳಿಲ್ಲದೇ, ಭಾರತ ಪ್ರವೇಶಿಸಿದ್ದ 30 ಮಂದಿ ಬಾಂಗ್ಲಾದೇಶಿಯರನ್ನು ಪತ್ತೆಹಚ್ಚಿ, ಮರಳಿ ಅವರ ದೇಶಕ್ಕೆ ಕಳುಹಿಸಲಾಗಿದೆ. ಹಿಂದೆ ಕಳುಹಿಸಿದವರೆಲ್ಲರೂ ಬೆಂಗಳೂರು ಸೇರಿದಂತೆ ದಕ್ಷಿಣ ಭಾರತದ ನಗರಗಳಲ್ಲಿರುವ ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಹುಡುಕಿಕೊಂಡು ಹೊರಟಿದ್ದರು' ಎಂದು ಅವರು ಮಾಹಿತಿ ನೀಡಿದರು.

ಶರಣಾದ ನಕ್ಸಲ್ ದಂಪತಿ

ಧಮ್ತಾರಿ (ಪಿಟಿಐ): ಛತ್ತೀಸಗಢದ ಧಮ್ತಾರಿ ಜಿಲ್ಲೆಯಲ್ಲಿ ನಕ್ಸಲ್ ದಂಪತಿ ಗಡಿ ಭದ್ರತಾ ಪಡೆಯ ಮುಂದೆ ಶರಣಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಟಿಕೇಶ್ವರ ವಟ್ಟಿ ಅಲಿಯಾಸ್ ಟಿಕೇಶ್ (38) ಮತ್ತು ಆತನ ಪತ್ನಿ ಗಣೇಶಿ ನೇತಮ್ ಅಲಿಯಾಸ್ ಪ್ರಮೀಳಾ (32) ಮಾವೋವಾದಿ ಸಿದ್ಧಾಂತಗಳಿಂದ ನಿರಾಸೆಗೊಂಡು ಶನಿವಾರ ಶರಣಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಕ್ಸಲ್ ದಂಪತಿಯ ಸುಳಿವು ನೀಡಿದವರಿಗೆ ತಲಾ ₹5 ಲಕ್ಷ ಬಹುಮಾನವನ್ನು ಘೋಷಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

2013 ಮತ್ತು 2023ರ ನಡುವೆ ಧಮ್ತಾರಿಯಲ್ಲಿ 18, ಗರಿಯಾಬಂದ್‌ನಲ್ಲಿ 12 ಮತ್ತು ಕಾಂಕೇರ್ ಜಿಲ್ಲೆಗಳಲ್ಲಿ ಎರಡು ಹಿಂಸಾತ್ಮಕ ಘಟನೆಗಳಲ್ಲಿ ಟಿಕೇಶ್ ಭಾಗಿಯಾಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಧಮ್ತಾರಿ, ಗರಿಯಾಬಂದ್ ಮತ್ತು ಕಾಂಕೇರ್ ಜಿಲ್ಲೆಗಳಲ್ಲಿ ನಡೆದ ಸುಮಾರು 14 ಹಿಂಸಾತ್ಮಕ ಘಟನೆಗಳಲ್ಲಿ ಪ್ರಮೀಳಾ ಭಾಗಿಯಾಗಿದ್ದರು.

ಟಿಕೇಶ್ ಗೋಬ್ರಾ ಲೋಕಲ್ ಆರ್ಗನೈಸೇಶನ್ ಸ್ಕ್ವಾಡ್ ಮತ್ತು ನಿಷೇಧಿತ ಮಾವೋವಾದಿಗಳ ನಗ್ರಿ ಪ್ರದೇಶ ಸಮಿತಿಯ ಸದಸ್ಯರಾಗಿದ್ದರು ಮತ್ತು ಪ್ರಮೀಳಾ ಸೀತಾನದಿ ಪ್ರದೇಶ ಸಮಿತಿಯ ಸದಸ್ಯರಾಗಿದ್ದರು ಎಂದು ಅವರು ಹೇಳಿದರು.

ಎಡಪಂಥೀಯ ತೀವ್ರವಾದಕ್ಕೆ ಹಣಕಾಸು ನೆರವು ನಿಲ್ಲಬೇಕು: ಶಾ

ರಾಯಪುರ (ಪಿಟಿಐ): ಎಡಪಂಥೀಯ ತೀವ್ರವಾದದ (ಎಲ್‌ಡಬ್ಲ್ಯುಇ) ವಿರುದ್ಧದ ಅಭಿಯಾನಕ್ಕೆ ಇನ್ನಷ್ಟು ಉತ್ತೇಜನದ ಅಗತ್ಯವಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಹೇಳಿದರು.

ನವ ರಾಯಪುರದಲ್ಲಿ ಎಲ್‌ಡಬ್ಲ್ಯುಇ ಮತ್ತು ಅಂತರ ರಾಜ್ಯ ಸಹಕಾರ ಕುರಿತ ಪರಿಶೀಲನಾ ಸಭೆಯಲ್ಲಿ ಎಲ್‌ಡಬ್ಲ್ಯು-ಇಗೆ ಆರ್ಥಿಕ ನೆರವು ಮತ್ತು ಶಸ್ತ್ರಾಸ್ತ್ರ ಪೂರೈಕೆ ನಿಲ್ಲಬೇಕು ಎಂದು ಹೇಳಿದರು. ಸಭೆಯಲ್ಲಿ ನಕ್ಸಲ್ ಪೀಡಿತ ರಾಜ್ಯಗಳ ಏಳು ಅಧಿಕಾರಿಗಳು ಭಾಗಿಯಾಗಿದ್ದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಶಾ, 'ಎಲ್‌ಡಬ್ಲ್ಯುಇ ಸದ್ಯ ನಿರ್ಣಾಯಕ ಹಂತದಲ್ಲಿದೆ. 2026ರ ಮಾರ್ಚ್ ಒಳಗಾಗಿ ನಕ್ಸಲ್ ಜಾಲವನ್ನು ಸಂಪೂರ್ಣವಾಗಿ ನಾಶ ಮಾಡಲು ಸರ್ಕಾರವು ಬದ್ಧವಾಗಿದೆ. ಅದಕ್ಕಾಗಿ ಚುರುಕಾಗಿ ಕಾರ್ಯ ನಿರ್ವಹಿಸಬೇಕಾದ ಅಗತ್ಯವಿದೆ' ಎಂದರು.



ಅಮಿತ್ ಶಾ

ಬರೇಲಿ: ಕಾನ್‌ಸ್ಟೆಬಲ್ ಪರೀಕ್ಷಾರ್ಥಿ ಆತ್ಮಹತ್ಯೆ

ಬರೇಲಿ (ಪಿಟಿಐ): ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆ ಚೆನ್ನಾಗಿ ಮಾಡಿಲ್ಲ ಎಂಬ ಕಾರಣಕ್ಕೆ 24 ವರ್ಷದ ಯುವಕನೊಬ್ಬ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಫತೇಗಂಜ್ ಪೂರ್ವ ಪ್ರದೇಶದ ಸೈದ್‌ಪುರದ ಮಂಜಾ ಗ್ರಾಮದ ಯೋಗೇಶ್ ಕುಮಾರ್ ಶನಿವಾರ ತಡರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿ ಗೌರವ್ ಸಿಂಗ್ ತಿಳಿಸಿದ್ದಾರೆ.

ಕುಮಾರ್ ಅವರ ತಂದೆ ಅಜಯ್‌ಪಾಲ್ ಯಾದವ್ ಅವರು, ತಮ್ಮ ಮಗ ಕಳೆದ ಐದು ವರ್ಷಗಳಿಂದ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ಎಂದು ಪೊಲೀಸರಿಗೆ ತಿಳಿಸಿದ್ದಾರೆ.

ಮಹಾರಾಜ ಟ್ರೋಫಿ: ಮಿಂಚಿದ ಶುಭಾಂಗ್, ಕ್ರಾಂತಿಕುಮಾರ್

ಚೇತನ್ ಆರ್ಭಟ; ಬೆಂಗಳೂರಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಂಚಿನ ಬ್ಯಾಟಿಂಗ್ ಮಾಡಿದ ಎಲ್.ಆರ್. ಚೇತನ್ ಅವರಿಂದಾಗಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ಎದುರು ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 56 ರನ್‌ಗಳಿಂದ ಜಯಿಸಿದ ಬೆಂಗಳೂರು ತಂಡವು ಒಟ್ಟು 10 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಒಟ್ಟು ಏಳು ಪಂದ್ಯಗಳನ್ನು ಆಡಿರುವ ತಂಡವು ಐದರಲ್ಲಿ ಜಯಿಸಿದೆ. 2ರಲ್ಲಿ ಸೋತಿದೆ.

ಟಾಸ್ ಗೆದ್ದ ಮೈಸೂರು ವಾರಿಯರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಬೌಲರ್ ಸಿ.ಎ. ಕಾರ್ತಿಕ್ (33ಕ್ಕೆ3) ಮತ್ತು ಅನುಭವಿ ಸ್ಪಿನ್ನರ್ ಕೆ. ಗೌತಮ್ (27ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು. ಆದರೆ ಅವರ ಪ್ರಯತ್ನಕ್ಕೆ ಚೇತನ್ (88; 53ಎ) ಅಡ್ಡಿಯಾದರು. 9 ಬೌಂಡರಿ, 5 ಸಿಕ್ಸರ್ ಸಿಡಿಸಿದ ಚೇತನ್ ತಂಡವನ್ನು ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಿಂದ ಪಾರು ಮಾಡಿದರು.

ನಿಶ್ಚಲ್ ಮತ್ತು ನಿರಂಜನ್ ನಾಯಕ ಅವರು ವೈಫಲ್ಯ ಅನುಭವಿಸಿದರು. ಚೇತನ್ ಅವರಿಗೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಶಿವಕುಮಾರ್ ರಕ್ಷಿತ್ (29; 28ಎ) ಮತ್ತು ಸೂರಜ್ ಅಹುಜಾ (32; 16ಎ) ಅವರು ಉತ್ತಮ ಜೊತೆ ನೀಡಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 189 ರನ್ ಗಳಿಸಲು ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ಮೈಸೂರು ತಂಡವನ್ನು 133 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಶುಭಾಂಗ್ (28ಕ್ಕೆ3) ಮತ್ತು ಕ್ರಾಂತಿ ಕುಮಾರ್ (18ಕ್ಕೆ3) ಯಶಸ್ವಿಯಾದರು. ನಾಯಕ ಕರುಣ್ (13 ರನ್)ಮತ್ತು ಸಮಿತ್ ದ್ರಾವಿಡ್ (5 ರನ್) ಅವರೂ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 189 (ಎಲ್.ಆರ್. ಚೇತನ್ 88, ಶಿವಕುಮಾರ್ ರಕ್ಷಿತ್ 29, ಸೂರಜ್ ಅಹುಜಾ 32, ಸಿ.ಎ. ಕಾರ್ತಿಕ್ 33ಕ್ಕೆ3, ಕೆ. ಗೌತಮ್ 27ಕ್ಕೆ2) ಮೈಸೂರು ವಾರಿಯರ್ಸ್: 17.5 ಓವರ್‌ಗಳಲ್ಲಿ 133 (ಎಸ್.ಯು. ಕಾರ್ತಿಕ್ 26, ಹರ್ಷಿಲ್ ಧರ್ಮಾನಿ 20, ಸುಮಿತ್ ಕುಮಾರ್ ಔಟಾಗದೆ 18, ಜೆ. ಸುಚಿತ್ 16, ಲವಿಶ್ ಕೌಶಲ್ 10ಕ್ಕೆ2, ಶುಭಾಂಗ್ ಹೆಗಡೆ 28ಕ್ಕೆ3, ಕ್ರಾಂತಿಕುಮಾರ್ 18ಕ್ಕೆ3, ಅನಿರುದ್ಧ ಜೋಶಿ 10ಕ್ಕೆ2) ಫಲಿತಾಂಶ: ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ 56 ರನ್‌ಗಳ ಜಯ. ಪಂದ್ಯದ ಆಟಗಾರ: ಎಲ್.ಆರ್. ಚೇತನ್.

ಎಲ್‌ಆರ್ ಚೇತನ್ ಅರ್ಧಶತಕದ ಸಂಭ್ರಮ

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು ಬ್ಲಾಸ್ಟರ್ಸ್	7	5	2	10	+1.197
ಹುಬ್ಬಳ್ಳಿ ಟೈಗರ್ಸ್	7	5	2	10	-0.323
ಗುಲ್ಬರ್ಗ ಮಿಸ್ಟಿಕ್ಸ್	7	4	2	9	+0.051
ಮೈಸೂರು ವಾರಿಯರ್ಸ್	8	4	4	8	+0.324
ಶಿವಮೊಗ್ಗ ಲಯನ್ಸ್	8	2	6	4	-0.881
ಮಂಗಳೂರು ಡ್ರ್ಯಾಗನ್ಸ್	7	1	5	3	-1.333

ಮನೋಹರ್ ಬೀಸಾಟ: ಲಯನ್ಸ್ ಜಯಭೇರಿ

ಅಭಿನವ್ ಮನೋಹರ್ (43; 25ಎ, 6X5) ಅವರ ಬಿರುಸಿನ ಬ್ಯಾಟಿಂಗ್‌ನಿಂದಾಗಿ ಶಿವಮೊಗ್ಗ ಲಯನ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಸಾಧಿಸಿತು.

ಟೂರ್ನಿಯಲ್ಲಿ ಸತತ 6 ಸೋಲುಗಳ ನಂತರ ಶನಿವಾರ ಹುಬ್ಬಳ್ಳಿ ತಂಡದ ಎದುರು ಶಿವಮೊಗ್ಗ ಗೆದ್ದಿತ್ತು. ಭಾನುವಾರ ಮಂಗಳೂರು ಎದುರು 3 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 7ಕ್ಕೆ152 (ನಿಕಿನ್ ಜೋಸ್ 57, ಶ್ರೇಯಸ್ ಗೋಪಾಲ್ 19, ಎಂ.ಬಿ. ದರ್ಶನ್ ಔಟಾಗದೆ 18, ಲೋಚನ್ ಗೌಡ 19, ವಿ. ಕೌಶಿಕ್ 21ಕ್ಕೆ1, ಆನಂದ್ ದೊಡ್ಡಮನಿ 26ಕ್ಕೆ1) ಶಿವಮೊಗ್ಗ ಲಯನ್ಸ್: 18.4 ಓವರ್‌ಗಳಲ್ಲಿ 7ಕ್ಕೆ 153 (ಅಭಿನವ್ ಮನೋಹರ್ 43, ರೋಹನ್ ನವೀನ್ 37, ಎಸ್. ಶಿವರಾಜ್ ಔಟಾಗದೆ 24, ಅದ್ವೈತ್ ಶೆಟ್ಟಿ 49ಕ್ಕೆ2, ಪಾರಸ್ ಗುರುಭಕ್ಷ್ ಆರ್ಯ 14ಕ್ಕೆ2) ಫಲಿತಾಂಶ:ಶಿವಮೊಗ್ಗ ಲಯನ್ಸ್‌ಗೆ 3 ವಿಕೆಟ್‌ಗಳ ಜಯ. ಪಂದ್ಯ ಆಟಗಾರ: ಅಭಿನವ್ ಮನೋಹರ್.

ಇಂದಿನ ಪಂದ್ಯಗಳು:
ಮಂಗಳೂರು ಡ್ರ್ಯಾಗನ್ಸ್–ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3)
ಬೆಂಗಳೂರು ಬ್ಲಾಸ್ಟರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ರಾತ್ರಿ 7)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್.

ರಾಜ್ಯಮಟ್ಟದ ಕ್ರಾಸ್ ಕಂಟ್ರಿ: ಕಿರಿಯರ ವಿಭಾಗದಲ್ಲಿ ಚೇತನ್ ಶ್ವೇತಾಗೆ ಪ್ರಶಸ್ತಿ

ಶಿವಾನಂದ, ರಾಶಿಗೆ ಪ್ರಥಮ ಸ್ಥಾನ

ಪ್ರಜಾವಾಣಿ ವಾರ್ತೆ

ಧಾರವಾಡ: ಜಿಲ್ಲಾ ಒಲಿಂಪಿಕ್ ಅಸೋಸಿಯೇಷನ್ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಕ್ರಾಸ್ ಕಂಟ್ರಿ 10 ಕಿ.ಮೀ ಓಟ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಬೆಳಗಾವಿಯ ಶಿವಾನಂದ ನಾಯಕ್ ಅವರು 29 ನಿಮಿಷ 20 ಸೆಕೆಂಡ್‌ಗಳಲ್ಲಿ ಕ್ರಮಿಸಿ ಹಾಗೂ ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ರಾಶಿ ಸಿ.ಎಂ ಅವರು 38 ನಿಮಿಷ 44 ಸೆಕೆಂಡ್‌ಗಳಲ್ಲಿ ಕ್ರಮಿಸಿ ಪ್ರಥಮ ಸ್ಥಾನ ಪಡೆದರು.

ಬಾಲಕರ ವಿಭಾಗದಲ್ಲಿ ಧಾರವಾಡದ ಚೇತನ್ ಹಾಗೂ ಬಾಲಕಿಯರ ವಿಭಾಗದಲ್ಲಿ ಶ್ವೇತಾ ಪ್ರಥಮ ಸ್ಥಾನ ಪಡೆದಿದ್ದಾರೆ.

ಫಲಿತಾಂಶಗಳು:10 ಕಿ.ಮೀ –ಪುರುಷರ ವಿಭಾಗ: ಶಿವಾನಂದ ನಾಯಕ್ (ಬೆಳಗಾವಿ) 1, ನಾಗರಾಜ್ ದಿವಟೆ (ಹುಬ್ಬಳ್ಳಿ) 2 , ವೆಂಕಟೇಶ್ ಕೆ.ಕೆ (ಬೆಂಗಳೂರು) 3, ಪ್ರಭು ಲಮಾಣಿ (ಬೆಂಗಳೂರು) 4, ಸಂಗಮೇಶ್ ಹಳ್ಳಿ (ಬಾಗಲಕೋಟೆ) 5, ಸಂಜು ಬೆಟ್ಟಪ್ಪನವರ (ಹಾವೇರಿ) 6ನೇ ಸ್ಥಾನ.

ಮಹಿಳಾ ವಿಭಾಗ: ರಾಶಿ ಸಿ.ಎಂ (ಬೆಂಗಳೂರು) 1, ಶಿಲ್ಪಾ ಹೊಸಮನಿ (ಧಾರವಾಡ) 2, ಎಚ್.ವಿ.ದೀಕ್ಷಾ (ಶಿವಮೊಗ್ಗ) 3, ಸುಶ್ಮಿತಾ ಮುಗಳಿ (ಧಾರವಾಡ) 4, ಸುಪ್ರಿತಾ ಸಿದ್ದಿ (ಧಾರವಾಡ) 5, ವಿಜಯಲಕ್ಷ್ಮಿ ಕರಿಲಿಂಗಣ್ಣವರ (ಧಾರವಾಡ) 6ನೇ ಸ್ಥಾನ.

4 ಕಿ.ಮಿ. –ಬಾಲಕರ ವಿಭಾಗ (16 ವರ್ಷದೊಳಗಿನವರು): ಚೇತನ್ ದೊಡ್ಡಮನಿ 1, ರಾಮನಗೌಡ ಪಾಟೀಲ2, ವೀರನಗೌಡ ಪಾಟೀಲ 3, ಕಾರ್ತಿಕ್ ತೊಡಳ್ಳಿ 4, ಬಸವರಾಜ ರಾಮಶೆಟ್ಟಿ 5, ಉಮೇಶ್ ರಾಥೋಡ್ 6ನೇ ಸ್ಥಾನ (ಎಲ್ಲರೂ ಧಾರವಾಡದವರು).

ಧಾರವಾಡದಲ್ಲಿ ಭಾನುವಾರ ನಡೆದ ಕ್ರಾಸ್ ಕಂಟ್ರಿ ಓಟದಲ್ಲಿ ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಶಿವಾನಂದ ನಾಯಕ್ (ಎಡ), ಧಾರವಾಡದಲ್ಲಿ ಭಾನುವಾರ ನಡೆದ ಕ್ರಾಸ್ ಕಂಟ್ರಿ ಓಟದಲ್ಲಿ ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ರಾಶಿ ಸಿ.ಎಂ –ಪ್ರಜಾವಾಣಿ ಚಿತ್ರಗಳು: ಬಿ.ಎಂ.ಕೇದಾರನಾಥ

ಬಾಲಕಿಯರ ವಿಭಾಗ: ಶ್ವೇತಾ ಬಡಿಗೇರ (ಧಾರವಾಡ) 1, ಲಕ್ಷ್ಮಿ ಗೋಣದಿನ್ನಿ (ಧಾರವಾಡ) 2, ಪ್ರೀತಿ ಬಿ. ಅಮಟಿ (ಹುಬ್ಬಳ್ಳಿ) 3, ಚೈತ್ರಾ ಎಂ ಪುಟ್ಟಣ್ಣನವರ (ಹುಬ್ಬಳ್ಳಿ) 4, ಪೃಥ್ವಿ ಎಚ್. ಪೂಜಾರ್ (ಧಾರವಾಡ) 5, ಹಾಗೂ ಲಕ್ಷ್ಮಿ ಬಿ.ಓಬಣ್ಣವರ (ಧಾರವಾಡ) 6ನೇ ಸ್ಥಾನ ಪಡೆದಿದ್ದಾರೆ.

ಏಷ್ಯನ್ ಬ್ಯಾಡ್ಮಿಂಟನ್: 15 ವರ್ಷದೊಳಗಿನವರ ವಿಭಾಗದಲ್ಲಿ ತನ್ವಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ತನ್ವಿ ಪತ್ರಿ, ಬ್ಯಾಡ್ಮಿಂಟನ್ ಏಷ್ಯಾ 17 ಮತ್ತು 15 ವರ್ಷದೊಳಗಿನವರ ಜೂನಿಯರ್ ಚಾಂಪಿಯನ್‌ಷಿಪ್ಸ್‌ನಲ್ಲಿ 15 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡಳು. ಚೀನಾದ ಚೆಂಗ್ಡುವಿನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ತನ್ವಿ ವಿಯೆಟ್ನಾಮಿನ ಥಿ ತು ಹುಯೆನ್ ಗುಯೆನ್ ಅವರನ್ನು ನೇರ ಗೇಮ್‌ಗಳಿಂದ ಮಣಿಸಿದಳು.

13 ವರ್ಷ ವಯಸ್ಸಿನ ತನ್ವಿ ತನಗೆ ನೀಡಿದ ಅಗ್ರ ಶ್ರೇಯಾಂಕಕ್ಕೆ ತಕ್ಕಂತೆ ಆಡಿ 22–20, 21–11 ರಿಂದ ಎರಡನೇ ಶ್ರೇಯಾಂಕದ ಹುಯೆನ್ ಮೇಲೆ ಜಯಗಳಿಸಿದಳು.

ಟೂರ್ನಿಯ ಆರಂಭದಿಂದಲೇ ತನ್ವಿ ಪ್ರಾಬಲ್ಯ ಮೆರೆದಿದ್ದು, ಆಡಿದ ಐದು ಪಂದ್ಯಗಳಲ್ಲಿ ಎದುರಾಳಿಗಳಿಗೆ ಒಂದೂ ಗೇಮ್ ಬಿಟ್ಟುಕೊಡದೇ ಚಿನ್ನದ ಪದಕ ಗೆದ್ದಳು.

ಫೈನಲ್‌ನ ಮೊದಲ ಗೇಮ್‌ನಲ್ಲಿ ತನ್ವಿ 11–17 ರಿಂದ ಹಿಂದೆಯಿದ್ದಳು. ಆದರೆ ಸಂಯಮ ವಹಿಸಿದ್ದು ಫಲನೀಡಿತು. ಗುಯೆನ್ ತಾವೇ ಆಗಿ ಸರಣಿ ತಪ್ಪುಗಳನ್ನು ಎಸಗಿದ್ದರಿಂದ ಭಾರತದ ಆಟಗಾರ್ತಿ ಚೇತರಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಅವರಿಗೆ ಪೈಪೋಟಿ ಎದುರಾಗಲಿಲ್ಲ.ಇದೇ ಚಾಂಪಿಯನ್‌ಷಿಪ್‌ನ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್‌ನಲ್ಲಿ ಜ್ಞಾನ ದತ್ತು ಶನಿವಾರ ಕಂಚಿನ ಪದಕ ಪಡೆದಿದ್ದನು.

ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದ ಅಖಿಲ ಭಾರತ ಬಿಎಸ್‌ಎನ್‌ಎಲ್ ವಾಲಿಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಕರ್ನಾಟಕ ತಂಡ. (ಎಡದಿಂದ) ನಿಂತವರು: ಜನಾರ್ದನ, ರಾಕೇಶ್, ಯಾಸಿನ್, ಅನಿಲ್ ಬರ್ನಾರ್ಡ್, ಗಣೇಶ್ ರೈ, ಮಾರುತಿ ನಾಯಕ್, ರವಿಕುಮಾರ್, ಹೆಗಡೇಕರ್, ವಿನೋದ್, ವಿಜಯ್ ದಾಸ್, ಮಹೇಶ್, ಕುಳಿತವರು: ವಿಶಾಲ್ ವಿನೋದ್.

ಬಿಎಸ್‌ಎನ್‌ಎಲ್ ವಾಲಿಬಾಲ್ ಕರ್ನಾಟಕ ತಂಡ ಚಾಂಪಿಯನ್

ಬೆಂಗಳೂರು: ಕರ್ನಾಟಕ ತಂಡ, ಕೊಯಮತ್ತೂರಿನಲ್ಲಿ ಶುಕ್ರವಾರ ಮುಕ್ತಾಯಗೊಂಡ 20ನೇ ಅಖಿಲ ಭಾರತ ಬಿಎಸ್‌ಎನ್‌ಎಲ್ ವಾಲಿಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. ಫೈನಲ್‌ನಲ್ಲಿ ಕರ್ನಾಟಕ 3–0 ಸೆಟ್‌ಗಳಿಂದ ಆತಿಥೇಯ ತಮಿಳುನಾಡು ತಂಡವನ್ನು ಸೋಕಿಸಿತು.

ವಿಓಸಿ ಪಾರ್ಕ್ ಮೈದಾನದಲ್ಲಿ ಬಿಎಸ್‌ಎನ್‌ಎಲ್ ತಮಿಳುನಾಡು ವೃತ್ತದ ಕ್ರೀಡಾ ಮತ್ತು ಸಾಂಸ್ಕೃತಿಕ ಮಂಡಳಿ ಆಶ್ರಯದಲ್ಲಿ ನಡೆದ ಮೂರು ದಿನಗಳ ಟೂರ್ನಿಯ ಅಂತಿಮ ಪಂದ್ಯದಲ್ಲಿ ಕರ್ನಾಟಕ 25–17, 25–21, 25–17 ರಿಂದ ಜಯಶಾಲಿಯಾಗಿ ಸತತ 16ನೇ ಬಾರಿ ಚಾಂಪಿಯನ್ ಪಟ್ಟ ಪಡೆಯಿತು.

ಹೈದರಾಬಾದ್ ರೇಸ್

ವಿಲ್ಲನೆಲ್ಲೆ ಗೆಲ್ಲುವ ನಿರೀಕ್ಷೆ

ಕೊರೊಮಂಡೆಲ್ ಗ್ರೊಮರ್ ಡೆಕ್ಕನ್ ಫಿಲ್ಲೀಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿಲ್ಲನೆಲ್ಲೆ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:20ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಅನೆಮಾಯ್ 1, ಟಾಕಿಂಗ್ ಸ್ಟಿಕ್ 6, ಎಕ್ಸ್‌ಕ್ಲೂಸಿವ್ ಬ್ಲ್ಯಾಕ್ 3
2ನೇ ರೇಸ್: ಲಕ್ಕಿ ಜೋನ್ 3, ಎನ್.ಆರ್.ಐ ಸೂಪರ್‌ಪವರ್ 2, ಮೆವರಿಕ್ 5
3ನೇ ರೇಸ್: ಮಿಕಿಮೊಟೊ 2, ಪಾಂಚೊ 5, ಎಕ್ಸೊನೆಂಟ್ 8
4ನೇ ರೇಸ್: ಡೆಕ್ಕನ್ ಸ್ಪಿರಿಟ್ 9, ಹೋಪಿಂಗ್ ಸ್ಕೈ 8, ಎನ್ಕೋರ್ 6
5ನೇ ರೇಸ್: ಲಾಸ್ಟ್ ವಿಶ್ 1, ಎನ್.ಆರ್.ಐ ಡಬಲ್‌ಪವರ್ 6, ಆಂಜಿಯೊ 2
6ನೇ ರೇಸ್: ವಿಲ್ಲನೆಲ್ಲೆ 8, ಡಿವೈನ್ ಆರ್ಟ್ 1, ಮದರ್ಸ್ ಗ್ರೇಸ್ 5
7ನೇ ರೇಸ್: ಸ್ಟಾರ್ ಕ್ರೂಜ್ 2, ಬ್ಯಾಟ್ಲ್ ಆನ್ 8, ವಾಂಡ್ರಿಂಗ್ ವಾರಿಯರ್.

ಉತ್ತಮ ಬೆಟ್: ಮಿಕಿಮೊಟೊ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಆಸ್ಟ್ರೇಲಿಯಾ ‘ಎ’ಗೆ ನಿರೀಕ್ಷಿತ ಜಯ

ಗೋಲ್ಡ್ ಕೋಸ್ಟ್ (ಆಸ್ಟ್ರೇಲಿಯಾ), (ಪಿಟಿಐ): ಮಧ್ಯಮ ವೇಗಿ ಟೆಸ್ ಫ್ಲಿಂಟಾಫ್ (39ಕ್ಕೆ3) ಮತ್ತು ಆಫ್ ಸ್ಪಿನ್ನರ್ ಚಾರ್ಲಿ ನಾಟ್ (34ಕ್ಕೆ3) ಅವರ ಪರಿಣಾಮಕಾರಿ ದಾಳಿಗೆ ಉರುಳಿದ ಭಾರತ ‘ಎ’ ತಂಡ ಮಹಿಳೆಯರ ಏಕೈಕ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ‘ಎ’ ಎದುರು ಭಾನುವಾರ 45 ರನ್‌ಗಳ ಸೋಲನುಭವಿಸಿತು.

ಸಂಕ್ಷಿಪ್ತ ಸ್ಕೋರು: ಒಂದನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 212, ಭಾರತ ಎ: 184; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 260; ಭಾರತ ಎ: 92.5 ಓವರುಗಳಲ್ಲಿ 243 (ಶುಭಾ ಸತೀಶ್ 45, ಉಮಾ ಚೆಟ್ರಿ 47, ಟೆಸ್ ಫ್ಲಿಂಟಾಫ್ 39ಕ್ಕೆ3, ಚಾರ್ಲಿ ನಾಟ್ 34ಕ್ಕೆ3, ಗ್ರೇಸ್ ಪಾರ್ಸನ್ಸ್ 37ಕ್ಕೆ2). ಆಸ್ಟ್ರೇಲಿಯಾ ಎ ತಂಡಕ್ಕೆ 45 ರನ್ ಜಯ.

ಆಟಗಾರರಿಗೆ ಸಿಗದ ವೀಸಾ: ಪಾಕ್ ಕ್ರೀಡಾ ಸಂಸ್ಥೆಯಿಂದ ದೂರು

ಕರಾಚಿ (ಪಿಟಿಐ): ಬೆಂಗಳೂರಿನಲ್ಲಿ ಶನಿವಾರ ಆರಂಭವಾದ ಐಬಿಎಸ್ ಎಫ್ 18 ವರ್ಷ ಮತ್ತು 21 ವರ್ಷದೊಳಗಿನವರ ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್‌ಲ್ಲಿ ತಮ್ಮ ತಂಡಕ್ಕೆ ಭಾರತ ಹೈಕಮಿಷನ್ ವೀಸಾ ನಿರಾಕರಿಸಿರುವುದನ್ನು ಖಂಡಿಸಿ ಪಾಕಿಸ್ತಾನ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಸಂಸ್ಥೆಯು (ಪಿಬಿಎಸ್‌ಎ), ಅಂತರರಾಷ್ಟ್ರೀಯ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಫೆಡರೇಷನ್ (ಐಬಿಎಸ್‌ಎಫ್) ಮತ್ತು ಭಾರತದ ಆಯೋಜಕರಿಗೆ ಅಧಿಕೃತವಾಗಿ ದೂರು ಸಲ್ಲಿಸಿದೆ.

ತಮ್ಮ ದೇಶದ ಅಹಸಾನ್ ರಮಝಾನ್, ಹಸ್ನೇನ್ ಅಖ್ತರ್ ಮತ್ತು ಹಂಝಾ ಇಲ್ಯಾಸ್ ಅವರಿಗೆ ವೀಸಾ ಸಿಗಲಿಲ್ಲ ಎಂದು ಪಿಬಿಎಸ್‌ಎ ಉನ್ನತ ಅಧಿಕಾರಿ ತಿಳಿಸಿದರು. ‘ಮೂವರು ಸ್ಪರ್ಧಿ ಗಳಿಗೆ ವೀಸಾ ನೀಡುವಂತೆ ನಾವು ಭಾರತದ ಹೈಕಮಿಷನ್‌ಗೆ ಸಕಾಲ ದಲ್ಲಿ ಅರ್ಜಿ ಸಲ್ಲಿಸಿದ್ದೆವು. ಆದರೆ ವೀಸಾ ಸಿಗಲಿಲ್ಲ. ಇದರಿಂದಾಗಿ ನಮ್ಮ ತಂಡ ಬೆಂಗಳೂರಿಗೆ ಪ್ರಯಾಣಿಸಲು ಆಗಲಿಲ್ಲ’ ಎಂದು ಆಲಂಗೀರ್ ಶೇಖ್ ತಿಳಿಸಿದ್ದಾರೆ.

^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ ಹೋಂಡಾ ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com